ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸುಬ್ಬಾರೆಡ್ಡಿಯವರು ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಬೆಂಚ್ ಆಗಬಾರದೆಂದು ವಿರೋಧ ಮಾಡಿ, ಈ ಸದನದಲ್ಲಿ ಅಲ್ಲಿ ಹೈಕೋರ್ಟ್ ಬೆಂಚ್ ಮಾಡಿರುವುದನ್ನು ಸ್ವಾಗತ ಮಾಡುತ್ತಿದ್ದಾರೆ ಇದು ಸರಿಯಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಬೆಂಚ್ ಆಗಬೇಕೆಂದು ಗಲಾಟೆಯಾಗುತ್ತಿದ್ದಾಗ ನಾನು ಸುಪ್ರೀಂ ಕೋರ್ಟ್‌ಗೆ ಹೋಗಿದ್ದು. ನನ್ನ ಮನಸ್ಸಿನಲ್ಲಿರುವುದನ್ನು ಸದನದ ಮುಂದೆ ಹೇಳುತ್ತಿದ್ದೇನೆ. ಅದರಲ್ಲೂ ಹೈಕೋರ್ಟ್ ಬೆಂಚ್ ಉತ್ತರ ಕರ್ನಾಟಕದಲ್ಲಿ ಆಗಬೇಕೆಂದು ಅನೇಕ ರೆಸಲ್ಯೂಷನ್‌ಗಳನ್ನು ಮಾಡಿದ್ದೇವೆ. ನಮ್ಮ ಬಾರ್ ಕೌನ್ಸಿಲ್‌ನಲ್ಲಿ, ಬಾರ್ ಅಸೋಸಿಯೇಷನ್‌ನಲ್ಲಿ, ಫೆಡರೇಷನ್‌ನಲ್ಲಿ ಎಲ್ಲಾ ಕಡೆ ರೆಸಲ್ಯೂಷನ್ ಮಾಡಿದ್ದೇವೆ. ನಾನು ಸುಪ್ರೀಂಕೋರ್ಟ್‌ಗೆ ಹೋಗಿದ್ದು ಆದಷ್ಟುಬೇಗ ಹೈಕೋರ್ಟ್ ಬೆಂಚ್ ಆಗಬೇಕೆಂದು, ನಾವು ಏನು ಮಾಡುವುದು, ಅನೇಕ ಕೇಸುಗಳಿಗೆ ಹೋಗುತ್ತೇವೆ. ಒಂದೊಂದು ಸಲ ವಿರುದ್ಧವಾಗುತ್ತದೆ. ಅದನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ಅವರು ಹೇಳಿರುವ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು ಇವತ್ತು ಆ ಬಗ್ಗೆ ನೀವು ಏನಾದರೂ ಧರಣಿ ಮಾಡಿದರೆ ನಾನೂ ನಿಮ್ಮಜೊತೆ ಕುಳಿತುಕೊಳ್ಳುತ್ತೇನೆ. ಅದಕ್ಕೆ ನಾನು ರೆಡಿಯಾಗಿದ್ದೇನೆ. ಉತ್ತರ ಕರ್ನಾಟಕ ಭಾಗದಲ್ಲಿ ಹೈಕೋರ್ಟ್ ಪೀಠ ಆಗಲೇಬೇಕು.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸುಬ್ಬಾರೆಡ್ಡಿಯವರು ಅಲ್ಲಿ ವಕೀಲವೃತ್ತಿ ಮಾಡಿದರು, ಇಲ್ಲಿ ಶಾಸಕ ವೃತ್ತಿ ಮಾಡುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಸದಾನಂದಗೌಡರ್, ಸುಬ್ಬಾರೆಡ್ಡಿಯವರು ಹೇಳಿದ್ದು ಸರಿಯೋ ಹೇಗೆ?

(ಆ) 2001-2002ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಮುಖ್ಯ ಮಂತ್ರಿಗಳಿಂದ ಉತ್ತರ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 2001-2002ರ ಮುಂಗಡಪತ್ರದ ಬಗ್ಗೆ ಸದನದಲ್ಲಿ ಸುದೀರ್ಘ ಚರ್ಚೆ ನಡೆದಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಚರ್ಚೆಯಾಗಿದೆ. ಈ ಚರ್ಚೆಯಲ್ಲಿ ಭಾಗವಹಿಸಿದಂಥ ಎಲ್ಲಾ ಸದಸ್ಯರುಗಳಿಗೆ ನಾನು ಅಭಾರಿಯಾಗಿದ್ದೇನೆ. ಮುಂಗಡಪತ್ರದ ಬಗ್ಗೆ ನಮ್ಮ ಟೀಕಾತ್ಮಕವಾದಂಥ ದೃಷ್ಟಿಯಿಂದ ಮುಂಗಡಪತ್ರದ ಕೊರತೆಗಳ ಬಗ್ಗೆ ಸದನದ ಗಮನ ಸೆಳೆದಿದ್ದಾರೆ ಮತ್ತು ಎಲ್ಲಿ ಯಶಸ್ಸನ್ನು ಅವರು ಕಂಡರೋ ಅದನ್ನು ಮೆಚ್ಚಿದ್ದಾರೆ. ಯಾವ ಒಂದು ಮುಂಗಡಪತ್ರ ಕೂಡ ಕಳೆದ 51 ವರ್ಷಗಳ ತಮ್ಮ ದೇಶದ, ರಾಜ್ಯದ ಇತಿಹಾಸದಲ್ಲಿ ಸಾರ್ವತ್ರಿಕವಾದಂಥ ಶ್ಲಾಘನೆಗೆ ಒಳಗಾಗಿಲ್ಲ, ಒಳಗಾಗತಕ್ಕಂಥಾದ್ದು ಸಾಧ್ಯವೂ ಇಲ್ಲ. ಏಕೆಂದರೆ ಪ್ರತಿಯೊಬ್ಬರ ದೃಷ್ಟಿಕೋನ ಕೂಡ ಸಾಕಾದಷ್ಟು ವೈಪರಿತ್ಯಗಳನ್ನು ಒಳಗೊಂಡಿರುತ್ತದೆ. ಆ ಕನ್ನಡಕದ ಮೂಲಕ ಪ್ರತಿಯೊಂದು ಬೆಳವಣಿಗೆಯನ್ನೂ ಕೂಡ ನಾವು ವಿಶ್ಲೇಷಣೆ ಮಾಡುತ್ತೇವೆ. ಪ್ರತಿಯೊಂದು ಬಜೆಟ್‌ನಲ್ಲಿ ಅದರದ್ದೇ ಆದ ಒಂದು ಫಿಲಾಸಫಿ ಇರುತ್ತದೆ. ಕಳೆದ ವರ್ಷದ ಆಯವ್ಯಯ ಮುಂದಿನ ಐದು ವರ್ಷಗಳಲ್ಲಿ ಏನೆಲ್ಲಾ ಮಾಡಬಹುದು ಎನ್ನುವ ಒಂದು ಸಿಂಹಾವಲೋಕನ. ಈ ವರ್ಷದ ಆಯವ್ಯಯ

ಪತ್ರ ಅವುಗಳನ್ನು ಹೇಗೆ ನಾವು ಸಾಧಿಸುತ್ತೇವೆ ಎನ್ನುವುದರ ಮುನ್ಸೂಚನೆ. ನಮ್ಮ ರಾಜ್ಯದ ಹಣಕಾಸಿನ ಶಕ್ತಿ ಬಗ್ಗೆ ಹಲವಾರು ಮಾನ್ಯ ಸದಸ್ಯರುಗಳು ಸಂಶಯಗಳನ್ನು ವ್ಯಕ್ತಪಡಿಸಿದ್ದಾರೆ. ನನ್ನ ಭಾಷಣದಲ್ಲೂ ಕೂಡ ನಾನು ಇದರ ಬಗ್ಗೆ ನನ್ನ ಕಳವನ್ನು ಸಹ ಸೇರಿಸಿದ್ದೇನೆ. ಆದ್ದರಿಂದ ಈ ಸರ್ಕಾರದ ದೃಷ್ಟಿ ಎಲ್ಲಾವೂ ಸರಿಯಾಗಿದೆ ಎನ್ನತಕ್ಕಂಥಾದ್ದಲ್ಲ. ಜಾಗ್ರತರಾಗಿರಬೇಕು ಎನ್ನತಕ್ಕಂಥ ಎಚ್ಚರಿಕೆಯ ಗಂಟೆಯನ್ನು ಬಜೆಟ್ ಭಾಷಣದಲ್ಲಿ ನಾವು ಬಾರಿಸಿದ್ದೇವೆ. ಆದರೆ ನಾವು ಬಂದ ಮೇಲೆ ಸಾಲದ ಸುಳಿಗೆ ಈ ರಾಜ್ಯವನ್ನು ಸಿಕ್ಕಿಹಾಕಿಸಿದ್ದೇವೆ ಎನ್ನತಕ್ಕಂಥ ಅನುಮಾನ ಬರತಕ್ಕಂಥ ಮಾತುಗಳನ್ನು ಹೇಳಿದ್ದಾರೆ. ಅದರಲ್ಲಿ ಎಷ್ಟರಮಟ್ಟಿಗೆ ಸತ್ಯವಿದೆ ಎನ್ನತಕ್ಕಂಥಾದ್ದನ್ನು ಕೊಂಚ ನಿರ್ವಿಕಾರ ದೃಷ್ಟಿಯಿಂದ ನಾವು ನೋಡಬೇಕಾಗುತ್ತದೆ. ರಾಜ್ಯಸರ್ಕಾರ ಅಭಿವೃದ್ಧಿ ಕೆಲಸಗಳನ್ನು ಕೇವಲ ಸಾಲ ತರುವುದರ ಮೂಲಕ ಸಾಧಿಸಬೇಕು ಎಂದು ಹೊರಟಿದೆ. ಆದುದರಿಂದ ಈ ಸರ್ಕಾರದಲ್ಲಿ ಹೊಸತನ ಏನೂ ಇಲ್ಲ, ಹೋದವರ್ಷದ ಬಜೆಟ್ಟೇ ಈ ವರ್ಷದ್ದೂ ಕೂಡ ಇದೆ ಎಂದಿದ್ದಾರೆ. ಹಾಗೆ ನೋಡಲಿಕ್ಕೆ ಹೋದರೆ ಎಲ್ಲಾ ಬಜೆಟ್‌ಗಳನ್ನು ಓದಿ ನೋಡಿ ಮೆಲುಕು ಹಾಕಿದರೂ ಎಲ್ಲಾ ಬಜೆಟ್‌ಗಳೂ ಕೂಡ ಒಂದೇರೀತಿ ಇರುತ್ತವೆ. ಅದರಲ್ಲೂ ಕೊನೆಕೊನೆಯಲ್ಲಿ ಓದುವಾಗ ಅವುಗಳು ಒಂದೇ ಮಾದರಿಯಲ್ಲಿರುತ್ತವೆ. ನಮ್ಮ ರಾಜ್ಯದ total expenditure 22600 ಕೋಟಿ ರೂಪಾಯಿಗಳು. Total receipts 17500 ಕೋಟಿ ರೂಪಾಯಿಗಳು. Total borrowings 5100 ಕೋಟಿ ರೂಪಾಯಿಗಳು. ಇವುಗಳನ್ನು ನಾವು 10 ಸಾವಿರ ಕೋಟಿ Taxes revenue 1300 ಕೋಟಿ Non-tax revenue ಮೂರು ಸಾವಿರ ಕೋಟಿ devolution from the Government of India 2100 ಕೋಟಿ grant-in-aid from the Government of India. ಆದ್ದರಿಂದ ಈ ಅಂಕಿಸಂಖ್ಯೆಗಳನ್ನು ತಾವು ಗಮನಿಸುವುದಾದರೆ, ಇದರ ಬಗ್ಗೆ ಗಮನ ಹರಿಸುವುದಾದರೆ ಬಾರೋಯಿಂಗ್ಸ್ ಕೇವಲ 5100 ಕೋಟಿ ರೂಪಾಯಿಗಳು ಎನ್ನತಕ್ಕದ್ದು. Revenue deficits 2624 ಕೋಟಿ ರೂಪಾಯಿಗಳು. ಆದ್ದರಿಂದ ಬಜೆಟ್ full or borrowings ಎನ್ನತಕ್ಕಂಥ ಟೀಕೆಗಳನ್ನು ಹಲವಾರು ಸದಸ್ಯರುಗಳು ಏನು ಮಾಡಿದ್ದಾರೆ ಆ ಟೀಕೆಗಳಲ್ಲಿ ಹುರುಳಿಲ್ಲ, ಆ ಟೀಕೆಗಳಲ್ಲಿ ಸತ್ವವಿಲ್ಲ. ಆ ಟೀಕೆಗಳನ್ನು ಮಾಡುವಾಗ ಮಾಹಿತಿಗಳನ್ನು ಕೊಡತಕ್ಕಂಥಾದ್ದರಲ್ಲಿ ಮಾನ್ಯ ಸದಸ್ಯರುಗಳು ಯಾರು ಈ ಆಪಾದನೆಗಳನ್ನು ಮಾಡಿದರು ಅವರಿಗೆ ಆ ಮಾಹಿತಿಗಳು ಲಭ್ಯತೆ ಇಲ್ಲ ಎನ್ನತಕ್ಕದ್ದು ಸ್ಪಷ್ಟವಾಗುತ್ತದೆ. ಸಾಲ ಇಲ್ಲದೇ ನಡೆಸಿಕೊಂಡು ಹೋಗತಕ್ಕಂಥ ಯಾವುದಾದರೂ ರಾಜ್ಯ ಇದೆಯೇನು? ಯಾವುದಾದರೂ ದೇಶ ಇದೆಯೇನು? ಕೇಂದ್ರ ಸರ್ಕಾರದವರು ಎಷ್ಟು ಸಾಲ ಮಾಡಿದ್ದಾರೆ? ಇಲ್ಲದಿದ್ದರೆ ಕೇಂದ್ರಸರ್ಕಾರವನ್ನು ನಡೆಸಬೇಕಾಗಿಲ್ಲಾ? ನಮ್ಮ ರಕ್ಷಣೆ ಮತ್ತು ಮಿಕ್ಕ ಎಲ್ಲಾ ಬಾಬುಗಳಿಗೆ ಅವರು ವರಮಾನ ಕೊಡಿಸಬೇಕಲ್ಲಾ? ಆದರೆ ಸಾಲ ಮಾಡತಕ್ಕಂಥ ಕಾಲದಲ್ಲಿ ಕೊಂಚ ಜಾಗ್ರತೆತ್ತರಾಗಿ ನಾವು ಸಾಲ ಮಾಡಬೇಕು ಮತ್ತು ಅಸೆಟ್ಸ್‌ನ್ನು ಕ್ರಿಯೇಟ್ ಮಾಡುವುದಕ್ಕೋಸ್ಕರ ನಾವು ಸಾಲ ಮಾಡಬೇಕು. ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್‌ಗೆ ನಾವು ಸಾಲ ಮಾಡಬಾರದು. ಇವತ್ತು ವಿಶ್ವಬ್ಯಾಂಕ್ ಜೊತೆಯಲ್ಲಿ ಸಾಲ ಮಾಡಿದ್ದೀರಿ, ನಬಾರ್ಡ್ ಜೊತೆಯಲ್ಲಿ ಸಾಲ ಮಾಡಿದ್ದೀರಿ, ಹುಡ್ಕೊ ಜತೆಯಲ್ಲಿ ಸಾಲಮಾಡಿದ್ದೀರಿ. ಆದ್ದರಿಂದ ಇದು ಹುಡ್ಕೊ ಬಜೆಟ್, ಇದು ವರ್ಲ್ಡ್‌ಬ್ಯಾಂಕ್ ಬಜೆಟ್, ಇದು ನಬಾರ್ಡ್ ಬಜೆಟ್ ಎಂದು ಹೇಳಿದ್ದಾರೆ. ಹಿಂದಿನ ಸರ್ಕಾರದವರು ಸಾಲ ಮಾಡಿರಲಿಲ್ಲವೇನು? ಬಾಂಡ್‌ಗಳ ಮೂಲಕ

ಕೃಷ್ಣ ಕಣಿವೆಯ ನೀರಾವರಿ ಕೆಲಸಕಾರ್ಯಗಳನ್ನು ಎತ್ತಿಕೊಳ್ಳುವುದಕ್ಕೆ ಸಾಲ ಮಾಡಿಲ್ಲವೇನು? ಆದ್ದರಿಂದ ಸಾಲದ ಬಗ್ಗೆ ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕಂಥ ನಿಮ್ಮ ಪ್ರಯತ್ನ ಯಶಸ್ವಿಯಾಗಿಲ್ಲ. ಯಾರು ಹಿಂದೆ ರಾಜ್ಯಭಾರ ಮಾಡುತ್ತಿದ್ದರು ಅವರೂ ಇದರ ಬಗ್ಗೆ ಸ್ವಲ್ಪ ಕಾಷಸ್ ಆಗಿರಬೇಕಿತ್ತು. ಪಾಪ, ಇವರಿಗೆ ಆ ಚಾನ್ಸ್ ಬಂದಿಲ್ಲ. ನಮ್ಮನ್ನು ಟೀಕೆ ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಇಲ್ಲಿ ಕೂರತಕ್ಕಂಥ ಅವಕಾಶ ನಿಮಗೆ ಸಿಕ್ಕಿಲ್ಲ. ಆದರೆ ಪುಣ್ಯಾತ್ಮರು ಯಾರು ಇಲ್ಲಿ ಕುಳಿತು ಅಲ್ಲಿ ಹೋಗಿದ್ದಾರೆ ಅವರಾದರೂ ಈ ಬಜೆಟ್ ವಿಚಾರದಲ್ಲಿ ಚರ್ಚೆ ಮಾಡತಕ್ಕಂಥ ಕಾಲದಲ್ಲಿ, ಅವರು ಇಲ್ಲಿದ್ದಂಥ ಕಾಲದಲ್ಲಿ ಏನೇನು ಮಾಡಿದರು ಎನ್ನತಕ್ಕಂಥದ್ದರ ಬಗ್ಗೆ ಕೊಂಚ ಗಮನದಲ್ಲಿಟ್ಟುಕೊಂಡು ಟೀಕೆ ಮಾಡಿದ್ದರೆ ಚೆನ್ನಾಗಿ ಇರುತ್ತಿತ್ತು ಎಂದು ನಾನು ಭಾವನೆ ಮಾಡುತ್ತೇನೆ. ರೈತರ ಬಗ್ಗೆ ಈ ಬಜೆಟ್‌ನಲ್ಲಿ ಏನೂ ಇಲ್ಲ ಹಾಗೆ ಎಂದು ಹೇಳಿದರು. ರೈತರ ವಿಚಾರದಲ್ಲಿ ನಿಮಗೆ ಗೊತ್ತಿರತಕ್ಕಂಥಾದ್ದು ಬಡ್ಡಿ ಮನ್ನಾ ಒಂದೇ. ನಿಮಗೆ ಇನ್ನೇನೂ ಗೊತ್ತಿಲ್ಲ. ಬಡ್ಡಿ ಮನ್ನಾ ಮಾಡಿಬಿಟ್ಟರೆ ರೈತರ ಕಷ್ಟಕಾರ್ಪಣ್ಯಗಳು ದೂರ ಆಗಿಹೋಗುತ್ತವೆ ಎನ್ನತಕ್ಕಂಥ ಒಂದು ಸೀಮಿತವಾದಂಥ ದೃಷ್ಟಿ ನಿಮ್ಮದು. ಆದರೆ ನಮ್ಮ ದೃಷ್ಟಿ ಹಾಗಲ್ಲ. ನಮ್ಮ ದೃಷ್ಟಿ ರೈತರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಬಡ್ಡಿ ಮನ್ನಾದಿಂದ ಅಥವಾ ಬಡ್ಡಿ ಮನ್ನಾವೊಂದೇ ಸಂಜೀವಿನಿ ಎಂದು ಈ ಸರ್ಕಾರದವರು ಭಾವಿಸಿಲ್ಲ. ರೈತರ ಹತ್ತು ಹಲವಾರು ಸಮಸ್ಯೆಗಳನ್ನು ನಾವು ಪರಿಹರಿಸಲಿಕ್ಕೆ ಹತ್ತು ಹಲವಾರು ವಿಧಾನಗಳನ್ನು ಯೊಚನೆ ಮಾಡಬೇಕು.

11.10 ಎ.ಎಂ.

ಯಾರ ಕಾಲದಲ್ಲಿ 100-200-400 ಕೋಟಿ ರೂಪಾಯಿಗಳ ಆವರ್ತ ನಿಧಿ ಬಗ್ಗೆ ಯೋಚನೆ ಮಾಡಿದ್ದರು? ಖರ್ಚು ಮಾಡಿರುವುದು ಎಷ್ಟು ಎಂದು ಹೇಳಿದರು. ಯಾವುದಾದರೊಂದು ಅಬ್ ನಾರ್ಮಲ್ ಸಿಚ್ಯುಯೇಷನ್ ಅಗ್ರಿಕಲ್ಚರ್ ಕ್ಷೇತ್ರದಲ್ಲಿ ಅಥವಾ ಮತ್ತಾವುದೇ ಕ್ಷೇತ್ರದಲ್ಲಿ ಬಂದಾಗ ಅದಕ್ಕೆ ತತ್‌ಕ್ಷಣ ಒಂದು ಚುಚ್ಚುಮದ್ದನ್ನು ಕೊಟ್ಟು ಆ ಖಾಯಿಲೆ ವ್ಯಾಪಕವಾಗದ ರೀತಿಯಲ್ಲಿ ತಡೆಯಲಿಕ್ಕೆ ನಾವು ಪ್ರಯತ್ನಗಳನ್ನು ಮಾಡಬೇಕು. ಆ ದಿಸೆಯಲ್ಲಿ ಪ್ರಯತ್ನಗಳನ್ನು ಮಾಡಲಿಕ್ಕೋಸ್ಕರವೇ ಮೊದಲು ನೂರು ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ಸ್ಥಾಪನೆ ಮಾಡಿದೆವು. ದುಡ್ಡು ಎಲ್ಲಿಟ್ಟಿದ್ದೀರಿ, ನಮಗೆ ತೋರಿಸಿ ಎಂದರು. ಆಡಳಿತ ಮಾಡದೇ ಇದ್ದವರು ತೋರಿಸಿ ಎಂದು ಹೇಳಿದ್ದರೆ ನಾನು ಒಪ್ಪುತ್ತಿದ್ದೆ. ಆದರೆ ಹಿಂದೆ ಆಡಳಿತ ಮಾಡಿರತಕ್ಕಂಥವರು, ತೋರಿಸಿ ಎಂದು ಹೇಳುವುದು ಮತ್ತು ಬರೀ 13 ಕೋಟಿ ಖರ್ಚು ಮಾಡಿದ್ದೀರಿ ಎಂದು ಹೇಳಿದ್ದಾರೆ. ರೈತ ಸಮುದಾಯದಲ್ಲಿ, ಅವರ ಆತ್ಮ ವಿಶ್ವಾಸವನ್ನು ಗಟ್ಟಿ ಮಾಡಿಕೊಳ್ಳತಕ್ಕ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ಘೋಷಣೆ ಮಾಡುತ್ತೇವೆ. ಕಳೆದ ಹದಿನೈದು ತಿಂಗಳಲ್ಲಿ, ಕೆಲವೊಂದು ಕಾರ್ಯಕ್ರಮದ ಘೋಷಣೆ ಮಾತ್ರದಿಂದಾಗಿ ನಾವು ನಿರೀಕ್ಷಿಸಿದ ಫಲ ರೈತರಿಗೆ ಸಿಕ್ಕಿರತಕ್ಕ ಉದಾಹರಣೆಗಳೂ ಇವೆ. ಆದರೆ, ಇನ್ನೊಮ್ಮೆ ನಾವು ಎಷ್ಟೇ ಘೋಷಣೆಗಳನ್ನು ಮಾಡಿದರೂ ಕೂಡ, ಈ ಮೆಕ್ಕೆಜೋಳದ ಪರಿಸ್ಥಿತಿಯನ್ನು ಗಮನಿಸಿದಾಗ, ನಾವು ಇಂಟರ್‌ವಿನ್ ಮಾಡದ ಹೊರತು ನಾವು ರೈತರಿಗೆ ಸಹಾಯ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ, ಯಾವುದೇ ಸರ್ಕಾರ ಇರಲಿ, ಆ ಸರ್ಕಾರ ತನ್ನ ಪೀಠದಿಂದ, ಅಧಿಕಾರ ಸ್ಥಾನದಿಂದ ಏನು ಕಾರ್ಯಕ್ರಮಗಳನ್ನು ಘೋಷಣೆ ಮಾಡುತ್ತದೆ, ಅದಕ್ಕೆ ಸಾಕಾದಷ್ಟು ರಿಸೋರ್ಸ್ ಪ್ರೊಸಿಷನ್

ಕೂಡ ಮಾಡಬೇಕು. ಎ.ಪಿ.ಎಂ.ಸಿ. ಬಗ್ಗೆ ಮಾತನಾಡುತ್ತಾ, ದುಡ್ಡು ಅವರದು, ನಿಮ್ಮದೇನು ಎಂದು ಕೆಲವರು ಹೇಳಿದರು. ಆದರೆ ಹಾಗೆ ಆ ನೋಟಿನ ಮೇಲೆ ಬರೆದಿದೆಯೇನು? ಈ ಇದು ಎ.ಪಿ.ಎಂ.ಸಿ. ನೂರು ರೂಪಾಯಿ, ಇನ್ನೊಂದು ಎಸ್.ಎಂ. ಕೃಷ್ಣನ ನೂರು ರೂಪಾಯಿ ಎಂದು ನೋಟ್ ಮೇಲೆ ಬರೆದಿದೆಯೇನು? ಸರ್ಕಾರ, It is a catalyst; it is a falicitator ಉದಾಹರಣೆಗೆ ಎರಡು ಪರ್ಸೆಂಟ್ ಬಡ್ಡಿ ಮಾಡುವುದಕ್ಕೆ ನಾವು ಏರ್ಪಾಡು ಮಾಡುತ್ತೇವೆ ಎಂಬ ಬಗ್ಗೆ ಅಪೆಕ್ಸ್ ಬ್ಯಾಂಕಿನವರ ಜೊತೆಯಲ್ಲಿ ಮಾತನಾಡಿದ್ದೇವೆ. ಮತ್ತು ಡಿಸ್ಟ್ರಿಕ್ಟ್ ಕೋ ಆಪರೇಟಿವ್ ಬ್ಯಾಂಕುಗಳವರ ಜೊತೆಯಲ್ಲಿ ಈಗಾಗಲೇ ನಮ್ಮ ಮಾತುಕತೆಗಳನ್ನು ಪ್ರಾರಂಭಿಸಿದ್ದೇವೆ. ಅದು ಹೇಗೆ ಆಗುತ್ತದೆ? 1983ನೇ ಇಸವಿಯಲ್ಲಿ ನೀವು ಬಡ್ಡಿ ಮನ್ನಾ ಮಾಡಿದರಲ್ಲಾ, ಅದರಿಂದ ನಮ್ಮ ಇಡೀ ಸಹಕಾರಿ ಕ್ಷೇತ್ರಕ್ಕೆ ಆಗಿರತಕ್ಕ ಅಪಘಾತದಿಂದ ಇವತ್ತೂ ಕೂಡ ಸಹಕಾರಿ ಸಂಸ್ಥೆಗಳು ಚೇತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿವೆ. ಆದರೆ,, ಚೇತರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಸಹಕಾರಿ ಕ್ಷೇತ್ರವನ್ನು ಉಳಿಸಬೇಕೇ, ರೈತರನ್ನು ಉಳಿಸಬೇಕೇ ಎನ್ನುವ ಪ್ರಶ್ನೆಗಿಂತಲೂ ಕೂಡ ಸಹಕಾರಿ ಕ್ಷೇತ್ರವನ್ನು ಸದೃಢ ಮಾಡಬೇಕು ಮತ್ತು ರೈತರನ್ನೂ ನಾವು ಸಂಭಾವಿಸಬೇಕು. ಈ ದಿಕ್ಕಿನಲ್ಲಿ ನಮ್ಮ ನಿಮ್ಮ ದೃಷ್ಟಿ ಕೇಂದ್ರೀಕೃತವಾಗಬೇಕಾಗಿರುವುದು ಬಹಳ ಅವಶ್ಯಕತೆ ಇದೆ. ಈ ಬಜೆಟ್‌ನ ಫೋಕಸ್ ಯಾವುದು? ಅಗ್ರಿಕಲ್ಚರ್, ರೂರಲ್ ಡೆವಲಪ್‌ಮೆಂಟ್ ಇನ್‌ಫ್ರಾಸ್ಟ್ರಕ್ಚರ್, ಹೌಸಿಂಗ್, ರೋಡ್ಸ್, ವಾಟರ್ ಸಪ್ಲೈ, ಪವರ್, ರೀಜಿನಲ್ ಡೆವಲಪ್‌ಮೆಂಟ್ ಮತ್ತು ಗವರ್ನನ್ಸ್. ಆಡಳಿತ ಚುರುಕಾಗಿರಬೇಕು ಹಾಗೆ ಎಂದು. ಅಗ್ರಿಕಲ್ಚರ್ ಮತ್ತು ರೂರಲ್ ಡೆವಲಪ್‌ಮೆಂಟಿಗೆ ಹೆಚ್ಚು ಒತ್ತು ಕೊಡಬೇಕೆಂಬುದರಲ್ಲಿ ಸದನದಲ್ಲಿ ಸಂಪೂರ್ಣವಾದ ಸರ್ವಾನುಮತ ಇದೆ. ಆದರೆ ಇದನ್ನು ಅಜೀವ್ ಮಾಡಬೇಕೆನ್ನುವುದರ ಬಗ್ಗೆ ಅಲ್ಲಲ್ಲಿ ಕೆಲವು ಒಡಕು ಧ್ವನಿಗಳು ಬರುತ್ತವೆ. "ರೈತ ಕಲ್ಯಾಣ ನಿಧಿ" ಎಂದು ಸ್ಥಾಪನೆ ಮಾಡಿದ್ದೇವೆ. ಆ ರೈತ ಕಲ್ಯಾಣ ನಿಧಿಗೆ ಇನ್ನೂ ಸಾಂಘಿಕ ಚೌಕಟ್ಟನ್ನು ನಾವು ಕಲ್ಪಿಸಿಕೊಡಬೇಕಾಗಿದೆ. ಅದಕ್ಕೆ ಪ್ರಯತ್ನಗಳನ್ನು ಮಾಡುತ್ತಾ ಇದ್ದೇವೆ. ಎ.ಪಿ.ಎಂ.ಸಿ. ಗಳಿಗೆ ನಾವು ಹೆಚ್ಚು ಅಧಿಕಾರಗಳನ್ನು ಕೊಡುತ್ತಿದ್ದೇವೆ. ನಾನು, ನನ್ನ ಬಜೆಟ್ ಭಾಷಣದಲ್ಲಿ ಹೇಳಿದೆ. ಹೇಗೆ ಗ್ರಾಮ ಸ್ವರಾಜ್ಯ, ನಮ್ಮ ಜನತಂತ್ರದ ಚೌಕಟ್ಟನ್ನು ಬಲಪಡಿಸುತ್ತದೆ. ಫ್ಯಾಬ್ರಿಕ್‌ನ್ನು ಬಲಪಡಿಸುತ್ತದೆ ಹಾಗೆಯೇ ನಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಈ ಕೋ ಆಪರೇಟಿವ್ ಚೌಕಟ್ಟು ಅದು ಸದೃಢ ಮಾಡಬೇಕೆಂಬ ದೃಷ್ಟಿಯಿಂದ. ಆದ್ದರಿಂದ, ಅವರಿಗೆ ಹೆಚ್ಚು ಅಧಿಕಾರಗಳನ್ನು ಕೊಡಬೇಕು. ಈಗ ಎ.ಪಿ.ಎಂ.ಸಿ.ಗಳು ಪ್ರೊಕ್ಯೂರ್‌ಮೆಂಟ್ ಕೆಲಸದಲ್ಲಿ, ಅವರನ್ನು ನೇರವಾಗಿ ತೊಡಗಿಸಬೇಕು ಎನ್ನುವ ವಾದದಲ್ಲಿ ನಾವು ಕಂಡಿರತಕ್ಕಂಥ ಅರ್ಥ ಏನೆಂದರೆ ಆಗ ಅವರಿಗೆ ಅಕೌಂಟಬಿಲಿಟಿ ಇರುತ್ತದೆ. ಅವರೇ ನೇರವಾಗಿ ಮೆಕ್ಕೆಜೋಳವನ್ನಾಗಲೀ, ಈರುಳ್ಳಿಯನ್ನಾಗಲೀ ಅಥವಾ ಟೊಮ್ಯಾಟೋ ಆಗಲೀ ಅಥವಾ ರೈತ ಬೆಳೆಯುತಕ್ಕ ಮತ್ತಾವುದೇ ಪದಾರ್ಥಗಳನ್ನು ಕೊಂಡುಕೊಳ್ಳುತಕ್ಕ ಅಧಿಕಾರ ಎ.ಪಿ.ಎಂ.ಸಿ. ಗಳಿಗೆ ಇರಬೇಕೆಂಬ ದೃಷ್ಟಿಯಿಂದ ನಾವು ಈ ಪ್ರಯತ್ನಗಳನ್ನು ಮಾಡುತ್ತಾ ಇದ್ದೇವೆ. ಇದೊಂದು ಪ್ರಯೋಗವೆಂದು ತಾವು ಭಾವಿಸಬಹುದು. ಗ್ರಾಮಪಂಚಾಯ್ತಿಗಳಿಗೆ ಹೆಚ್ಚು ಅಧಿಕಾರವನ್ನು ಕೊಡಲಿಕ್ಕೆ ಈ ಮುಂಗಡಪತ್ರದಲ್ಲಿ ಹೇಗೆ, ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ ಇವೂ ಕೂಡ ಆ ಗ್ರಾಮ ಪಂಚಾಯ್ತಿಗಳ ಬೇಸನ್ನು ಭದ್ರ ಮಾಡತಕ್ಕಂಥ ದೃಷ್ಟಿಯಿಂದ ಮಾಡುತ್ತಿದ್ದೇವೆ. ಒಂದು ಬಜೆಟ್ ವೈಜ್ಞಾನಿಕವಾಗಿದೆಯೋ ಅಥವಾ

ಅವೈಜ್ಞಾನಿಕವಾಗಿದೆಯೋ ಎನ್ನತಕ್ಕಂತಾದ್ದರ ಬಗ್ಗೆ ಹೆಚ್ಚು ವಿಮರ್ಶೆಗೆ ಬಂದಿದ್ದೇವೆ. ಉದಾಹರಣೆಗೆ ಸ್ಟೇಟ್ ಅಗ್ರಿಕಲ್ಚರಲ್ ಪ್ರೈಸಸ್ ಕಮಿಷನ್ ಮಾಡಬೇಕೆಂದು ಹೊರಟಿದ್ದೇವೆ. ಇದು ಸ್ವಾಗತಾರ್ಹವಾದಂಥ ಬೆಳವಣಿಗೆ ಅಲ್ಲವೇ? ತಾವು ಇಲ್ಲಿದ್ದಾಗ ಏನು ಹೇಳಿದ್ದಿರಿ. ಗವರ್ನಮೆಂಟ್ ಆಫ್ ಇಂಡಿಯಾ ಮಾಡತಕ್ಕಂಥ ಅಗ್ರಿಕಲ್ಚರಲ್ ಪ್ರೈಸಸ್ ಕಮಿಷನ್ ಗ್ರೌಂಡ್ ರಿಯಾಲಿಟೀಸ್‌ಗೆ ಅದು ಸ್ಪಂದಿಸಿಲ್ಲವೆಂದು ಸರ್ಕಾರ ನಡೆಸಿದವರೆಲ್ಲರ ಒಟ್ಟಾರೆ ಅನುಭವವಾಗಿದೆ. ಆದ್ದರಿಂದ, ನಮ್ಮದ್ದೇ ಆದಂಥ ಅಗ್ರಿಕಲ್ಚರಲ್ ಪ್ರೈಸಸ್ ಕಮಿಷನ್ ಇದ್ದರೆ ನಮ್ಮ ಗ್ರೌಂಡ್ ರಿಯಾಲಿಟೀಸ್‌ನ್ನು ಅರ್ಥಮಾಡಿಕೊಂಡು ರಿಪೋರ್ಟ್ ಬರೆಯುವುದನ್ನು ಅಥವಾ ಸರ್ಕಾರಕ್ಕೆ ಸೂಕ್ತವಾದಂಥ ಗೈಡ್‌ಲೈನ್ಸ್ ಕೊಡತಕ್ಕ ಒಂದು ಮೆಕಾನಿಸಂನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ. ಇಂತಹ ಇನ್ನೋವೇಟಿವ್ ಅಪ್ರೋಚಸ್‌ಗೆ ನೀವು ಸ್ವಾಗತ ಮಾಡಬಹುದಾಗಿತ್ತು. ಆ ವಿಚಾರವನ್ನು ಯಾರೂ ಕೂಡ ಪ್ರಸ್ತಾಪ ಮಾಡಿದಹಾಗೆ ಕಾಣಲಿಲ್ಲ.

ಶ್ರೀ ಪಿ..ಜಿ.ಆರ್. ಸಿಂಧ್ಯ : ನಾವು ಅನೇಕ ವಿಚಾರಗಳ ಬಗ್ಗೆ ಮಾತನಾಡಿರುವುದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ನಾವು ಏನೆಲ್ಲಾ ವಿಚಾರಗಳನ್ನು ಸ್ವಾಗತ ಮಾಡಬಹುದೋ ಅವುಗಳ ಪಟ್ಟಿಯನ್ನು ಮಾಡಿ ಸ್ಪಷ್ಟವಾಗಿ ಅನೇಕ ವಿಚಾರಗಳನ್ನು ಸ್ವಾಗತ ಮಾಡಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್.ಎಂ. ಕೃಷ್ಣ : ಸ್ವಾಗತ ಮಾಡಿದ್ದೀರಿ, ಕ್ರಿಟಿಕಲ್ ಆಗಿ ಅನಲೈಸ್ ಮಾಡಿದ್ದೀರಿ. ನೀವು ಸ್ವಾಗತ ಮಾಡಿದ್ದಕ್ಕೂ ಧನ್ಯವಾದಗಳು, ಟೀಕೆ ಮಾಡಿದ್ದಕ್ಕೂ ಧನ್ಯವಾದಗಳು ಎಂದು ನನ್ನ ಭಾಷಣದ ಮೊದಲನೇ ಭಾಗದಲ್ಲೇ ಹೇಳಿದ್ದೇನೆ. ನೀವು ಸ್ವಾಗತ ಮಾಡಿದ್ದೀರಿ, ನಿಜ. ಏಕೆಂದರೆ ಗ್ರಾಮಪಂಚಾಯಿತಿಗಳಿಗೆ ಮೂರುವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿರತಕ್ಕಂತಾದ್ದನ್ನು ಸ್ವಾಗತ ಮಾಡದೇ ಬೇರೆ ಏನೂ ಮಾಡಲಿಕ್ಕೆ ಬರುವುದಿಲ್ಲ. ಅದನ್ನು ಸ್ವಾಗತಿಸಿದ್ದೀರಿ. ಅದರಿಂದ ನಾನು ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಆದರೆ Agricultural prices Commission, is it not a mechanism which is well worth trying it out?

ಶ್ರೀ ಸಿ. ಭೈರೇಗೌಡ : ಇದನ್ನು ಮೊದಲನೇ ಸಾರಿ ಈ ರಾಜ್ಯದಲ್ಲಿ ಮಾಡಿರತಕ್ಕಂತಾದ್ದಲ್ಲ. ಹಿಂದೆಯೂ ಕೂಡ ರಾಜ್ಯದಲ್ಲಿ ಅಗ್ರಿಕಲ್ಚರಲ್ ಪ್ರೈಸಸ್ ಕಮಿಷನ್‌ನ್ನು ಮಾಡಿದ್ದರು. ಇದನ್ನು ಮಾಡಿ, ಶಿಫಾರಸ್ಸನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕ ಕೆಲಸವನ್ನು ರಾಜ್ಯ ಸರ್ಕಾರ ಮಾಡಿತೇ ವಿನಃ ಅದನ್ನು ಕಾರ್ಯಗತ ಮಾಡುವುದಕ್ಕೆ ಅವಕಾಶ ಇಲ್ಲ. ಇದು, ಹಿಂದೆ ಇದ್ದದ್ದು. ಅದರಿಂದ ಕೆಲಸ ಆಗಲಿಲ್ಲವೆನ್ನುವ ಕಾರಣಕ್ಕೋಸ್ಕರ, ಅದನ್ನು ಕೈಬಿಟ್ಟಿರತಕ್ಕಂತಾದ್ದು. ಶಂಕರಿಕೊಪ್ಪ ಎಂಬುವರ ಅಧ್ಯಕ್ಷತೆಯಲ್ಲಿ, ಇದನ್ನು ಮಾಡಿದ್ದು ಉಂಟು. ಆಗ ರಾಜ್ಯಸರ್ಕಾರ ಈ ವರದಿಯನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿ, ಇದನ್ನು ಕಾರ್ಯಗತ ಮಾಡಿ ಎಂದು ಹೇಳಿದರು. ಇದನ್ನು ಮಾಡುವುದರಿಂದ ಏನಾಗುತ್ತದೆಂದರೆ, ಅಗ್ರಿಕಲ್ಚರಲ್ ಕಮಾಡಿಟೀಸನ್ನು ಒಂದುಕಡೆಯಿಂದ ಇನ್ನೊಂದು ಕಡೆಗೆ ಮೂವ್‌ಮೆಂಟ್ ಆಗಬಾರದು ಎನ್ನುವ ನಿರ್ಬಂಧವೇನೂ ಇಲ್ಲ. ಇವತ್ತು ನಾವೊಂದು ಬೆಲೆ ನಿಗದಿಪಡಿಸಿದ್ದರೆ, ಪಕ್ಕದ ರಾಜ್ಯಗಳಲ್ಲಿರತಕ್ಕಂಥವರು ಇಲ್ಲಿಗೆ ಅದನ್ನು ಕಳುಹಿಸತಕ್ಕ ವ್ಯವಸ್ಥೆ ಮಾಡುತ್ತಾರೆ. ಭತ್ತ ತಮಿಳುನಾಡಿನಲ್ಲಿ ಬೆಳೆಯುತ್ತಾರೆ, ಆಂಧ್ರದಲ್ಲಿ ಬೆಳೆಯುತ್ತಾರೆ, ಭತ್ತಕ್ಕೆ ನಾವು ಒಂದು ಬೆಲೆಯನ್ನು ನಿಗದಿಪಡಿಸಿದರೆ, ತಮಿಳು ನಾಡಿನಿಂದಲೂ

ಭತ್ತ ಇಲ್ಲಿಗೆ ಬರುತ್ತದೆ. ಆಂಧ್ರಪ್ರದೇಶದಿಂದ ಸಹ ಭತ್ತ ಇಲ್ಲಿಗೆ ಬರುತ್ತದೆ. ಅದು ಅನ್ ಪ್ರಾಕ್ಟಿಕಬಲ್ ಎನ್ನತಕ್ಕಂಥ ಕಾರಣಕ್ಕೋಸ್ಕರ ಅದನ್ನು ಕೈ ಬಿಟ್ಟಿರತಕ್ಕಂಥಾದ್ದು. ಇದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, ಅಗ್ರಿಕಲ್ಚರಲ್ ಪ್ರೈಸಸ್ ಕಮಿಷನ್, ಅಗ್ರಿಕಲ್ಚರ್ ಸ್ಟೇಟ್ ಸಬ್ಜೆಕ್ಟ್. ಆದರೆ ಭತ್ತ ಎಲ್ಲಾ ರಾಜ್ಯಗಳಲ್ಲಿ ಬೆಳೆಯುತ್ತಾರೆ. ಹಿಂದೆ ಅಗ್ರಿಕಲ್ಚರಲ್ ಪ್ರೈಸಸ್ ಕಮಿಷನ್ ಮಾಡಿದಂತಹ ಕಾಲದಲ್ಲಿ Agriculture was not in as much of a crisis as it is today. ಆದ್ದರಿಂದ ಈ ಕ್ರೈಸಿಸ್ ಇರತಕ್ಕಂಥ ಕಾಲದಲ್ಲಿ ನಾವು ನಮ್ಮದೇ ಆದಂತಹ ಅಗ್ರಿಕಲ್ಚರಲ್ ಪ್ರೈಸಸ್ ಕಮಿಷನ್‌ನ್ನು ಹೊಸದಾಗಿ ಮಾಡತಕ್ಕಂಥಾದ್ದು ಅಲ್ಲ. ಇರತಕ್ಕಂಥ ಅಧಿಕಾರಿಗಳನ್ನೇ ನೇಮಕ ಮಾಡಿ ಅದಕ್ಕೆ ಒಂದು ಸ್ಥಾನೀಕ ಚೌಕಟ್ಟನ್ನು ನಿರ್ಮಾಣ ಮಾಡಿ ಅವರು Let them conduct field experiments ಆ ನಂತರ ರಾಜ್ಯ ಸರ್ಕಾರಕ್ಕೆ ಕೊಟ್ಟರೆ, ರಾಜ್ಯ ಸರ್ಕಾರ from the position of strength it could deal with the Government of India. ಆದ್ದರಿಂದ ಆ ಪ್ರಯತ್ನ ಮಾಡುತ್ತಿದ್ದೇವೆ. ಈ ಪ್ರಯತ್ನದಲ್ಲಿ ಸಾಫಲ್ಯ ಸಿಕ್ಕಿದರೆ ಅದು ರಾಜ್ಯಕ್ಕೆ ಅನುಕೂಲವಾಗುತ್ತದೆ. ಇನ್ನು ವಿದ್ಯುತ್ ಸುಧಾರಣೆಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಸದನದಲ್ಲಿ ಎರಡು ಅಭಿಪ್ರಾಯಗಳು ಇಲ್ಲ. ಆದರೆ ಎಲ್ಲರನ್ನೂ ಬಾಧಿಸುತ್ತಾ ಇರತಕ್ಕಂಥಾದ್ದು, ಕೇಂದ್ರ ಸರ್ಕಾರವನ್ನು ಬಾಧಿಸುತ್ತಾ ಇರತಕ್ಕಂಥಾದ್ದು, ಅಲ್ಲಿ ಟ್ರಾನ್ಸ್‌ಮಿಷನ್ ಲಾಸಸ್. ಅಲ್ಲಿ ನಡೆಯುತ್ತಾ ಇರತಕ್ಕಂಥ ಕಳ್ಳತನ. ಅಲ್ಲಿ ನಡೆಯುತ್ತಾ ಇರತಕ್ಕಂಥ ಇನ್ನುಳಿದ ಸೋರಿ ಹೋಗುತ್ತಾ ಇರತಕ್ಕಂಥ ಈ ಕರೆಂಟ್. ಅದನ್ನು ತಡೆಗಟ್ಟುವಂತಹ ಬಗೆ ಹೇಗೆ ಎನ್ನತಕ್ಕಂಥದ್ದನ್ನು ಈಗಾಗಲೇ ಪ್ರಧಾನ ಮಂತ್ರಿಗಳು ಅತ್ಯಂತ ಉನ್ನತ ಮಟ್ಟದ ಮುಖ್ಯಮಂತ್ರಿಗಳ ಸಭೆಯನ್ನು ಕರೆಸಿ ಆ ಸಭೆಯಲ್ಲಿ ನಾವು ಈಗಾಗಲೇ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ. ಆ ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವುದರ ಮೂಲಕ ನಮ್ಮ ಟ್ರಾನ್ಸ್‌ಮಿಷನ್ ಲಾಸಸ್ ಅನ್ನು ಉತ್ತರೋತ್ತರ ಕಡಿಮೆ ಮಾಡಬೇಕೆನ್ನುವ ದೃಷ್ಟಿಯಲ್ಲಿ ನಮ್ಮ ವಿದ್ಯುತ್ ಮಂಡಲಿ ಮುಂದೆ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿದೆ. ಈ ವರ್ಷ ನಮ್ಮ ರೂರಲ್ ಟ್ರಾನ್ಸ್‌ಮಿಷನ್ ಇಂಪ್ರೂವ್‌ಮೆಂಟ್‌ಗೋಸ್ಕರ ಸುಮಾರು 700-800 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಈ ಅಕ್ಸಿಲಿಲೇಟೆಡ್ ಪವರ್ ಡೆವಲಪ್‌ಮೆಂಟ್ ಸ್ಕೀಮ್ ಪ್ರಕಾರ ಸುಮಾರು 291 ಕೋಟಿ ರೂಪಾಯಿಗಳನ್ನು ಈ ವರ್ಷ ನಮಗೆ ಕೊಡುತ್ತಿದ್ದಾರೆ. ಅದರ ಮೂಲಕ ಕೆಲವು ಜಿಲ್ಲೆಗಳಲ್ಲಿ ನಾವು ಈ ಗ್ರಿಡ್ ಇಂಪ್ರೂವ್‌ಮೆಂಟ್ಸ್ ಗ್ರಿಡ್ ಸ್ಟೆಬಿಲೈಜ್ ಮಾಡುವುದಕ್ಕೆ ನಾವು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಮೇ ತಿಂಗಳಿನಿಂದ ರಾತ್ರಿ ಹೊತ್ತು ಮೂರು ಫೇಸ್ ಪವರನ್ನು ರಾತ್ರಿ 10 ಗಂಟೆಯಿಂದ 6 ಗಂಟೆಯವರೆಗೂ ಕೊಡುತ್ತೇವೆಂದು ಹೇಳಿದ್ದೇವೆ. ಎಲ್ಲಿಂದ ತರುತ್ತೀರಿ ವಿದ್ಯುತ್ತನ್ನು ಹಾಗೆ ಎಂದು ಕೇಳಿದರು. ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳಿಂದ ತರಬೇಕಾಗುತ್ತದೆ, ಇನ್ನು ಎಲ್ಲಿಂದಲೂ ತರುವುದಕ್ಕೆ ಆಗುವುದಿಲ್ಲ. ನಮ್ಮ ಉತ್ಪಾದನಾ ಕೇಂದ್ರ ಇಲ್ಲದಿದ್ದರೆ ಸೆಂಟ್ರಲ್ ಗೌರ್ನಮೆಂಟ್‌ನವರು ನಮಗೆ ಏನು ವಿದ್ಯುತ್ ಕೊಡುತ್ತಾರೆ. 600-700-800 ಮೆಗಾವಾಟ್ಸ್ ಅಲ್ಲಿಂದ ತರಬೇಕಾಗುತ್ತದೆ. ಆದರೆ ಇದರ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕೇ ಅಥವಾ ಬೇರೆ ಯಾವುದಾದರೂ ಮಾರ್ಗ ಇದೆಯೇ

ಎನ್ನತಕ್ಕಂಥಾದ್ದನ್ನು ತಾವು ನನಗೆ ಹೇಳಿಕೊಡಬೇಕು. ಬೇರೆ ಯಾವುದಾದರೂ ಮಾರ್ಗ ಇದೆಯೇ? ಮೇ ತಿಂಗಳಲ್ಲಿ ಯಾರಿಗೆ ಬೇಕು ವಿದ್ಯುಚ್ಛಕ್ತಿ ಎಂದು ಕೇಳಿದರು. ಇಲ್ಲ ಅದಕ್ಕೆ ಸ್ನೇಹಿತರು ಹೇಳಿದರು, ಮೇ ತಿಂಗಳು ಆದ ಮೇಲೆ ಬಾಕಿ ತಿಂಗಳುಗಳು ಬರುತ್ತವೆ ಅಂತ. ಅವರಿಗೆ ನಾವು ಅಷ್ಟು ಕಾಲಾವಕಾಶವನ್ನು ಕೊಡುತ್ತಿದ್ದೇವೆ. ಮುಂದಿನ ಫೆಬ್ರವರಿ ಅದನ್ನು ಗಮನದಲ್ಲಿ ಇಟ್ಟುಕೊಂಡು ನಾವು ಮೇ ತಿಂಗಳಿನಿಂದ ಪ್ರಾರಂಭ ಮಾಡಿ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಇರುವ ರೈತಾಪಿ ಜನಗಳಿಗೆ ಇದುವರೆವಿಗೂ ನಾವು ಏನು ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಸರ್ಕಾರಗಳು ಎಷ್ಟೇ ಕಾರ್ಯಕ್ರಮಗಳು ಆಗಿಂದಾಗ್ಗೆ ಬಂದರೂ ಕೂಡ ನಾವು ಆ ಕೊನೆಯ ರೈತನ ಭವಣೆಯನ್ನು ನಿವಾರಣೆ ಮಾಡುವುದರಲ್ಲಿ ನಾವು ವಿಫಲರಾಗಿದ್ದೇವೆ ಎನ್ನುವುದನ್ನು ಒಪ್ಪಿಕೊಂಡು ಇನ್ನು ಮೇಲಾದರೂ ಕೂಡ ಆ ಗ್ರಾಮೀಣ ಪ್ರದೇಶದ ರೈತಾಪಿ ಜನಗಳಿಗೆ ಕೊಂಚ ನೆಮ್ಮದಿಯನ್ನು ದೊರಕಿಸಿಕೊಡುವುದಕ್ಕೆ ಪ್ರಯತ್ನವನ್ನು ಮಾಡತಕ್ಕಂಥಾದ್ದು, ಸರಿಯೇ ಇಲ್ಲವೇ ಎನ್ನತಕ್ಕಂಥ ವಿಚಾರ. ಡೆಫಿಸಿಟ್ ವಿಚಾರ ಮಾತನಾಡತಕ್ಕಂಥ ಕಾಲದಲ್ಲಿ ಮಾನ್ಯ ಸದಸ್ಯರು ಒಂದು ವಿಚಾರವನ್ನು ಮರೆತಿದ್ದಾರೆಂದು ಕಾಣುತ್ತದೆ. ನಮ್ಮ ವಿದ್ಯುತ್ ಸಬ್ಸಿಡಿಗೆ ನಾವು ಈ ಸಾರಿ ಈ ಮುಂಗಡ ಪತ್ರದಲ್ಲಿ 2000 ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೇವೆ. ಹಿಂದಿನ ಬಜೆಟ್‌ನಲ್ಲಿ ನಾವು ಒದಗಿಸಿ ಕೊಟ್ಟಿದ್ದು 900 ಕೋಟಿ ರೂಪಾಯಿಗಳು. ಈ ಸಾರಿ 2000 ಕೋಟಿಗೂ ಹೆಚ್ಚು ನಾವು ಈ ವಿದ್ಯುತ್ ಸಬ್ಸಿಡಿಗೋಸ್ಕರ ನಾವು ಬಜೆಟರಿ ಸಪೋರ್ಟ್ ಕೊಡುತ್ತಿದ್ದೇವೆ. ಆದ್ದರಿಂದಲೇ ಡಿಪಿಸಿಟ್ ಜಾಸ್ತಿಯಾಗಿರತಕ್ಕಂಥಾದ್ದು ಎನ್ನತಕ್ಕಂಥದ್ದನ್ನು ನಾನು ಮಾನ್ಯ ಸಭೆಗೆ ತಿಳಿಸಲು ಇಚ್ಛಿಸುತ್ತೇನೆ. ಇಲ್ಲದಿದ್ದರೆ ಆ ಪ್ರಮಾಣದಲ್ಲಿ ಡಿಪಿಸಿಟ್ ಜಾಸ್ತಿಯಾಗುತ್ತಿರಲಿಲ್ಲ ಮತ್ತು ಇದನ್ನು ನಾವು ಬುದ್ಧಿಪೂರಕವಾಗಿಯೇ ಮಾಡಿದ್ದೇವೆ. ಮುಂದಿನ 3-4 ವರ್ಷಗಳಲ್ಲಿ ಜೀರೋ ಡಿಪಿಸಿಟಿ ಮಾಡುವುದಕ್ಕೆ ಸಾಧ್ಯವೇ ಎನ್ನತಕ್ಕಂಥಾದ್ದು. 2001ನೇ ಇಸವಿಯಲ್ಲಿ 877 ಕೋಟಿ ರೂಪಾಯಿಗಳನ್ನು ನಾವು ಕೆ.ಪಿ.ಸಿ.ಸಿ.ಎಲ್.ಗೆ ಸಬ್ಸಿಡಿಯನ್ನು ಪ್ರೊವೈಡ್ ಮಾಡಿದ್ದೇವು. ಈ ವರ್ಷ 2300 ಕೋಟಿ ರೂಪಾಯಿಗಳನ್ನು ಪ್ರೊವೆಡ್ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, 2000-2001ನೇ ಸಾಲಿನಲ್ಲಿ ಬಜೆಟೆಡ್ ಅಮೌಂಟ್ 900 ಕೋಟಿ ರೂಪಾಯಿಗಳು. ಈ ವರ್ಷ 2300 ಕೋಟಿ ರೂಪಾಯಿಗಳು ಎಂದು ತಾವು ಹೇಳುತ್ತಾ ಇರತಕ್ಕಂಥಾದ್ದು, ಕಳೆದ ವರ್ಷ ರಿಲೀಸ್ ಮಾಡಿದ್ದು ಎಷ್ಟು ಎಂದು ನಾವು ಕೇಳುತ್ತಾ ಇರತಕ್ಕಂಥಾದ್ದು. Last year, how much has been released?

SRI S.M. KRISHNA : Sir It has been released fully. ಇವತ್ತು ಸಾಯಂಕಾಲದ ಹೊತ್ತಿಗೆ ಫುಲ್ ರಿಲೀಸ್ ಆಗುತ್ತದೆ. Budget has to be looked in its totality. ರಿಲೀಜಸ್ ಎಷ್ಟು ಎಂದು ಅಲ್ಲ. 31-3-2001ರ ವೇಳೆಗೆ ಎಷ್ಟು ಬಜೆಟರಿ ಸಪೋರ್ಟ್ ಕೊಟ್ಟಿದೇವೆ ಅಷ್ಟು ರಿಲೀಜ್ ಮಾಡಲೇಬೇಕಾಗುತ್ತದೆ. ನಿಮಗೆ ಲೆಕ್ಕದಲ್ಲಿ ಸಿಗುತ್ತದೆ. ಅದನ್ನು ನೀವು ಹಿಡಿಯಬಹುದು. Do you agree with me? Thank you very much for agreeing with me; I heard you yesterday. Bio-technology, you agreed with me. you agreed with me on so many other things plus this also.

ಶ್ರೀ ಸಿ. ಭೈರೇಗೌಡ : 2 ಪ್ಲಸ್ 2-4 ಆಗುತ್ತದೆಯೇ ವಿನಃ 5 ಆಗುವುದಕ್ಕೆ ಆಗುವುದಿಲ್ಲ. ನೀವು 2 ಪ್ಲಸ್ 2-4 ಎಂದು ಹೇಳಿದಿರಿ ಅದಕ್ಕೆ ನಾನು ಅಗ್ರಿ ಅಂತ ಹೇಳಿದ್ದು.

ಶ್ರೀ ಎಸ್.ಎಂ. ಕೃಷ್ಣ: ಈಗ 2300 ಕೋಟಿಗೆ ತಾವು ಅಗ್ರಿ ಆಗಿದ್ದೀರಿ. ಇದು ನಮ್ಮ ಸೀರಿಯಸ್‌ನೆಸ್ ಅನ್ನು in approaching these power reforms ತಿಳಿಸುತ್ತದೆ. ಇನ್ನು 12 ತಿಂಗಳು ಇದೆಯಲ್ಲಾ. ನಾಳೆ ಏಪ್ರಿಲ್ ಒಂದನೇ ತಾರೀಖಿನಿಂದ ಇನ್ನೂ 12 ತಿಂಗಳು ಇದೆ. ಈ ಡಿಪಿಸಿಟ್ ವಿಚಾರಕ್ಕೆ ಬಂದಾಗ ನಾನು ಇದನ್ನು ನಮ್ಮಂದು ಮಾಡಲೇಬೇಕಾಗಿರತಕ್ಕಂಥ ಒಂದು ಅಂಕಿಅಂಶ ಹಾಗೆ ಎಂದು ಹೇಳಿ ಈ ಸದನದಲ್ಲಿ ನಡೆಯುತ್ತಾ ಇರತಕ್ಕಂಥ ಚರ್ಚೆಗೆ ಹೆಚ್ಚು ಒತ್ತು ಕೊಡಬೇಕೆನ್ನುವ ದೃಷ್ಟಿಯಿಂದ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಆದ್ದರಿಂದ ಸರ್ಕಾರ ಮೇ ತಿಂಗಳಿನಿಂದ ರಾತ್ರಿ ಹೊತ್ತು ಪವರ್ ಕೊಡತಕ್ಕಂಥ ಪ್ರಯತ್ನ ಮಾಡುವುದರಲ್ಲಿ ಎಸ್.ಎಸ್. ಪಾಟೀಲರ ಆಕ್ಷೇಪಣೆ ಏನೂ ಇಲ್ಲ ಎಂದು ನಾನು ಭಾವನೆ ಮಾಡುತ್ತೇನೆ. ಪ್ರಯತ್ನ ಮಾಡುವುದರಲ್ಲಿ ನಾವು ಯಶಸ್ವಿಯಾದರೆ ಶಹಭಾಷ್ ಎಂದು ಹೇಳಿ. ಯಶಸ್ವಿಯಾಗದಿದ್ದರೆ ಮುಂದಿನ ವರ್ಷದ ಬಜೆಟ್ ಬರುತ್ತದೆಯಲ್ಲ, ಆಗ ಇನ್ನೂ ತೀವ್ರವಾದಂತಹ ಇನ್ನೂ ಹರಿತವಾದಂತಹ, ಇನ್ನೂ ಚುರುಕಾದಂತಹ ಇನ್ನೂ ಕ್ರೂರವಾದಂತಹ ಭಾಷೆಯನ್ನು ಉಪಯೋಗಿಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಾಗ ಎಸ್.ಎಸ್. ಪಾಟೀಲರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು ಹಾಗೆ ಎಂದು ಹೇಳಿ ಪತ್ರಿಕೆಗಳಲ್ಲಿ ಬರುತ್ತದೆ. Farmers representatives will be included as members in the Karnataka Agricultural Prices Regulatory Commission. ಇದನ್ನು ವೆಲ್‌ಕಮ್ ಮಾಡತಕ್ಕಂಥ ವಿಚಾರ. ಗ್ರಾಮೀಣ ಪ್ರದೇಶದ ದಿಕ್ಕು ಇದರಲ್ಲಿ ಬರಬೇಕು ಹಾಗೆ ಎಂದು ಹೇಳಿ ಇವತ್ತು ನಮ್ಮ ಅಡಿಷನಲ್ ಸ್ಟೋರೇಜ್ ಕೆಪ್ಯಾಸಿಟಿ ಅದನ್ನು ನಾವು ಸೃಷ್ಟಿ ಮಾಡಬೇಕೇ ಬೇಡವೇ ಎನ್ನತಕ್ಕಂಥ ವಿಚಾರದಲ್ಲಿ ಎರಡು ಅಭಿಪ್ರಾಯ ಬರುವುದಕ್ಕೆ ಸಾಧ್ಯವೇ ಇಲ್ಲ. ಇವೊತ್ತು ನಮ್ಮ ಮೆಕ್ಕೆಜೋಳ ಮತ್ತಿತರ ರೈತರು ಬೆಳೆದ ಪದಾರ್ಥಗಳನ್ನು ಗೋದಾಮುಗಳಲ್ಲಿ ಶೇಖರಿಸಲು ಶಾಲಾ ಕಟ್ಟಡಗಳನ್ನು ಕೂಡ ಹುಡುಕ ಬೇಕಾದ ಪರಿಸ್ಥಿತಿಯು ಬಂತು. ಅದು ವಿಶೇಷತ: ಹುಬ್ಬಳ್ಳಿ-ಧಾರವಾಡ ಭಾಗಗಳಲ್ಲಿ. ಆದ್ದರಿಂದ ಅಲ್ಲಿ ಹೆಚ್ಚು ಸ್ಟೋರೇಜ್‌ಗಳನ್ನು ಕೂಡಿಸಿಕೊಳ್ಳತಕ್ಕಂಥಾದ್ದು ಬಹಳ ಅಗತ್ಯವಾಗಿರತಕ್ಕಂಥ ಒಂದು ಬೆಳವಣಿಗೆ ಎಂದು ನಾವು ಭಾವನೆ ಮಾಡಬೇಕಾಗುತ್ತದೆ. ರೂರಲ್ ಡೆವಲಪ್‌ಮೆಂಟ್‌ಗೆ ಹೆಚ್ಚು ಒತ್ತು ಕೊಡಬೇಕೆಂದು 792 ಕೋಟಿ ರೂಪಾಯಿಗಳನ್ನು ಅದಕ್ಕೋಸ್ಕರ ಮಾಡಿಸಿದ್ದೇವೆ. ಕೆಲವು ಸಮಯ ಪರ್ಸೆಂಟೇಜ್ ಹೆಚ್ಚು ಕಡಿಮೆಯಾಗುತ್ತದೆ. ಏಕೆಂದರೆ ಆ ಮೊತ್ತ ಏನಿದೆ, ಆ ನಂಬರ್‌ಗಳನ್ನು ಆಬ್ಸಲ್ಯೂಟ್ ನಂಬರ್‌ಗಳನ್ನು ನಾವು ನೋಡಿದಾಗ ಮಾರ್ಜಿನಲ್ ಇನ್‌ಕ್ರೀಸ್ ಆದಾಗ ಸ್ವಲ್ಪ ಪರ್ಸೆಂಟೇಜ್ ವ್ಯತ್ಯಾಸವಾಗುತ್ತದೆ. ಆದರೆ ರಿಯಲ್ ಎಕ್ಸ್‌ಪೆಂಡಿಚರ್ ವಿಚಾರದಲ್ಲಿ ರೂರಲ್ ಡೆವಲಪ್‌ಮೆಂಟ್‌ಗೆ ನಾವು ಹೆಚ್ಚು ಹಣವನ್ನು ಕೂಡಿಸಿಕೊಟ್ಟಿದ್ದೇವೆ ಎಂದು ಹೇಳತಕ್ಕಂಥದ್ದನ್ನು ನಾನು ತಮ್ಮಲ್ಲಿ ಹೇಳಿಕೊಳ್ಳಲು ಪ್ರಯತ್ನ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಅಬಕಾರಿ ವಿಚಾರದಲ್ಲಿ ಬಹಳ ತೀವ್ರವಾದ ಟೀಕೆಗಳು ಬಂದವು. ಮಾರಾಟ ತೆರಿಗೆಯ ನಂತರ ಅಬಕಾರಿ ವಲಯವು ನಮಗೆ ಅತ್ಯಂತ ದೊಡ್ಡ ಪ್ರಮಾಣದಲ್ಲಿ

ರೆವಿನ್ಯೂ ಒದಗಿಸಿಕೊಡತಕ್ಕಂಥ ಒಂದು ಚೌಕಟ್ಟು, ಅಬಕಾರಿ ಬೆಳವಣಿಗೆಯನ್ನು ನಾವು ಕಳೆದ ಹತ್ತು ವರ್ಷಗಳಲ್ಲಿ ಗಮನಿಸಿ ನೋಡಬೇಕಾದುದು ಬಹಳ ಅಗತ್ಯ. ಅಲ್ಲಿ ನೋಡದೆ ಹೋದರೆ ಸರಿಯಾದಂಥ ಚಿತ್ರ ಹೊರಹೊಮ್ಮುವುದಿಲ್ಲ ಎಂದು ನನ್ನ ನಂಬಿಕೆ. ನಮ್ಮ ಟ್ಯಾಕ್ಸ್ ರಿಫಾರ್ಮ್ಸ್ ಕಮಿಷನ್ನಿನ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಅವರು ಕೊಡತಕ್ಕಂಥ ವೇಳೆಯಲ್ಲಿ ವರದಿಯಲ್ಲಿ ಅವರು ಒಂದು ಕಡೆ ವಿಷಯವನ್ನು ನಮೂದು ಮಾಡಿದ್ದಾರೆ. ಸುಮಾರು 1140 ಕೋಟಿ ರೂಪಾಯಿಗಳು ಈ ಎಕ್ಸೈಸ್ ಬಾಬಿನಲ್ಲಿ ಇನ್ನೂ ಅಡಿಷನಲ್ ಆಗಿ ವಸೂಲು ಮಾಡಬಹುದೆಂದು ಅವರು ನಮೂದು ಮಾಡುತ್ತಾರೆ. ನಾನು ನಮ್ಮ ಹಣಕಾಸಿನ ಕಾರ್ಯದರ್ಶಿಯವರಿಗೆ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಟ್ಯಾಕ್ಸ್‌ಕಮಿಷನ್ ಕಾರ್ಯದರ್ಶಿಯವರಿಗೆ ಕಾಗದ ಬರೆದು ಯಾವ ಮೆಕಾನಿಸಮ್‌ನ್ನು ಇವರು ಉಪಯೋಗಿಸುತ್ತಾರೆ, ಯಾವ ಬೆಂಚ್‌ಮಾರ್ಕ್ಸ್‌ನ್ನು ಅಳವಡಿಸಿಕೊಂಡು ಇವರು ಈ ಒಂದು ನಿರ್ಧಾರಕ್ಕೆ ಬಂದಿದ್ದಾರೆ, ಯಾರ ಜೊತೆಗೆ ಚರ್ಚೆ ಮಾಡಿ ಇವರು ಈ ನಿರ್ಧಾರಕ್ಕೆ ಬಂದು ಈ ವರದಿಯನ್ನು ನಮಗೆ ಕೊಟ್ಟಿದ್ದಾರೆ, ಎಂಬಿತ್ಯಾದಿಗಳೆಲ್ಲವನ್ನೂ ನಮಗೆ ತಿಳಿಸಿ ಅನಂತರ ನಾವು ನಿಮಗೆ ಇಂಥ ದಾರಿಯಲ್ಲಿ ಹೋಗಿ ನಿಮಗೆ ಇಷ್ಟು ಸಾವಿರಗಳಷ್ಟು ಹೆಚ್ಚು ವರಮಾನ ಬರುತ್ತದೆ ಎಂಬುದನ್ನು ತೋರಿಸಿಕೊಟ್ಟರೆ, ಖಂಡಿತವಾಗಿಯೂ ಕೂಡ ಸರ್ಕಾರವು ಅವರಿಗೆ ಅಭಾರಿಯಾಗಿರುತ್ತದೆ. 1991-92ನೇ ಇಸವಿಯಲ್ಲಿ 510 ಕೋಟಿ ಇತ್ತು. ಅದು ಅದರ ಹಿಂದಿನ ವರ್ಷದ ಎಕ್ಸೈಸ್ ರೆವಿನ್ಯೂಗಿಂತ 80 ಕೋಟಿ ಜಾಸ್ತಿಯಾಯಿತು. 1992-93 ರಲ್ಲಿ 515 ಕೋಟಿಗಳಾಯಿತು. ಕೇವಲ 4.93 ಕೋಟಿಗಳಷ್ಟು ಜಾಸ್ತಿಯಾಯಿತು. 1993-94 ರಲ್ಲಿ 639 ಕೋಟಿಗಳಾಯಿತು. 1994-95 ರಲ್ಲಿ 713 ಕೋಟಿಗಳಾಯಿತು. 1995-96 ರಲ್ಲಿ 820 ಕೋಟಿಗಳಾಯಿತು. 1996-97 ರಲ್ಲಿ 846 ಕೋಟಿಗಳಾಯಿತು. 1997-98 ರಲ್ಲಿ 885 ಕೋಟಿಗಳಾಯಿತು. 1996-97 ಮತ್ತು 1997-98ರ ಎರಡು ವರ್ಷಗಳ ವಿಚಾರವನ್ನು ತೆಗೆದುಕೊಳ್ಳೋಣ. 1996-97 ಸ್ವಾಭಾವಿಕವಾದ ಗ್ರೋಥ್ ಏಕೆ ಇಳಿಮುಖವಾಯಿತು?

ಶ್ರೀ ಸಿ. ಭೈರೇಗೌಡ : ಈಗ ಏನು ನಡೆಯುತ್ತಿದೆ ಅದು ಯಾವಾಗಲೂ ನಡೆಯುತ್ತಿರುತ್ತದೆ.

ಶ್ರೀ ಎಸ್.ಎಂ. ಕೃಷ್ಣ : ಧನ್ಯವಾದಗಳು. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಬೇಕು. ನೀವು ಅಂಪೈರ್ ಇದ್ದ ಹಾಗೆ. ಮಾನ್ಯ ಆರಗ ಜ್ಞಾನೇಂದ್ರರವರಿಗೆ ನಾನು ಆಗ ಮಾತನಾಡುತ್ತಾ ಸರ್ಟಿಫಿಕೇಟ್‌ನ್ನು ಕೊಟ್ಟಿದ್ದೇನೆ. ಮಾನ್ಯ ಸದಾನಂದಗೌಡರು ಇದ್ದರು, ಆರಗ ಜ್ಞಾನೇಂದ್ರರು ಆಗ ಇರಲಿಲ್ಲ. ನೀವುಗಳು ಆಡಳಿತ ಪಕ್ಷವಾಗಿ ಕುಳಿತುಕೊಳ್ಳಲು ಆಗಲಿಲ್ಲ, ಆದ್ದರಿಂದ ನಿಮಗೆ ಟೀಕೆ ಮಾಡಲು ಹಕ್ಕು ಇದೆ. ಆದರೆ ನಿಮ್ಮ ಪಕ್ಕದ ಲೈನ್‌ನಲ್ಲಿ ಕುಳಿತಿದ್ದಾರಲ್ಲವೆ, ಅವರನ್ನು ನಾನು ಕೇಳುತ್ತಿದ್ದೇನೆ. 10 ಪರ್‌ಸೆಂಟ್ ಗ್ರೋಥ್ - ಸ್ವಾಭಾವಿಕವಾಗಿ ಆಗುತ್ತಿರುತ್ತದೆ. ಅದು ಆಟೋಮೆಟಿಕ್ ಆಗಿ ನಡೆಯಬೇಕು. ಆದರೆ ನೀವೇನು ಮಾಡಿದ್ದೀರಿ? 1996-97 ರಲ್ಲಿ ಅದು ಏಕೆ ನಡೆಯಲಿಲ್ಲ? ಆಗ ಅಣ್ಣಾವ್ರು ಇದ್ದರಲ್ಲಾ?

ಶ್ರೀ ಸಿ. ಭೈರೇಗೌಡ : ನಾನು ತಮಗೆ ನಿನ್ನೆಯೇ ಹೇಳಿದ್ದೇನೆ. ನಾನು ಆ ಕಡೆಯಲ್ಲಿ ಕುಳಿತಾಗ ಏನು ಹೇಳಿದ್ದೇನೋ, ಅದನ್ನೇ ಈ ಕಡೆಯಲ್ಲಿ ಕುಳಿತಾಗಲೂ ಹೇಳುತ್ತೇನೆ. ನಾನು ನನ್ನ ಮಾತುಗಳನ್ನು ಹೇಳುತ್ತಾ ಇದ್ದೆನು ಹಾಗೂ ಏನು ಮಾಡಬೇಕಾಗಿತ್ತೋ ಅದನ್ನು ಮಾಡುವ

ಪ್ರಯತ್ನವನ್ನು ಕೂಡ ಮಾಡಿದ್ದೇನೆ. ಅದನ್ನು ಇಲ್ಲಿ ಬಹಿರಂಗವಾಗಿ ಹೇಳಲು ತಯಾರಿಲ್ಲ. ಈಗ ಏನು ನಡೆಯುತ್ತಿದೆಯೋ, ಆಗಲೂ ಕೂಡ ಅದೇ ನಡೆಯುತ್ತಿತ್ತು ಎಂದು ಹೇಳುತ್ತೇನೆ. ನಾನು ಆಗಲೂ ಜವಾಬ್ದಾರಿ ಸ್ಥಾನದಲ್ಲಿದ್ದು ಹೇಳಿದವರು, ಈಗಲೂ ಜವಾಬ್ದಾರಿ ಸ್ಥಾನದಿಂದ ಹೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಸ್ಥಾನದಲ್ಲಿ ಕುಳಿತಿದ್ದಾಗ ಮಾನ್ಯ ಸದಸ್ಯರ ಭಾಷಣವನ್ನು ನಾನು ಕೇಳಿದ್ದೇನೆ. ಆಗ ಅವರು ದಿನಕ್ಕೆ ಒಂದು ಕೋಟಿ ಎಂದು ಹೇಳುತ್ತಾ ಇದ್ದರು. ನಿನ್ನೆ ಹೇಳಿದರು ಈಗ ದಿನಕ್ಕೆ 3-4 ಕೋಟಿ ಎಂದು ಹೇಳಿದರು. ಸೋರಿಕೆ ಜಾಸ್ತಿಯಾಗಿದೆ ಎಂದೂ ಕೂಡ ಹೇಳಿದರು. ಹಾಗಿದ್ದರೆ ಇದು 1996-97 ರಲ್ಲಿಯೂ ಕೂಡ ರಿಫ್ಲೆಕ್ಟ್ ಆಗಬೇಕಾಗಿತ್ತಲ್ಲವೇ? ಇದು ಏಕೆ ರಿಫ್ಲೆಕ್ಟ್ ಆಗಲಿಲ್ಲ? ಈ ಬಗ್ಗೆ ಮಾನ್ಯ ಸಿಂಧ್ಯಾರವರು ಹೇಳಲಿ....

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಅಬಕಾರಿ ವಿಚಾರವನ್ನು ನಾನು ನಿನ್ನೆ ಹೇಳಿದ್ದೆ ಯಾರೇ ಆಡಳಿತದಲ್ಲಿದ್ದರೂ ಇದು ಹೀಗೆಯೇ ಎಂದು ಹೇಳಿದ್ದೇನೆ. ನೀವಿದ್ದರೂ ಅಷ್ಟೇ.... ನಾವಿದ್ದರೂ ಅಷ್ಟೇ.... ಎಂದು ಹೇಳಿದ್ದೇನೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ: ಮಾನ್ಯ ಅಧ್ಯಕ್ಷರೇ, ಹಾಗಾದರೆ ಈ ವಿಷಯ ಎಲ್ಲರಿಗೂ ಗೊತ್ತಿದೆ ಎಂದಾಯಿತು. ಇದಕ್ಕೋಸ್ಕರ ಒಂದು ಸರ್ವಪಕ್ಷಗಳ ಸಭೆಯನ್ನು ಕರೆದು ತೀರ್ಮಾನ ಮಾಡಬಹುದಲ್ಲವೇ? ನಾನು ನನ್ನ ಭಾಷಣದಲ್ಲಿ ಮೊನ್ನೆ ಮಾತನಾಡುವಾಗಲೂ ಈ ಕುರಿತು ನನ್ನ ಮಾತುಗಳನ್ನು ಹೇಳಿದ್ದೆ. ಸರ್ಕಾರಕ್ಕೆ ಪ್ರಥಮವಾಗಿ ಮಾರಾಟ ತೆರಿಗೆ ಬಾಬಿನಿಂದ ಮತ್ತು ಎರಡನೇದಾಗಿ ಅಬಕಾರಿ ಬಾಬಿನಿಂದ. ಆದರೆ ಎಲ್ಲಾ ರಾಜಕೀಯ ಪಕ್ಷಗಳಿಗೆ ಹೈಯೆಸ್ಟ್ ರೆವಿನ್ಯೂ ಬರುವುದು ಎಕ್ಸೈಸ್ ಬಾಬಿನಿಂದ.

ಶ್ರೀ ಸಿ. ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದವರು ಇದ್ದಾಗ ಈ ಎಕ್ಸೈಸ್ ಉತ್ತಮವಾದ ಕಡಿವಾಣ ಹಾಕಿ ಅಲ್ಲಿಂದ ಹೆಚ್ಚಿಗೆ ಲಾಭ ಬರುವ ಹಾಗೆ ಮಾಡಿದ್ದರು. ಈ ಸರ್ಕಾರವು ಏಕೆ ಆ ಕೆಲಸವನ್ನು ಮಾಡುತ್ತಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು.

ಶ್ರೀ ಎಸ್.ಎಂ. ಕೃಷ್ಣ: ಗ್ರೋಥ್‌ರೇಟ್ ಒಂದು ವರ್ಷ 2.23 ಪರ್‌ಸೆಂಟ್, ಇನ್ನೊಂದು ವರ್ಷ 2.25 ಪರ್‌ಸೆಂಟ್, ಗ್ರೋಥ್‌ರೇಟ್ 10 ಪರ್‌ಸೆಂಟ್... ಎಸ್.ಎಂ. ಕೃಷ್ಣ, ಮಲ್ಲಿಕಾರ್ಜುನ ಖರ್ಗೆ, ಚಂದ್ರೇಗೌಡರು, ಧರ್ಮಸಿಂಗ್‌ರವರು, ಘೋರ್ಪಡೆಯವರು, ರಂಗನಾಥರವರು, ಶ್ರೀಕಂಠಯ್ಯರವರು, ಇವರುಗಳು ಇದ್ದಾಗ ಮಾತ್ರ ಗ್ರೋಥ್‌ರೇಟ್ 10 ಪರ್‌ಸೆಂಟ್ ಇದ್ದುದು... ಗ್ರೋಥ್‌ರೇಟ್ ಇದ್ದಕ್ಕಿದ್ದ ಹಾಗೆ ಸ್ಲಂಪ್ ಆಗ ಬೇಕಾದರೆ ಕುಡಿಯುವವರ ಸಂಖ್ಯೆ ಕಡಿಮೆಯಾಯಿತೆ. ಕುಡಿಯುವವರ ಸಂಖ್ಯೆಯಲ್ಲಿ ಗಮನಾರ್ಹವಾದ ಇಳಿಮುಖ ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಬೇರೆ ಏನೋ ದಹನವಾದಂಥ ಬೆಳವಣಿಗೆಗಳು ಔಟ್‌ಸೈಡ್ ದಿ ಗವರ್ನಮೆಂಟ್ ನಡೆದಿರಬೇಕು. ಊಹೆ ಮಾಡಿದರೆ 1996 ರಲ್ಲಿ 1998 ರಲ್ಲಿ ಚುನಾವಣೆಗಳು ನಡೆಯಿತು. ಆದ್ದರಿಂದ ಅದರ ಒಂದು ರಿಫ್ಲೆಕ್ಷನ್ ಈ ಫಿಗರ್ಸ್ ಮೇಲೆ ನಾನು ಕಾಣುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವುಗಳು ಬಹಳ ಜವಾಬ್ದಾರಿಯಲ್ಲಿರತಕ್ಕಂಥ ಸ್ಥಾನದಲ್ಲಿದ್ದುಕೊಂಡು ಹಿಂದಿನ ಒಂದು ಸರ್ಕಾರದ ಮೇಲೆ ಗುರುತವಾದ ಆಪಾದನೆಯನ್ನು ಮಾಡಿರುವಾಗ ನಿಮ್ಮ ಹತ್ತಿರವೂ ಏನಾದರೊಂದು ಅಂಕಿಅಂಶಗಳು ಇರಬೇಕಾಗುತ್ತದೆ. 1996 ಮತ್ತು 1998 ರಲ್ಲಿ ಚುನಾವಣೆಗಳು ನಡೆದಿದ್ದು ನಿಜ.

11.40 ಎ.ಎಂ.

ಎರಡು ಲೋಕಸಭಾ ಚುನಾವಣೆಗಳು ನಡೆದಿವೆ. ಎಕ್ಸೈಜ್‌ನವರು ನಿಮಗೇನು ಮಾಡುತ್ತಾರೆ. ನಮಗೂ ಅದನ್ನು ಮಾಡುತ್ತಾರೆ, ನಮಗೇನು ಮಾಡಿದರೋ ನಿಮಗೂ ಅದನ್ನೇ ಮಾಡುತ್ತಾರೆ ಅನ್ನುವುದು ಗೊತ್ತಿರುವ ವಿಚಾರವೇ. ನೀವೂ ಟ್ಯಾಕ್ಸ್ ರಿಫಾರ್ಮ್ಸ್ ಕಮಿಟಿಯೂ ಲಾಗರ್‌ಹೆಡ್ಸ್‌ನಲ್ಲಿ ಇದ್ದ ಹಾಗೆ ಕಾಣುತ್ತದೆ. ಏಕೆಂದರೆ ನೀವು ಮೆಕಾನಿಸಂ ಅನ್ನು ಕೇಳಿದ್ದೀರಲ್ಲಾ, ಆ ಮೆಕಾನಿಸಮನ್ನೇ ಇದಕ್ಕೂ ಅಪ್ಲೈ ಮಾಡಿಸಿ ನಾವೇನು ತೆರಿಗೆ ರಿಯಾಯಿತಿಗಳನ್ನು ಆ ಸಂದರ್ಭದಲ್ಲಿ ಕೊಟ್ಟಿದ್ದೇವೆ, ಎಂಬುದನ್ನು ಪತ್ತೆ ಮಾಡಿದರೆ ಗೊತ್ತಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ : ಆದರೆ 1998-99 ರಲ್ಲಿ I find a distinct improvement in the collections. I am giving you credit for that. It went up to 17% and when this Government came in 1999, there was no turn around. It improved to 21%. 2000-2001 ರಲ್ಲಿ it has reached an all-time high of 21.06%. 1500 ಕೋಟಿಗಳು. ಅಬ್ಕಾರಿ ಲಾಬಿಗೆ ಅರಗ ಜ್ಞಾನೇಂದ್ರ ಹೇಳಿದರು, ಕೃಷ್ಣ ಯಾರ ಸಾರಥಿ ಆಗಬೇಕು? ಜನಗಳ ಸಾರಥಿಯಾಗಬೇಕೋ, ರೈತರ ಸಾರಥಿಯಾಗಬೇಕೋ ಅಬ್ಕಾರಿ ದೊರೆಗಳ ಸಾರಥಿಯಾಗಬೇಕೋ, ವರ್ತಕರ ಸಾರಥಿಯಾಗಬೇಕೋ ಎಂದು. 2001-2002ಕ್ಕೆ ಏನು ಬೇಸ್ ನಾವು ಕ್ರಿಯೆಟ್ ಮಾಡಿದ್ದೇವೆ: We have directed the Excise Department that their aim, 2086 ಕೋಟಿಗೆ ಈ ಅಬ್ಕಾರಿ ಆದಾಯವನ್ನು ನಾವು ತೆಗೆದುಕೊಂಡು ಹೋಗಬೇಕು. ಅದಕ್ಕೆ ನೀವು ಸಿದ್ಧತೆ ಮಾಡಿಕೊಳ್ಳಿ ಎಂದು. It will be an addition of 39% : 39% increased in the revenue. ಆದ್ದರಿಂದ ಈ ಫಾರ್ವರ್ಡ್ ಮೂಮೆಂಟ್ ಅಬ್ಕಾರಿ ಆದಾಯದಲ್ಲಿ...

ಶ್ರೀ ಬಿ. ಸೋಮಶೇಖರ್ : ಈ ಹಿನ್ನೆಲೆಯಲ್ಲೇ ನೀವು ಕಿರಾಣಿ ಅಂಗಡಿಗಳಲ್ಲೂ ಬೀರ್ ಮಾರಾಟ ಪರಿಚಯ ಮಾಡುತ್ತಿರಬೇಕು.

ಶ್ರೀ ಎಸ್.ಎಂ. ಕೃಷ್ಣ : ಪಾಪ ಸೋಮಶೇಖರ್‌ರವರಿಗೆ ಎಕ್ಸೈಜ್ ವಿಚಾರ ಅಷ್ಟು ಗೊತ್ತಿಲ್ಲ ಎಂದು ಕಾಣುತ್ತದೆ. ಏಕೆಂದರೆ ಪಾಪ ಅವರು ಕೇವಲ ಶಿಕ್ಷಣ ಕ್ಷೇತ್ರಕ್ಕೇ ಅವರ ಅನುಭವವೆಲ್ಲಾ ಧಾರೆಯೆರೆದಿದ್ದರಿಂದ... ನಿಮ್ಮಲ್ಲಿ ಪಾಲುಪಾರೀಖತ್ತು ಆಗಿಹೋಗಿದೆ.

ಶ್ರೀ ಬಿ. ಸೋಮಶೇಖರ್ : ನಾನು ಒಪ್ಪಿಕೊಳ್ಳುತ್ತೇನೆ, ಎಕ್ಸೈಜ್ ಕೊಡುತ್ತೇನೆ ಎಂದು ಹೇಳಿದರು, ನಾನು ತೆಗೆದುಕೊಳ್ಳಲಿಲ್ಲ. ತೆಗೆದುಕೊಂಡಿದ್ದರೆ ಅದಕ್ಕೋಸ್ಕರ ರಾಜೀನಾಮೆ ಕೊಡಬೇಕಾಗುತ್ತಿತ್ತು.

ಶ್ರೀ ಎಸ್.ಎಂ. ಕೃಷ್ಣ: ತೆಗೆದುಕೊಳ್ಳಬೇಕಾಗಿತ್ತು, ಅನುಭವ ಬರುತ್ತಿತ್ತು. ಆಮೇಲೆ, ಎಸ್.ಎಂ. ಕೃಷ್ಣ ಬಂದ, ಏನೋ ಒಂದು ದೊಡ್ಡ ಪಾಪ ಮಾಡಿಬಿಟ್ಟ, ಏನೆಂದರೆ ಪುಸ್ತಕಗಳ ಮೇಲೆ ತೆರಿಗೆ ಹಾಕಿದರು, ಬೀರನ್ನು ಬೆಂಕಿಪಟ್ಟಣ ಬೀಡಿ ಮಾರುವ ಅಂಗಡಿಗಳಲ್ಲೆಲ್ಲಾ ಇಡಲು ಹೊರಟಿದ್ದಾನೆ ಎಂದು ಹೇಳಿ ಗುಲ್ಲೆಬ್ಬಿಸಿ ಬಿಡುತ್ತೀದ್ದೀರಿ. A Finance Minister should be an economist. I am not an economist. He should be a psyschologist. I am not a psychologist. He should be a philosopher. I am not a philosopher. 1980ರ ದಶಕಗಳಲ್ಲಿ ಬೆಂಗಳೂರಿನಲ್ಲಿ ಬಹಳ ಪ್ರಾಮುಖ್ಯವಾಗಿ ಈ ಡ್ರಗ್ಸ್, it was a menacing development. ಆಗ ನಮ್ಮ ಯುವಕಯುವತಿಯರನ್ನು ಆ ಡ್ರಗ್ಸ್ ಮೋಹದಿಂದ ಬೇರೆ ಕಡೆಗೆ ತೆಗೆದುಕೊಂಡು ಹೋಗಿದ್ದು ಬೆಂಗಳೂರು ಸಿಟಿಯಲ್ಲಿ ಮುಖ್ಯವಾಗಿ ಈ ಬಿಯರ್ ಮಾರುವ ಪಬ್‌ಗಳು ಜಾಸ್ತಿಯಾಗಿದ್ದರಿಂದ. There is a study which is made and that study has sent a message to us to the effeect that Bangalore is relatively, as compared to Mumbai or Delhi, is free from the drugs menace, and it is a development which all of us must welcom. ಏಪ್ರಿಲ್ ಒಂದರಿಂದ ಈ ಕ್ವಾಲಿಟೇಟಿವ್ ರಿಸ್ಟ್ರಿಕ್ಷನ್ಸ್ ಹೋಗಿ ನಮ್ಮಲ್ಲಿಗೆ ವಿಸ್ಕಿಗಳು ರಂಗಳು ಬಿಯರ್‌ಗಳು ಪರದೇಶಗಳಿಂದ ಬರಲು ಪ್ರಾರಂಭವಾಗುತ್ತದೆ. ಈಗ ಚಿಕ್ಸ್ ಬಿಯರ್ ಎಂದಿದೆ, ಆದನ್ನು non-alcoholic beverage ಎಂದು ಮಾರಲಿಕ್ಕೆ ಯಾವ ಕಾನೂನಿನ ಅಡ್ಡಿ ಆತಂಕಗಳಿಲ್ಲ, ಆದುರಿಂದ ನಮ್ಮ ಆಲೋಚನೆಯೇನು ಅಂದರೆ ಬಿಯರ್ ಎಂಬ ಪಾನಿಯವನ್ನು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಒಂದು ಬಿವರೇಜ್ ಎಂದು ಕರೆಯುತ್ತಾರೆ, ಅದನ್ನು ಹಾರ್ಡ್‌ಲಿಕರ್ ಎಂದು ಕರೆಯುವುದಿಲ್ಲ. ಆದುದರಿಂದ ಕೆಲವು ಸೀಮಿತವಾದಂಥ ಔಟ್‌ಲೆಟ್‌ಗಳನ್ನು ನಾವು ಇಡುವುದರ ಮೂಲಕ ಯಾರು ಹಾರ್ಡ್‌ಲಿಕರ್‌ಗೆ ಆಕರ್ಷಿರಾಗಿದ್ದಾರೋ, ಮೋಹಿತರಾಗಿದ್ದಾರೋ ಅವರಿಗೆ ಒಂದು ಸೆಪರೇಟ್ ಆಲ್ಟರ್ನೇಟೀವನ್ನು ಅವರ ಆರೋಗ್ಯದ ಮೇಲೆ ಕಡಿಮೆ ದುಷ್ಪರಿಣಾಮ ಬೀರುವ ಪಾನೀಯ ಒದಗಿಸಬೇಕೆನ್ನುವುದು. ಏಕೆಂದರೆ ನಮ್ಮ ಮಕ್ಕಳ ಮೇಲೆ ನಮಗೆ ನಿಯಂತ್ರಣವಿಲ್ಲವೆಂಬುದು ಇವತ್ತು ಜಗಜ್ಜಾಹೀರಾಗಿದೆ. ಯಾರಾದರೂ ಅದೃಷ್ಟಶಾಲಿಗಳಿದ್ದೀರಾ ಅಂತಹ ಕಂಟ್ರೋಲನ್ನು ಇಟ್ಟುಕೊಂಡಿರುವವರು? ಆ ದೃಷ್ಟಿಯಿಂದ ಎಕ್ಸ್‌ಪಿರಿಮೆಂಟಲ್ ಬೇಸಿಸ್‌ಮೇಲೆ ನಾವು ಯೋಚನೆ ಮಾಡಿದೆವು. ಆದರೆ ಮಡಿವಂತರಿಗೆ ಇದು ಪ್ರಿಯವಾಗುವುದಿಲ್ಲ. ಈಗ ನಮ್ಮ ಪಕ್ಷದಲ್ಲೂ ಬೇಕಾದಷ್ಟು ಮಂದಿ ಮಡಿವಂತರಿದ್ದಾರೆ, ಅವರಿಗೆ ಇದು ಪ್ರಿಯವಾಗಲಿಲ್ಲ, ಹಾಗೇ ನಿಮ್ಮಲ್ಲೂ ಬಹಳ ಮಡಿವಂತರಿದ್ದಾರೆ. ಅವರಿಗೆಲ್ಲಾ ಈ ಫಿಲಾಸಫಿಯನ್ನು ಮಾರಲಿಕ್ಕೆ ನನಗೆ ಬಹಳ ಕಷ್ಟವಾಗುತ್ತದೆ. ಆದರೂ ಎಲ್ಲಾದರೂ ಒಂದು ಪ್ರಯೋಗ ಶುರುಮಾಡಬೇಕೆಂದು 300 ಔಟ್‌ಲೆಟ್ ಮಾಡಲಾಗುವುದೆಂದು ಹೇಳಿದ್ದನ್ನು ಈಗ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತ ಮಾಡಿ ಅದನ್ನು 100ಕ್ಕೆ ಇಳಿಸಿ ಮಿಕ್ಕೆಲ್ಲಾ ಮಾಡುವುದಿಲ್ಲ ನಾವು. ಕಿರಾಣಿ ಅಂಗಡಿ ಅಂದರೆ ನಾನಾ ವಿಧವಾದ ವ್ಯಾಖ್ಯಾನಗಳಿವೆ. ಈ ಸ್ಕೀಮಿನ ಉದ್ದೇಶ ಅದಾಗಿರಲಿಲ್ಲವೆಂಬುದನ್ನು ತಾವು ದಯವಿಟ್ಟು ಅರ್ಥಮಾಡಿಕೊಳ್ಳಬೇಕು ಎಂದು ತಮ್ಮನ್ನು ಅತ್ಯಂತ ವಿನಯದಿಂದ ನಾನು ಪ್ರಾರ್ಥನೆ ಮಾಡುತ್ತೇನೆ. ಹಾಗೇನೇ ವಾಣಿಜ್ಯ ತೆರಿಗೆಗಳ ಬಗ್ಗೆ ಕೂಡ. ಕಳೆದ ಒಂದು ತಿಂಗಳಿಂದ ವಾಣಿಜ್ಯ ತೆರಿಗೆ

ಇಲಾಖೆಯ ಕಂಟ್ರೋಲನ್ನು ಎಕ್ಸೈಜ್ ಇಲಾಖೆಯಿಂದ ನಾವು ಬೇರೆ ಮಾಡಿದ್ದೇವೆ. ಇದರ ಉದ್ದೇಶವೇನೆಂದರೆ ಎಕ್ಸೈಜ್ ಇಲಾಖೆ ಜನ ಬರೀ ಅಬ್ಕಾರಿ ಮೇಲೆ ಗಮನಹರಿಸಬೇಕು. ಇನ್ನೂ ಸುಮಾರು 600 ಕಮಾಡಿಟೀಸ್ ಇವೆ ಅವುಗಳಲ್ಲಿ ಕೆಲವು ಇವತ್ತು ಹೇಳುವವರು ಕೇಳುವವರಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಅವುಗಳ ಕಡೆ ಇನ್ನೂ ಹೆಚ್ಚು ಗಮನ ಹರಿಸತಕ್ಕಂತಹ ಒಂದು ಕಾರ್ಯಕ್ರಮವನ್ನು

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಪುಸ್ತಕಗಳ ಮೇಲಿನ ತೆರಿಗೆ ವಿಚಾರ,

ಶ್ರೀ ಎಸ್.ಎಂ. ಕೃಷ್ಣ : ಹಿಂದೆ ನೀವು ಹೇಳಿದ್ದೀರಿ, ಜ್ಞಾಪಕವಿತ್ತು, ಆದ್ದರಿಂದ ಪುಸ್ತಕಗಳ ಮೇಲೆ ಹಾಕಿರುವ ತೆರಿಗೆಯನ್ನು ವಾಪಸ್ ತೆಗೆದುಕೊಳ್ಳುತ್ತಿದ್ದೇನೆ. ಹಾಗೇನೆ ಕೆರೋಸಿನ್ ಸ್ಟವ್ಸ್ ಮೇಲೆ ಹಾಕಿರುವ ತೆರಿಗೆಯನ್ನೂ ಕೂಡ ವಾಪಸ್ ತೆಗೆದುಕೊಳ್ಳುತ್ತಿದ್ದೇನೆ. ಹಾಗೇನೇ ಅಲ್ಯೂಮಿನಿಯಂ ವೆಸೆಲ್ಸ್ ಮೇಲೆ ಹಾಕಿರುವ ಆ ತೆರಿಗೆಯನ್ನು ಕೂಡ ವಾಪಸ್ ತೆಗೆದುಕೊಳ್ಳುತ್ತಿದ್ದೇನೆ. ಇನ್ನು ಸಾಂಬ್ರಾಣಿಯದು. ಅದನ್ನು ಯಾರೂ ಕೊಂಡುಕೊಳ್ಳುವುದಿಲ್ಲ ಬಿಡಿ.

ರೀಜನಲ್ ಇಂಬ್ಯಾಲನ್ಸ್, ವಿಚಾರದಲ್ಲಿ ಪ್ರೊ. ನಂಜುಂಡಪ್ಪನವರು ಈಗಾಗಲೇ ಒಂದು ವರದಿ ಕೊಟ್ಟಿದ್ದಾರೆ. ಒಂದು ವಿತಂಡವಾದ ಏನಿತ್ತು ಎಂದು ಹೇಳಿದರೆ ಈ ಸರ್ಕಾರಕ್ಕೆ ಟಾಸ್ಕ್‌ಫೋರ್ಸ್ ಇಲ್ಲ ಕಮಿಷನ್ ನೇಮಕ ಇವು ಎರಡೇ ಹಾಗೆ ಎಂದು ಹೇಳಿ ಹೇಳುತ್ತಾರೆ. ಆ ಕಮಿಷನ್ ವರದಿ ಇಲ್ಲದೇ ಹೋಗಿದ್ದರೆ ನೀವು ಇಷ್ಟು ಮಾತುಗಳನ್ನು ಆಡುವುದಕ್ಕೆ ಬರುತ್ತಲೇ ಇರಲಿಲ್ಲ. ಆ ಕಮಿಷನ್ ವರದಿ ನಿಮ್ಮ ಕೈಗೆ ಬರದೇ ಹೋಗಿದ್ದಿದ್ದರೆ ನೀವು ಇಷ್ಟೊಂದು ವ್ಯಾಖ್ಯಾನ ಮಾಡುವುದಕ್ಕೆ ಅವಕಾಶ ಇರಲಿಲ್ಲ. ಆದ್ದರಿಂದಲೇ ಈ ಸರ್ಕಾರಕ್ಕೆ ಎಂಥ ಮುಕ್ತವಾದ ಮನಸ್ಸು ಇದೆ ಎನ್ನತಕ್ಕದ್ದನ್ನು ನೀವು ಅರ್ಥಮಾಡಿಕೊಳ್ಳಬೇಕು ಎಂದು ನಾನು ಕೇಳುತ್ತೇನೆ.

ಶ್ರೀ ಸಿ. ಭೈರೇಗೌಡ : ಪ್ಲಾನಿಂಗ್ ಬೋರ್ಡ್ ಬಗ್ಗೆಯೂ ಹಾಗೆಯೇ ಹೇಳಿ ಬಿಡಿ. ಸುಮ್ಮನೆ ಅದಕ್ಕೊಬ್ಬರನ್ನು ಹೆಡ್ ಇಟ್ಟಿದ್ದೀರಿ ವಿನಃ ಅದಕ್ಕೆ ಕೈ ಕಾಲು, ಲಂಗು ಲಗಾಮು ಏನೂ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ : ಆ ಕೊರತೆಯನ್ನು ಅತೀ ಶೀಘ್ರದಲ್ಲೇ ನಿವಾರಣೆ ಮಾಡಿಕೊಡುತ್ತೇವೆಂದು ಹೇಳಿ ಮಾನ್ಯ ಸದಸ್ಯರಿಗೆ ನಾನು ಭರವಸೆಯನ್ನು ಕೊಡುತ್ತೇನೆ. I concede that there is a lapse and perhaps in our over anxiety on depending upon individuals, we had minimised the institutional framework, which I am glad that you have mentioned it. Both here and the other House, it has been brought to my attention. Perhaps, in the next eight to ten days, we should be taking steps to overcome that. ಪಲ್ಸಸ್ ಬೋರ್ಡ್ ಒಂದನ್ನು ಸೆಟಪ್ ಮಾಡಿದ್ದೇವೆ ಎಂದು ಹೇಳಿದ್ದೇವೆ. ಏಕೆಂದರೆ ಕಳೆದ ನಾಲ್ಕಾರು ವರ್ಷಗಳಿಂದ ಗುಲ್ಬರ್ಗಾದಲ್ಲಿ ಮತ್ತು ರಾಯಚೂರು ಈ ಭಾಗಗಳಲ್ಲಿ ಇವತ್ತೇನು ನಾವು ಪಲ್ಸಸ್‌ನ್ನು ಬೆಳೆಯುತ್ತಿದ್ದೇವೆ, ಆ ಪಲ್ಸಸ್‌ಗೆ ಯೋಗ್ಯವಾದ

ಬೆಲೆ ಸಿಗತಕ್ಕಂಥದ್ದು ಮತ್ತು ಅವುಗಳನ್ನು ವಿತರಣೆ ಮಾಡತಕ್ಕಂಥದ್ದು, ಸಂಗ್ರಹಿಸತಕ್ಕದ್ದು ಇವುಗಳೆಲ್ಲವೂ ಕೂಡ ಬಹಳ ಕಷ್ಟಸಾಧ್ಯವಾದಂಥ ಕೆಲಸವಾಗಿದೆ. ಆದ್ದರಿಂದ ಅವುಗಳನ್ನು ನಾವು ಈ ಮುಂಗಡಪತ್ರದಲ್ಲಿ ಅವುಗಳಿಗೆ ಅವಕಾಶವನ್ನು ಕೊಡುವುದರ ಮೂಲಕ ನಾವು ಅದನ್ನು ಆ ಭಾಗದ ಜನಗಳ ಅದರಲ್ಲೂ ಈ ತೊಗರಿಬೇಳೆ ಬೆಳೆಯತಕ್ಕ ಜನಗಳ ಕಷ್ಟಗಳಿಗೆ ನಾವು ಸ್ಪಂದಿಸುವುದಕ್ಕೋಸ್ಕರ ಇದೊಂದು ದೃಢವಾದಂಥ ಕಾರ್ಯಕ್ರಮಗಳನ್ನು ನಾನು ಈ ಸದನದ ಗಮನಕ್ಕೆ ತೆಗೆದುಕೊಂಡು ಬರುತ್ತೇನೆ. ವಾಟರ್ ಷೆಡ್ ಡೆವಲಪ್‌ಮೆಂಟ್, ಈ ಸರ್ಕಾರದಲ್ಲಿ ಇದು ಬಹಳ ದೊಡ್ಡ ಕಾರ್ಯಕ್ರಮ. It is a continuing programme, on-going programme ಏಕೆಂದರೆ ನಮ್ಮ ರಾಜ್ಯದ ಒಣಪ್ರದೇಶವನ್ನು ಗಮನಿಸಿದಾಗ ನಮಗೆ ಈ ವಾಟರ್ ಷೆಡ್ ಡೆವಲಪ್‌ಮೆಂಟ್ ಮತ್ತು tank reconstruction programme ಅಂತರಜಲ ಏನು ದಿನೇ ದಿನೇ ಏನು ಕೆಳಗೆ ಹೋಗುತ್ತಾ ಇದೆ, ಅದನ್ನು ಮೇಲಕ್ಕೆ ತರುವುದಕ್ಕೆ ಈ ಎರಡು ಕಾರ್ಯಕ್ರಮಗಳನ್ನು ನಾವು ಅವಲಂಬಿಸಬೇಕಾಗುತ್ತದೆ. ಅವುಗಳನ್ನು ಮಾಡುವುದಕ್ಕೆ ಈ ಸರ್ಕಾರ ಬದ್ಧವಾಗಿದೆ ಎಂದು ಹೇಳಿ ಹೇಳುತ್ತೇನೆ ಮತ್ತು multi-grain silos in Gulbarga and Dharwar ಏಕೆಂದರೆ ಈ ಪಲ್ಸಸ್ ಬೋರ್ಡ್‌ಗೆ ಸಂಬಂಧಪಟ್ಟ ಹಾಗೆ ಸೈರೋಸ್ ಕೂಡ ನಮಗೆ ಅವಶ್ಯಕವಾಗಿ ಅಲ್ಲಿ ಬೇಕಾಗಿದೆ. ಅವುಗಳಿಗೂ ನಾವು ಮುಂಗಡಪತ್ರದಲ್ಲಿ ಅವಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. Apparel Park in Bellary, ಏಕೆಂದರೆ ಬಳ್ಳಾರಿ ಪ್ಯಾಕೇಜ್ ಏನಾಯಿತು ಎಂದು ಕೇಳಿದಂಥ ಹಿಂದಿನ ಪ್ರಶ್ನೆಗಳಿಗೆ ಈಗ ಉತ್ತರ ಕೊಡಬೇಕು. ನೀವು ನಿನ್ನೆಯೂ ಕೇಳಿದಿರಿ. ಅಕ್ಟೋಬರ್ ತಿಂಗಳಲ್ಲಿ ವಿಜಯನಗರ ವಿದ್ಯುತ್ ಉತ್ಪಾದನಾ ಘಟಕವನ್ನು ನಾವು ಆ ಕೆಲಸವನ್ನು ಕೈಗೆತ್ತಿಗೊಳ್ಳಬೇಕೆನ್ನುವ ನಿರ್ಧಾರ ನಿನ್ನೆ ಮೊನ್ನೆ ನಡೆದ ಕರ್ನಾಟಕ ಪವರ್ ಕಾರ್ಪೊರೇಷನ್ ಮೀಟಿಂಗ್‌ನಲ್ಲಿ ತೆಗೆದುಕೊಂಡಿದ್ದೇವೆ. ಹಾಗೆಯೇ ಅಪರೆಲ್ ಪಾರ್ಕ್ ಇನ್ ಬಳ್ಳಾರಿ, ಕರ್ನಾಟಕ ರಾಜ್ಯ ಸಿದ್ಧ ಉಡುಪುಗಳನ್ನು ರಫ್ತು ಮಾಡತಕ್ಕ ರಾಜ್ಯಗಳ ಪೈಕಿ ಕರ್ನಾಟಕ ಮುಂಚೂಣಿಯಲ್ಲಿರತಕ್ಕ ರಾಜ್ಯ. ಆದ್ದರಿಂದ ಅದಕ್ಕೆ ಇನ್ನೂ ಹೆಚ್ಚು ಬೆಂಬಲವನ್ನು ಕೊಡತಕ್ಕಂಥದ್ದು ಮತ್ತು ಯಾರು ಸಿದ್ಧ ಉಡುಪುಗಳನ್ನು ಮಾಡಿ ಅವುಗಳನ್ನು ಹೊರದೇಶಕ್ಕೆ ಕಳುಹಿಸಿ ಆ ಮೂಲಕ ನಮ್ಮ ದೇಶಕ್ಕೆ ಫಾರೀನ್ ಎಕ್ಸ್‌ಛೇಂಜ್‌ನ್ನು ದೊರಕಿಸಿಕೊಡತಕ್ಕಂಥದ್ದು ಅವರಿಗೆ ಸೌಲಭ್ಯ ಒದಗಿಸಿ ಕೊಡತಕ್ಕದ್ದು ನಮ್ಮ ಉದ್ದೇಶ. ಎರಡನೆಯದು ನಮ್ಮ ದೇಶಕ್ಕೆ ಬೇಕಾಗತಕ್ಕ ತಮ್ಮ ಕಾಲಮೇಲೆ ತಾವು ನಿಲ್ಲುವುದಕ್ಕೆ ಬೇಕಾದ ಒಂದು ಭೂಮಿಕೆಯನ್ನು ಸೃಷ್ಟಿ ಮಾಡಿಕೊಡಬೇಕಾಗಿರತಕ್ಕಂಥದ್ದು ಅಗತ್ಯ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಸಿದ್ಧ ಉಡುಪುಗಳ ಮೇಲೆ ಸೆಂಟ್ರಲ್ ಟ್ಯಾಕ್ಸ್ ಎಂದು ಹೇಳಿ 16 ಪರ್‌ಸೆಂಟನ್ನು ಹಾಕುತ್ತಿದ್ದಾರೆ. ಅವುಗಳು ಮುಚ್ಚುವ ಸ್ಥಿತಿಗೆ ಬಂದುಬಿಟ್ಟಿವೆ. ಅವುಗಳಿಗೆ ರಿಲೀಫ್ ಕೊಟ್ಟರೆ ಒಳ್ಳೆಯದು. ಸರ್ಕಾರಿ ಸಂಸ್ಥೆಗಳು ಎಲ್ಲಾ ಬಹಳ ತೊಂದರೆಯಲ್ಲಿವೆ. ತಮಗೆ ಗೊತ್ತಿದೆ ಯಶವಂತ್ ಸಿನ್ಹರವರು ಈ ಸಾರಿ ಹಾಕಿರುವ ಟ್ಯಾಕ್ಸ್ 16 ಪರ್‌ಸೆಂಟ್. ಅದರ ಬಗ್ಗೆ ಏನಾದರೂ ಮಾಡಲು ಸಾಧ್ಯವೇ?

ಶ್ರೀ ಎಸ್.ಎಂ. ಕೃಷ್ಣ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಕೂಡ ಈ ಬಗ್ಗೆ ವಿಶೇಷವಾದ ಗಮನವನ್ನು ಹರಿಸಬೇಕಾಗಿರತಕ್ಕಂಥದ್ದು ಮತ್ತು ಬಳ್ಳಾರಿ ಮತ್ತು ಹುಬ್ಬಳ್ಳಿ ಮೆಡಿಕಲ್ ಕಾಲೇಜುಗಳನ್ನು ಅಪ್‌ಗ್ರೇಡ್ ಮಾಡತಕ್ಕಂಥದ್ದು.

ಶ್ರೀ ಎ. ರಾಮದಾಸ್ : ಅಪ್‌ಗ್ರೇಡ್ ಮಾಡಿ. ಬಹಳ ಒಳ್ಳೆಯದು. ನೀವು ಮಾಡತಕ್ಕಂಥದ್ದನ್ನು ಸ್ವಾಗತ ಮಾಡುತ್ತೇವೆ. ಆದರೆ ಕಳೆದಬಾರಿ ಎಂಸಿಐ ನವರು ಮೈಸೂರು ಮತ್ತು ಬೆಂಗಳೂರು ಮೆಡಿಕಲ್ ಕಾಲೇಜುಗಳಲ್ಲಿ ಇನ್‌ಫ್ರಾಸ್ಟ್ರಕ್ಚರ್ಸ್ ಇಲ್ಲ ಎಂದು ಹೇಳಿ ಸೀಟನ್ನು ಕಡಿಮೆ ಮಾಡುವ ಪ್ರಯತ್ನವನ್ನು ಮಾಡಿದ್ದರು. ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಹೇಳಿ ತಾವೊಂದು ಪತ್ರವನ್ನು ಬರೆದಿದ್ದಿರಿ. ಮುಂದಿನ ವರ್ಷಕ್ಕೆ ಅದನ್ನು ನಾವು ಮಾಡುತ್ತಿದ್ದೇವೆ ಎನ್ನುವ ವಿಚಾರ. ಆದರೆ ಈ ಬಾರಿ ಈ ಎರಡೂ ಮೆಡಿಕಲ್ ಕಾಲೇಜುಗಳ ಆಗ್‌ಮೆಂಟೇಷನ್‌ಗೋಸ್ಕರವಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ನಾನು ಅಸಮತೋಲನದ ವಿಚಾರವನ್ನು ಮಾತನಾಡುತ್ತಿದ್ದೇನೆ. ಆ ದೃಷ್ಟಿಯಿಂದ ಈ ಎರಡೂ ಕಾಲೇಜುಗಳನ್ನು ಅಪ್‌ಗ್ರೇಡ್ ಮಾಡತಕ್ಕದ್ದು, it becomes relevant. ಬಾಕಿ ಕಾಲೇಜುಗಳನ್ನು ಅಪ್‌ಗ್ರೇಡ್ ಮಾಡಬಾರದು ಎಂದು ಅಲ್ಲ. ಸಂದರ್ಭಗಳು ಹೇಗೆ ಬರುತ್ತದೋ ನೋಡಿ ಆ ಬಾಕಿ ಕಾಲೇಜುಗಳನ್ನೂ ಕೂಡ ಅಪ್‌ಗ್ರೇಡ್ ಮಾಡಬೇಕಾಗಿರತಕ್ಕದ್ದು ಈಗ ಬಹಳ ಅವಶ್ಯಕವಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬಳ್ಳಾರಿಯಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ತಾವೇನು ಮಾಡಿದ್ದೀರಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಅದೇ ರೀತಿ ಒಪೆಕ್ ಆಸ್ಪತ್ರೆಯಲ್ಲೂ ಎಲ್ಲಾ ಎಕ್ವಿಪ್‌ಮೆಂಟ್ಸ್ ಇದೆ, ಇನ್‌ಫ್ರಾಸ್ಟ್ರಕ್ಚರ್ ಎಲ್ಲಾ ಇದೆ. ನಾವು 30-35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆ ರೀಜನ್‌ನಲ್ಲಿದ್ದರೆ ಬಹಳ ಕ್ರಾನಿಕ್ ಡಿಸೀಸಸ್ ಇದ್ದವರಿಗೆ ಅನುಕೂಲವಾಗುತ್ತದೆ. ಆದಕ್ಕೆ ಬೇಕಾಗಿರುವ ಹಾಗೆ ಏಕೆ ಮಾಡಲಿಲ್ಲವೆಂದು ನಾವು ನಿನ್ನೆ ಕೇಳಿದೆವು.

ಶ್ರೀ ಚಂದ್ರಕಾಂತ್ ಬೆಲ್ಲದ್ : ಧಾರವಾಡದಲ್ಲಿರುವ ಮಾನಸಿಕ ಆಸ್ಪತ್ರೆ 160 ವರ್ಷ ಹಳೆಯದು. ಅದನ್ನು ಸ್ವಾಯತ್ತವಾಗಿ ನಿಮಾನ್ಸ್ ಮಾದರಿಯಲ್ಲಿ ಮಾಡಬೇಕೆಂದು ಹೇಳಿ ಮೊದಲಿನಿಂದಲೂ ಕೇಳುತ್ತಿದ್ದೇವೆ. ನಿಮಾನ್ಸ್ ಮಾದರಿ ಮಾಡಿದರೆ ನಿಮಗೆ ಒಳ್ಳೆಯ ಹೆಸರು ಸರ್ಕಾರಕ್ಕೆ ಬರುತ್ತದೆ. ಇಡೀ ರಾಜ್ಯದಲ್ಲೇ ಅತ್ಯಂತ ಹಳೆಯದಾದ ಆಸ್ಪತ್ರೆಯಿದು.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳ ಉತ್ತರ ಪೂರಾ ಮುಗಿಯಲಿ. ಆಮೇಲೆ ಕ್ಲಾರಿಫಿಕೇಷನನ್ನು ಕೇಳಿ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಬೆಲ್ಲದ್‌ರವರು ನಾನು ಹುಬ್ಬಳ್ಳಿಗೆ ಹೋದಾಗಲೂ ಕೂಡ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದರು. ಬಹಳ ಒಂದು ಹಳೆಯ ಆಸ್ಪತ್ರೆ ಎಂದು, ಆದರ ಬಗ್ಗೆ ನಾವು ಆಲೋಚನೆಯನ್ನು ಮಾಡೋಣ. ಈ ಸಣ್ಣ ಕೈಗಾರಿಕೆಗಳ ಬಗ್ಗೆ ಬಹಳ ವಿಚಾರಗಳು ಪ್ರಸ್ತಾವನೆಯಾಗಿದೆ. ಬಹಳ ಸಮರ್ಥವಾದ ರೀತಿಯಲ್ಲಿ ಮಾನ್ಯ ಸದಸ್ಯರುಗಳು ಸಣ್ಣ ಕೈಗಾರಿಕೆಗಳು ಪಡುತ್ತಿರುವ ಪಾಡಿನಿಂದ ಅವರನ್ನು ರಕ್ಷಣೆ ಮಾಡಬೇಕಾಗಿರತಕ್ಕಂಥದ್ದು ಸರ್ಕಾರದ ಜವಾಬ್ದಾರಿ ಎಂದು ಹೇಳಿದ್ದಾರೆ. ಆ ವಾದವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಈ ಜಾಗತಿಕತೆ (ಗ್ಲೋಬಲೈಜೇಷನ್) ಮತ್ತು ಲಿಬರಲೈಜೇಷನ್ ಈ ಎರಡರ ಕಾರಣ ಈ ದಿವಸ ನಮ್ಮ ಓಲ್ಡ್ ಎಕಾನಮಿಯಲ್ಲಿರುವ ಎಲ್ಲಾ ಕೈಗಾರಿಕೆಗಳು ಕೂಡ ಇವತ್ತು ಅವು ರನ್‌ಷನ್‌ನಲ್ಲಿವೆ, ಇಲ್ಲದಿದ್ದರೆ ಅವು ನಷ್ಟವನ್ನು ಅನುಭವಿಸುತ್ತಿರತಕ್ಕ ಕಾರ್ಖಾನೆಗಳಾಗಿ

ಪರಿವರ್ತನೆಯಾಗಿದೆ. ಆದ್ದರಿಂದ ಇದನ್ನು ಕೇವಲ ರಾಜ್ಯ ಸರ್ಕಾರವೊಂದೇ ಈ ಸಣ್ಣ ಕೈಗಾರಿಕೆಗಳಿಗೆ ಬಂದಿರತಕ್ಕ ಈ ಕುತ್ತಿನಿಂದ ಆ ಸಣ್ಣಕೈಗಾರಿಕೆಗಳನ್ನು ಪಾರು ಮಾಡಲು ಕೇವಲ ರಾಜ್ಯಸರ್ಕಾರಕ್ಕೆ ಶಕ್ತಿ ಇಲ್ಲ ಎನ್ನತಕ್ಕ ಮಾತನ್ನು ನಾನು ಹೇಳಬೇಕಾಗಿರತಕ್ಕಂಥದ್ದು. ಜೊತೆಗೆ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರಗಳು ಏಕೀಭವಿಸಿ ಸಣ್ಣ ಕೈಗಾರಿಕೆಗಳಿಗೆ ಬಂದಿರತಕ್ಕ ಅವಸ್ಥೆಯನ್ನು ಅವರು ಬಹಳ ಸೂಕ್ಷ್ಮವಾಗಿ ಪರಿಶೀಲಿಸಿ ಅದಕ್ಕೆ ಯೋಗ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಕೇಂದ್ರಸರ್ಕಾರವನ್ನು ನಾವು ಇದರ ಬಗ್ಗೆ ಅವರನ್ನು ಕೇಳುತ್ತೇವೆ. ಏಕೆಂದರೆ ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಸೆಕ್ಟರ್‌ನಲ್ಲಿ ಲಕ್ಷಾಂತರ ಜನಗಳಿಗೆ ಉದ್ಯೋಗದ ವ್ಯವಸ್ಥೆಯನ್ನು ಕೊಡುವುದಕ್ಕೆ ಅವಕಾಶ ಇದೆ. ಆದ್ದರಿಂದ ನಾವು ಅವುಗಳನ್ನು ರಿವೈವ್ ಮಾಡುವುದರ ಮೂಲಕ ಈ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲಿಕ್ಕೆ ಸಾಧ್ಯ ಆಗುತ್ತದೆ. ಆದ್ದರಿಂದಲೇ ಈ 6 ಕೋಟಿ ರೂಪಾಯಿಯ ಇಂಡಸ್ಟ್ರಿಯಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಫಂಡ್ ಮಾಡಿ ಮತ್ತು ಹತ್ತು ಕೋಟಿ ರೂಪಾಯಿಗಳನ್ನು ಟೆಕ್ನಲಾಜಿಕಲ್ ಅಪ್‌ಗ್ರೆಡೇಷನ್ ಮತ್ತು ಮಾಡರ್ನೈಸೇಷನ್ ಫಂಡ್ ಎಂದು ಸ್ಥಾಪನೆ ಮಾಡಿದ್ದೇವೆ. ಆದರೆ ಇದು ಬಹಳ ಅಲ್ಪ ಎನ್ನತಕ್ಕದ್ದು ನನ್ನ ಮನಸ್ಸಿಗೂ ಕೂಡ ಹೊಳೆಯುತ್ತದೆ. ಎಲ್ಲಾದರೂ ಕೂಡ ಒಂದು ಕಡೆ ಪ್ರಾರಂಭ ಮಾಡಬೇಕು. ಆ ದೃಷ್ಟಿಯಿಂದ ಈ ಟೆಕ್ನಾಲಜಿ ಅಪ್‌ಗ್ರೇಡೇಷನ್ ಫಂಡನ್ನು ಕ್ರಮೇಣ ವೃದ್ಧಿ ಮಾಡಬೇಕು. ಕ್ರಮೇಣ ಅದನ್ನು ಜಾಸ್ತಿ ಮಾಡಬೇಕು ಎಂದು ಹೇಳಿ ಮಾನ್ಯ ಸದಸ್ಯರುಗಳ ವಾದವನ್ನು ನಾನು ಒಪ್ಪುತ್ತೇನೆ. ಪ್ರಾರಂಭಕ್ಕೋಸ್ಕರ ಇದನ್ನು ಮಾಡಿದ್ದೇವೆ. ಇದನ್ನು ಮುಂದುವರಿಸಲಿಕ್ಕೆ ಸದನ ಅವಕಾಶ ಕೊಡುತ್ತದೆ ಹಾಗೆ ಎಂದು ಹೇಳಿ ನಾನು ಭಾವನೆ ಮಾಡುತ್ತೇನೆ. ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್ ವಿಚಾರ. ಕಾರ್ಖಾನೆಗಳನ್ನು ಮುಚ್ಚಿಬಿಡುತ್ತಿದ್ದೀರಿ ಎಂದು ಹೇಳಿದ್ದೀರಿ. ಇದರಲ್ಲಿ ನಿಮ್ಮ ಮಾರ್ಗದರ್ಶನ ನನಗೆ ಬೇಕು. ಎಷ್ಟು ವರ್ಷಗಳ ಕಾಲ ನಾವು ನೀವು ಕಾರ್ಖಾನೆಗಳ ನಷ್ಟವನ್ನು ಸಹಿಸಿಕೊಂಡು ಬರಬೇಕು ಯಾವ ಕಾರ್ಖಾನೆಗಳು ನಷ್ಟವನ್ನು ಅನುಕ್ರಮವಾಗಿ ಸಹಿಸಿಕೊಂಡು ಬರುತ್ತಿವೆಯೋ ಆ ಕಾರ್ಖಾನೆಗಳನ್ನು ನಾವು ನೀವು ಎಷ್ಟು ವರ್ಷಗಳ ಕಾಲ ಭರಿಸಬಹುದು. ನಮ್ಮ ಜನರಲ್ ರೆವಿನ್ಯೂನಿಂದ ನಮ್ಮ ಬಜೆಟರಿ ಸಪೋರ್ಟ್‌ನಿಂದ ಭರಿಸಬಹುದು? ಇದರ ಬಗ್ಗೆ ಒಂದು ರಾಷ್ಟ್ರೀಯ ಚರ್ಚೆ ಈಗಾಗಲೇ ಪ್ರಾರಂಭ ಆಗಿದೆ. ಆ ರಾಷ್ಟ್ರೀಯ ಚರ್ಚೆಯಲ್ಲಿ ಎರಡು ವಿಧವಾದಂತಹ ಅಭಿಪ್ರಾಯಗಳು ಬರುತ್ತಿವೆ. ಎರಡು ವಿಧವಾದ ಅಭಿಪ್ರಾಯಗಳಲ್ಲಿ ಒಂದು ಅಭಿಪ್ರಾಯ ಅಂದರೆ ಇಲ್ಲ ಖಾಸಗೀಕರಣ ಮಾಡಿ, ಇಲ್ಲದಿದ್ದರೆ ನಷ್ಟವನ್ನು ಅನುಕ್ರಮವಾಗಿ ಭರಿಸಿಕೊಂಡು ಬಂದಿರತಕ್ಕಂಥಹ ಕೈಗಾರಿಕೆಗಳನ್ನು ಉಳಿಸಿಕೊಳ್ಳಲಿಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ. ಉದಾಹರಣೆಗೆ ಎನ್‌ಜಿಇಎಫ್. ಹಾಗೆಯೇ ಮೈಸೂರು ಚಾಮುಂಡಿ ಮೆಷಿನ್ ಟೂಲ್ಸ್, ಹಾಗೆಯೇ ಮಂಡ್ಯ ಅಸಿಟೇಟ್ ಫ್ಯಾಕ್ಟರಿ. ಇವುಗಳೆಲ್ಲವೂ ಕೂಡ ಹುಟ್ಟಿದಾಗಲೇ ಬಾಲಗ್ರಹ ಪೀಡಿತವಾದಂತಹ ಕೆಲವು ಸಂಸ್ಥೆಗಳು ಆಗಿವೆ. ಆದ್ದರಿಂದ ಇವುಗಳನ್ನು ಇಟ್ಟು ಕೊಳ್ಳುವುದರಿಂದ ಯಾವ ವಿಧವಾದಂತಹ ಪುರುಷಾರ್ಥವನ್ನು ಸಾಧನೆ ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದಲೇ ನಾವು ಏಕಾ ಏಕ ಸರ್ಕಾರದವರು ಒಂದು ತೀರ್ಮಾನ ಮಾಡುವುದಕ್ಕೆ ಬದಲು ಅದಕ್ಕೆ ಪರಿಣಿತರ ಒಂದು ಅಭಿಪ್ರಾಯವನ್ನು ಪಡೆದು ಅವರ ಶಿಫಾರಸ್ಸಿನ ಆಧಾರದ ಮೇಲೆ ನಾವು ಇವುಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನಮ್ಮ ರಾಜ್ಯದಲ್ಲಿ 70-80 ಇಂತಹ ಉದ್ದಿಮೆಗಳು ಇವೆ. ಈ

ಉದ್ದಿಮೆಗಳ ಬಗ್ಗೆ ಬಂದ ಬಂದಂತಹ ಎಲ್ಲ ಸರ್ಕಾರಗಳೂ ಉಳಿಸಲಿಕ್ಕೆ ಪ್ರಯತ್ನ ಮಾಡಿದೆ. ಆ ಉದ್ದಿಮೆಗಳನ್ನು ಸರಿಯಾದ ಆಧಾರದ ಮೇಲೆ ನಿಲ್ಲಿಸಲಿಕ್ಕೆ ಪ್ರಯತ್ನ ಮಾಡಿದೆ. ಆದರೆ ಒಂದಲ್ಲ ಒಂದು ಕಾರಣದಿಂದ ಬಹುತೇಕ ಕಾರಣಗಳು ಏನು ಇವೆ ಎಂದರೆ ಹೊರಗಡೆಯಿಂದ ಕಾಂಪಿಟೆಷನ್ ಆಗಿರುವುದು. ಆದ್ದರಿಂದ ಈ ನಮ್ಮ ಕಾರ್ಖಾನೆಗಳು ತಮ್ಮ ಕಾಲ ಮೇಲೆ ನಿಲ್ಲುವಂತಹ ಶಕ್ತಿಗಳನ್ನು ಕಳೆದುಕೊಂಡಿದ್ದಾವೆ. ಆದ್ದರಿಂದ ಒಂದು ಕಮೀಷನ್ ಏರ್ಪಾಡು ಮಾಡುತ್ತೇವೆ. ಅವರು ಅತೀ ಶೀಘ್ರದಲ್ಲಿ ಒಂದು ವರದಿಯನ್ನು ಕೊಡುತ್ತಾರೆ. ಆ ವರದಿ ಬಂದ ಮೇಲೆ ಆ ವರದಿಯನ್ನು ನಾನು ಸಭೆಯ ಮುಂದೆ ಇಡುತ್ತೇವೆ. ಆ ವರದಿಯ ಆಧಾರದ ಮೇಲೆ ನಾವು ನೀವು ಒಟ್ಟಿಗೇ ಸೇರಿ ಯಾವುದಾದರೂ ಯೋಗ್ಯವಾದ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ನಮಗೆ ಅವಕಾಶ ಸಿಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಎ. ರಾಮದಾಸ್ : ಬಹಳ ಸ್ವಾಗತವಾದಂತಹ ವಿಚಾರ. ನಿನ್ನೆ ಕೂಡ ಸ್ವಾಗತ ಮಾಡಿದ್ದೇವೆ. ಬಹಳ ಪ್ರಮುಖವಾದಂತಹ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ ಸ್ವಾಗತ ಮಾಡುತ್ತೇನೆ. ಆದರೆ ಒಂದು ಅಂಶ ಹೇಳಿದಿರಿ. ವರದಿ ಬರುವವರೆಗೆ ಈ ಕಾರ್ಖಾನೆಗಳಲ್ಲಿರುವ ಕಾರ್ಮಿಕರಿಗೆ ವಿ.ಆರ್.ಎಸ್. ತೆಗೆದುಕೊಳ್ಳಬೇಕೆಂದು ಹೇಳಿ ಕಂಪಲ್ಸರಿಯಾಗಿ ನೋಟೀಸ್ ಬೋರ್ಡ್‌ನಲ್ಲಿ ಹಾಕಿ ತೆಗೆದುಕೊಳ್ಳದೇ ಇರುವವರನ್ನು ಬೇರೆ ಕಡೆಗೆ ಹಾಕುವಂತಹ ಈ ವ್ಯವಸ್ಥೆ ಇದೆಯಲ್ಲಾ ಇದು ಆಗಬಾರದು. ನಿಮ್ಮ ಸರ್ಕಾರದ ನಿರ್ಧಾರವನ್ನು ನಾವು ಖಂಡಿತವಾಗಿ ಸ್ವಾಗತ ಮಾಡುತ್ತೇವೆ. ಆ ವರದಿ ಬರುವವರೆಗೆ ದಯವಿಟ್ಟು ಅವರಿಗೆ ಕಾಲಾವಕಾಶ ಕೊಟ್ಟರೆ ಜೀವ ಉಳಿಯುತ್ತದೆ ಎನ್ನುವ ವಿಚಾರ ಇದೆ. ಕಾರ್ಮಿಕರ ಹಿತ ಕಾಪಾಡಬೇಕಾಗುತ್ತದೆ ಎನ್ನುವ ಮಾತನ್ನು ಮಾತ್ರ ನಾನು ಕೇಳುತ್ತಿದ್ದೇನೆ.

ಶ್ರೀ ಪಿ.ಎಚ್. ಪೂಜಾರ್ : ಬಾಗಲಕೋಟೆಯ ವಿಚಾರ ಕೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳ ಉತ್ತರ ಮುಗಿದ ಮೇಲೆ ಕ್ಲಾರಿಫಿಕೇಷನ್ ಕೇಳಿ. ನಾನು ಅಲೋ ಮಾಡುತ್ತೇನೆ. ಒಂದೇ ಸಲ ಎಲ್ಲರೂ ಎದ್ದು ಕೇಳಿದರೆ ನಾನೇನು ಮಾಡಲಿ? ಉತ್ತರ ಪೂರ್ತಿ ಮುಗಿಯಲಿ, ಆ ನಂತರ ಕೇಳಿ.

ಶ್ರೀ ಎಸ್.ಎಂ. ಕೃಷ್ಣ : ಸಕ್ಕರೆ ಕಾರ್ಖಾನೆಗಳಿಗೆ ಬಂದಿರತಕ್ಕಂಥಹ ಅಥವಾ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಭವ ಆಗಿರತಕ್ಕಂಥ ಒಂದು ವಿಶೇಷವಾದಂತಹ ಪರಿಸ್ಥಿತಿಯತ್ತ ಮಾನ್ಯ ಸದಸ್ಯರುಗಳು ಸರ್ಕಾರದ ಗಮನವನ್ನು, ಸದನದ ಗಮನವನ್ನು ಸೆಳೆದಿದ್ದಾರೆ. ಹಲವಾರು ಕಾರ್ಖಾನೆಗಳಲ್ಲಿ ಅಥವಾ ಬಹುತೇಕ ಕಾರ್ಖಾನೆಗಳಲ್ಲಿ ಈ ದಿವಸ ಎರಡು ಬೆಳವಣಿಗೆಗಳು ಬಹಳ ಕಳವಳಕಾರಿ ಆಗಿರುವಂತಹದು ಆಗಿದೆ. ಒಂದು ಬೆಳವಣಿಗೆ ಅಂದರೆ ಉಗ್ರಾಣಗಳಲ್ಲಿ ಸಕ್ಕರೆ ಮೂಟೆಗಳು ಇವತ್ತು ಶೇಖರಿಸಲ್ಪಡುತ್ತಿವೆ. ಎರಡನೆಯದು ಯಾವ ರೈತ ಕಬ್ಬನ್ನು ಬೆಳೆದು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬನ್ನು ತೆಗೆದುಕೊಂಡು ಹೋಗಿ ಕೊಟ್ಟಿದ್ದಾನೆ, ಅವನಿಗೆ ಯಾವ ಪ್ರತಿಫಲವೂ ಕೂಡ ಇನ್ನೂ ಸಿಕ್ಕಲಿಲ್ಲ ಎನ್ನತಕ್ಕ ದೂರುಗಳು ಬಹುತೇಕ ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ಬರುತ್ತಿದೆ. ಇದರ ಬಗ್ಗೆ ನಾವು ಶುಗರ್ ಇಂಡಸ್ಟ್ರಿ ಬೆಳವಣಿಗೆ ಬಗ್ಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ, ಈ ಎರಡೂ ಸರ್ಕಾರಗಳು ಜೊತೆಗೆ ಸೇರಿ ಈ ಒಂದು

ವಿಶೇಷವಾದಂತಹ ಪರಿಸ್ಥಿತಿಯನ್ನು ಸುಧಾರಣೆ ಮಾಡಲಿಕ್ಕೆ ನಾವು ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರ ಈಗಾಗಲೇ ಹೊರಗಡೆಯಿಂದ ಬರತಕ್ಕ ಸಕ್ಕರೆ ಮೇಲೆ ಸುಮಾರು 65 ಅಥವಾ 75 ಪರ್ಸೆಂಟ್ ಸುಂಕವನ್ನು, ಇಂಪೋರ್ಟ್ ಡ್ಯೂಟಿಯನ್ನು ವಿಧಿಸಿದ್ದಾರೆ. ಆದ್ದರಿಂದ ಬಹಳ ಮಟ್ಟಿಗೆ ಹೊರಗಡೆ ದೇಶಗಳಿಂದ ಬರತಕ್ಕ ಸಕ್ಕರೆಗೆ ಇವತ್ತು ನಾವು ಒಂದು ಕಡಿವಾಣವನ್ನು ಹಾಕಿದ್ದೇವೆ. ಅದು ಒಂದು ಯೋಗ್ಯವಾದ ಕ್ರಮ. ಕೇಂದ್ರ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಏಕೆಂದು ಹೇಳಿದರೆ ಇದು ಬಹಳ ಹಿಂದೆನೇ ಆಗಬೇಕಾದಂತಹ ಬೆಳವಣಿಗೆ. ಅದು ಕಳೆದ ಒಂದು ವರ್ಷದಿಂದ ಜಾರಿಗೆ ಬಂದಿರತಕ್ಕದ್ದು. ಆದರೆ ನಮ್ಮ ಸಕ್ಕರೆ ರಫ್ತಾಗಲಿಕ್ಕೆ ಏನು ಮಾಡಬೇಕು ಎಂಬ ವಿಚಾರದ ಬಗ್ಗೆ ಹೇಳುವುದಾದರೆ ಇದು ನಮ್ಮ ರಾಜ್ಯ ಸರ್ಕಾರದ ಹತೋಟಿಯನ್ನು ಮೀರಿರತಕ್ಕಂಥ ವಿಚಾರ. ಕೇಂದ್ರ ಸರ್ಕಾರದವರು ಇದರ ಬಗ್ಗೆ ವಿಶೇಷವಾದಂತಹ ಗಮನವನ್ನು ಹರಿಸಬಹುದು. ಆದರೆ ನಾವು ನಮ್ಮ ಸೀಮಿತವಾದಂತಹ ಕ್ಷೇತ್ರದಲ್ಲಿ ಪರ್ಚೇಸ್ ಟ್ಯಾಕ್ಸ್ ಫ್ರಂ ಶುಗರ್ ಕೇನ್ ಹತ್ತು ಪರ್ ಟನ್ ಮತ್ತು ಎಂಟ್ರಿ ಟ್ಯಾಕ್ಸ್ 2 ರಿಂದ 1, ಮತ್ತು ರೋಡ್ ಟ್ಯಾಕ್ಸ್ 10 ರೂಪಾಯಿನಿಂದ 5 ರೂಪಾಯಿ ಪರ್ ಟನ್. ಇದು ಇನ್ ಅಡಿಷನ್ ಟು ದಿ ರಿಬೇಟ್, ಈ ರಿಬೇಟ್ ಸಕ್ಕರೆ ಕಾರ್ಖಾನೆಗಳಿಗೆ ಮುಂದುವರಿಯುತ್ತದೆ.

ಶ್ರೀ ಉಮೇಶ್ ಕತ್ತಿ : ಸಕ್ಕರೆ ಕಾರ್ಖಾನೆಗಳಲ್ಲಿ ಇವತ್ತಿನ ದಿವಸ 1500 ಕೋಟಿ ದಾಸ್ತಾನು ಇದೆ ಒಂದು ಕಡೆ ರೈತರಿಗೆ ದುಡ್ಡುಕೊಡುವುದಕ್ಕೆ ಆಗುತ್ತಿಲ್ಲ. ಇನ್ನೊಂದು ಕಡೆ ಟ್ಯಾಕ್ಸ್‌ನಿಂದ ಸಕ್ಕರೆ ಕಾರ್ಖಾನೆಗಳಿಗೆ ಸಾಕಷ್ಟು ತೊಂದರೆ ಬಂದಿದೆ. ಈ ಪರ್ಚೇಸ್ ಟ್ಯಾಕ್ಸ್ ಬಗ್ಗೆ ಮಹಾರಾಷ್ಟ್ರದಲ್ಲಿರುವಂತೆ ಪದ್ಧತಿಯನ್ನು ಅವಳಡಿಸಬೇಕು ಎಂದು ನಾವು ಈಗಾಗಲೇ ವಿನಂತಿ ಮಾಡಿದ್ದೇವೆ. ಏಕೆಂದರೆ ಮಹಾರಾಷ್ಟ್ರದಲ್ಲಿ ಪ್ರತಿ ಟನ್‌ಗೆ 20 ರೂಪಾಯಿ ಪರ್ಚೇಸ್ ಟ್ಯಾಕ್ಸ್ ಹಾಕಿ 8 ರೂಪಾಯಿ ರಿಬೇಟ್ ಕೊಡುತ್ತಾರೆ. ಆ ರೀತಿ ನಮ್ಮಲ್ಲೂ ಮಾಡಿದರೆ ಇನ್ನೂ ರೈತರಿಗೆ ಹೆಚ್ಚಿನ ಯೋಗ್ಯ ಬೆಲೆ ಕೊಡುವುದಕ್ಕೆ ಸಾಧ್ಯ ಆಗುತ್ತದೆ. ಪರ್ಚೇಸ್ ಟ್ಯಾಕ್ಸ್‌ನಲ್ಲಿ ರಿಬೇಟ್ ಕೊಡಬೇಕು. ತಾವು ಸೆಸ್‌ನಲ್ಲಿ ಏನು ಕಡಿಮೆ ಮಾಡಿದ್ದೀರಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಅದರ ಜೊತೆಗೆ ಪರ್ಚೇಸ್ ಟ್ಯಾಕ್ಸ್‌ನಲ್ಲಿ ಮಹಾರಾಷ್ಟ್ರದವರು ಮಾಡಿರುವ ತರಹ 20 ರೂಪಾಯಿ ಮಾಡಬೇಕು ಅಥವಾ 8 ರೂಪಾಯಿ ರಿಬೇಟ್ ಕೊಡುತ್ತಾರೆ, ಆ ರೀತಿ ನೀವು ರಿಬೇಟ್ ಕೊಡುವುದನ್ನು ಬಿಡಿ. ಆದರೆ ನೀವು 20 ರೂಪಾಯಿ ಪರ್ ಟನ್ ಹಾಕಿದರೆ ಬಹಳ ಒಳ್ಳೆಯದಾಗುತ್ತದೆ ಎಂದು ಮಾನ್ಯ ಅಧ್ಯಕ್ಷರ ಮೂಲಕ ಹೇಳಬಯಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಈಗ ಸಕ್ಕರೆ ಕೊಟ್ಟಿರುವಂತಹ ಕನ್ಸಿಷನ್ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ. ಅದರೊಂದಿಗೆ ಮಾನ್ಯ ಸಿಂಧ್ಯಾರವರು ಹೇಳಿದರು. ಹತ್ತು ರೂಪಾಯಿ ಕಡಿಮೆ ಮಾಡಿದ್ದೀರಿ. 65 ರಿಂದ 55 ರೂಪಾಯಿಗೆ ಮಾಡಿದ್ದೀರಿ. ಅದನ್ನು 25ಕ್ಕೆ ಕಡಿಮೆ ಮಾಡಬೇಕು. ಇವತ್ತು ಸಕ್ಕರೆ ಉತ್ಪಾದನೆ ಸೆಕೆಂಡರಿ ಆಗಿದೆ. ಏಕೆಂದರೆ ಕನ್‌ವರ್ಷನ್ ಛಾರ್ಜಸ್ 1700 ನಿಂದ 1800 ಆದರೆ ನಾವು ಸಕ್ಕರೆಯನ್ನು ಮಾರುವಂತಹದು 1200 ರಿಂದ 1300 ಅಥವಾ 1310 ಮ್ಯಾಗ್ಸಿಮಮ್ ಹೋಗುತ್ತದೆ. ಆಗ ನಮ್ಮ ರೈತರಿಗೆ ಖಂಡಿತವಾಗಿ ಇದರಿಂದ ಹಣವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಸ್ವಲ್ಪವಾದರೂ ಅವರಿಗೆ ಸಹಾಯ ಮಾಡಬೇಕು. ನಮ್ಮ ಸಮಸ್ಯೆ ಏನು ಅಂದರೆ ಕೇಸ್ ಕಡಿಮೆ ಆಗುತ್ತದೆ. ಬೇರೆ ಕಡೆಯಿಂದ

ಟ್ರಾನ್ಸ್‌ಪೋರ್ಟ್ ಮಾಡಲು ಏನಾದರೂ ಅಸಿಸ್ಟೆನ್ಸ್ ಸಿಗುವಂತಹದು ಮಾಡಲಿಕ್ಕೆ ಸಾಧ್ಯವಾದರೆ ಅನುಕೂಲ. ಕೋ ಜನರೇಷನ್ ವಿಚಾರ. ಸಾಮಾನ್ಯವಾಗಿ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕೋ ಜನರೇಷನ್‌ಗೆ ಹೋಗದಿದ್ದರೆ ಸಕ್ಕರೆ ಕಾರ್ಖಾನೆಗಳು ಉಳಿದುಕೊಳ್ಳುವುದಕ್ಕೆ ಸಾಧ್ಯ ಆಗುವುದಿಲ್ಲ. ಆದ್ದರಿಂದ ಸರ್ಕಾರವೇ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಸಕ್ಕರೆ ಕಾರ್ಖಾನೆಗಳಿಗೆ ಹೆಲ್ಪ್ ಮಾಡುವಂತಹದನ್ನು ಮಾಡಬೇಕು.

ಶ್ರೀ ಸಿ. ಭೈರೇಗೌಡ : ರೈತರ ಬಾಕಿಯನ್ನು ದಯವಿಟ್ಟು ಏನಾದರೂ ಮಾಡಿ ಕೊಡಿಸಿಬಿಡಿ. ಯಾವ ತರಹ ಮಾಡುತ್ತೀರೋ ಅದು ನಿಮಗೆ ಬಿಟ್ಟಿದ್ದು, ಸಕ್ಕರೆ ಬೆಳೆದವರ ಗತಿ ಏನಾಗಬೇಕು? ರೈತರಿಗೆ ಬರಬೇಕಾದ ಬಾಕಿ ಬರಬೇಕು. ಕಷ್ಟಪಟ್ಟು ಬೆವರು ಸುರಿಸಿ ಬೆಳೆದಿರತಕ್ಕಂಥಹದಕ್ಕೆ ಒಂದು ವರ್ಷ, ಆರು ತಿಂಗಳು ಕಾಯಬೇಕು ಎಂದರೆ ಆ ರೈತರಿಗೆ ಎಷ್ಟು ಹಿಂಸೆ ಆಗುತ್ತದೆ. ದಯವಿಟ್ಟು ಆ ಬಾಕಿ ಕೊಡಿಸುವುದಕ್ಕೆ ನೀವು ಯಾವ ರೀತಿ ಹೇಳುತ್ತೀರೋ, ಏನು ಹೇಳುತ್ತೀರೋ, ದಯವಿಟ್ಟು ಬಾಕಿ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿ.

12.10 ಪಿ.ಎಂ.

ಶ್ರೀ ಎಸ್.ಎಂ. ಕೃಷ್ಣ : ಇದೊಂದು ಅಸಹನೀಯ ಬೆಳವಣಿಗೆ. ರೈತ ಬೆವರು ಸುರಿಸಿ, ಕಷ್ಟಪಟ್ಟು, ಹಗಲು-ರಾತ್ರಿ ಕಬ್ಬನ್ನು ಮಕ್ಕಳ ರೀತಿಯಲ್ಲಿ ಪೋಷಣೆಮಾಡಿ ನಂತರ ಕಟಾವು ಮಾಡಿ ಸಕ್ಕರೆ ಕಾರ್ಖಾನೆಗೆ ಕೊಡುತ್ತಾನೆ. ತಮಗೆ ಉದಾಹರಣೆ ಹೇಳಬೇಕಾದರೆ, ಚಾಮರಾಜನಗರದ ಕುಂತೂರು ಸಕ್ಕರೆ ಕಾರ್ಖಾನೆಯಿಂದ ತಮಗೆ ಬರಬೇಕಾಗಿರುವ ಬಾಕಿ ಹಣವನ್ನು ಕೊಡಿಸಿಕೊಡಬೇಕೆಂದು ಒತ್ತಾಯಿಸಲು ರೈತರು ನಮ್ಮ ಮನೆ ಮುಂದೆ ಸೀಮೆಎಣ್ಣೆ ಸುರಿದುಕೊಂಡು ಇಮ್ಮೊಲೇಟ್ ಮಾಡಿಕೊಳ್ಳುತ್ತೇವೆಂದು ಬಂದಿದ್ದರು. ಅವರು ಹೇಳದೇ ಬಂದಿದ್ದರೆ ಅದು ಬೇರೆ ವಿಚಾರವಾಗುತ್ತಿತ್ತು. ಅವರು ಮುಂಚೆಯೇ ಹೇಳಿ ಬಂದಿದ್ದರಿಂದ ಪೊಲೀಸರು ಸುಮ್ಮನಿರುವುದಕ್ಕೆ ಸಾಧ್ಯವೇ? ಯಾರಾದರೂ ನಾವು ಮುಖ್ಯಮಂತ್ರಿಯವರ ಮನೆ ಮುಂದೆ ಸೀಮೆಎಣ್ಣೆ ಸುರಿದುಕೊಂಡು ಸೆಲ್ ಇಮ್ಮೊಲೇಟ್ ಮಾಡಿಕೊಳ್ಳುತ್ತೇವೆಂದು ಮುಂಚಿತವಾಗಿಯೇ ಪತ್ರಿಕಾ ಪ್ರಕಟಣೆ ಕೊಟ್ಟು ನಂತರ ಅವರು ಬಸ್ಸಿನಲ್ಲಿ ಬೆಂಗಳೂರಿಗೆ ಬಂದರೆ ಪೊಲೀಸರು ಸುಮ್ಮನಿರಲು ಸಾಧ್ಯವೇ? ಪೊಲೀಸರು ಕಾನೂನಿನ ಪ್ರಕಾರ ಏನು ಕ್ರಮ ಕೈಗೊಳ್ಳಬೇಕಿತ್ತೋ ಅದನ್ನು ಮಾನ್ಯ ಗೃಹ ಸಚಿವರು ಮಾಡಿಸಿದರು. ಅನಂತರ, ಚಾಮರಾಜನಗರದ ಅತಿರಥ ಮಹಾರಥರಾದ ಜನ ಪ್ರತಿನಿಧಿಗಳು ಬಂದು ಸೀಮೆಎಣ್ಣೆ ಸುರಿದುಕೊಂಡು ಸೆಲ್ಫ್ ಇಮ್ಮೊಲೇಟ್ ಮಾಡಿಕೊಳ್ಳುವುದನ್ನು ಬಿಟ್ಟುಬಿಡುತ್ತೇವೆ, ನಾವು ಅವರನ್ನೇ ಕರೆದುಕೊಂಡು ಬರುತ್ತೇವೆಂದು ಹೇಳಿದರು. ನಾನು ಅವರುಗಳನ್ನು ಕರೆಸಿ ಅವರೊಂದಿಗೆ ಮಾತನಾಡಿದೆ. ಸಭೆಯಲ್ಲಿ ಅವರ ಪ್ರತಿನಿಧಿಗಳು, ಮಾನ್ಯ ಶಾಸನ ಸಭಾ ಸದಸ್ಯರು ಮತ್ತು ಸಕ್ಕರೆ ಸಚಿವರೂ ಸಹ ಇದ್ದರು. ಈ ಸಂದರ್ಭದಲ್ಲಿ ನಾನು ಸಕ್ಕರೆ ಸಚಿವರ ಶ್ರಮವನ್ನು ಬಹಳ ನೆನೆಸಿಕೊಳ್ಳಬೇಕಾಗಿದೆ. ಏಕೆಂದರೆ, ಸಕ್ಕರೆ ಕಾರ್ಖಾನೆಯ ಮಾಲೀಕರು ಚೆನ್ನೈನಲ್ಲಿದ್ದಾರೆ. ಈಗಾಗಲೇ ಕಾರ್ಖಾನೆಗೆ ಸಂಬಂಧಿಸಿದಂತೆ ಮೂರು ಬಾರಿ ಕೈ ಬದಲಾವಣೆಯಾಗಿದೆ. 1980ರ ದಶಕದಲ್ಲಿ ಅದು ಸಹಕಾರಿ ಸಕ್ಕರೆ ಕಾರ್ಖಾನೆಯಾಗಿತ್ತು. ನಂತರ ಖೋಡೆ ಕಾರ್ಖಾನೆಯಾಗಿ, ನಾಗಾರ್ಜುನ ಕಾರ್ಖಾನೆಯಾಗಿ ಈಗ ಅರಣ್ ಕಾರ್ಖಾನೆಯಾಗಿದೆ. ಸಕ್ಕರೆ ಕಾರ್ಖಾನೆಯ ಮಾಲೀಕರು ಚೆನ್ನೈನಲ್ಲಿದ್ದುದರಿಂದ

ಅವರನ್ನು ಹುಡುಕುವುದರಲ್ಲೇ ಸಕ್ಕರೆ ಸಚಿವರು ಒಂದೂವರೆ ದಿವಸ ಕಳೆದರು. ವಿಶೇಷ ಕಸರತ್ತು ಮಾಡಿದರೂ ಮಾಲೀಕರು ಸಿಗಲಿಲ್ಲ. ಮಾಲೀಕರ ಸಂಬಂಧಿಕರೊಬ್ಬರು ಬೆಂಗಳೂರಿನಲ್ಲಿ ಸಿಕ್ಕಿದ್ದರಿಂದ ಕೊನೆಗೆ ಅವರನ್ನು ಚೆನ್ನೈಗೆ ಕಳುಹಿಸಿ ಅವರ ಮುಖಾಂತರ ಮಾಲೀಕರನ್ನು ಕರೆಸಿಕೊಂಡು, ಯುಗಾದಿ ಹಬ್ಬಕ್ಕೆ ಮುನ್ನ ಸುಮಾರು.......

ಶ್ರೀ ಎ.ಆರ್. ಕೃಷ್ಣಮೂರ್ತಿ : ಐದು ಕೋಟಿ ರೂಪಾಯಿಗಳಲ್ಲಿ ನಾಲ್ಕು ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಡುವಂಥ ವ್ಯವಸ್ಥೆ ಮಾಡಿದರೂ ಆ ಹಣ ಕೂಡ ಇನ್ನೂ ಪಾವತಿಯಾಗಿಲ್ಲ. ತೀರ್ಮಾನವಾಗಿರುವುದಂತೂ ಸತ್ಯ. ಆದರೆ, ಆ ಹಣ ಇನ್ನು ಕೂಡ ರೈತರಿಗೆ ಪಾವತಿಯಾಗಿಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್ : ಅಪೆಕ್ಸ್ ಬ್ಯಾಂಕಿನಿಂದ ಸುಮಾರು ನಾಲ್ಕು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು, ಅದನ್ನು ಕೂಡಲೇ ರೈತರಿಗೆ ಪಾವತಿ ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಎಸ್.ಎಂ. ಕೃಷ್ಣ : ಅಪೆಕ್ಸ್ ಬ್ಯಾಂಕಿನವರಿಗೆ ಧನ್ಯವಾದಗಳು. ಕಾರ್ಖಾನೆ ಮಾಲೀಕರು ಯಾರೇ ಇರಲಿ, ಅವರು ನಾವು ರೈತರಿಗೆ ನಾಲ್ಕು ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಈಗಾಗಲೇ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ. ನಾವೂ ಕೂಡ ಮಧ್ಯೆ ಪ್ರವೇಶಿಸಿ ಬ್ಯಾಂಕುಗಳು ಕಾರ್ಖಾನೆ ಮಾಲೀಕರಿಗೆ ಮತ್ತು ರೈತರಿಗೆ ಹಣವನ್ನು ಪಾವತಿಸುವುದಕ್ಕೆ ಅಗತ್ಯವಾಗಿರುವ ವಿಶೇಷ ಕ್ರಮಗಳನ್ನು ಕೈಗೊಂಡಿದ್ದೇವೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಗೌರಿಬಿದನೂರು ಸಕ್ಕರೆ ಕಾರ್ಖಾನೆಯಲ್ಲೂ ಸಹ ಇದೇ ರೀತಿಯ ವಿಶೇಷವಾದ ಪರಿಸ್ಥಿತಿ ಉದ್ಭವಾಗಿದೆ ಮತ್ತು ಬಳ್ಳಾರಿಯ ಹೊಸಪೇಟೆ ಸಕ್ಕರೆ ಕಾರ್ಖಾನೆಯಲ್ಲೂ ಉದ್ಭವವಾಗಿದೆ. ಅದುದರಿಂದ, ವಿಶೇಷವಾಗಿರುವ ಬೆಳವಣಿಗೆಯನ್ನು ಗಮನಿಸಿ ಈ ಸಕ್ಕರೆ ಕಾರ್ಖಾನೆಗಳಲ್ಲಿ ಸರಿಯಾದ ಆಯಾಮವನ್ನು ಸೃಷ್ಟಿಸಬೇಕೆಂಬ ದೃಷ್ಟಿಯಿಂದ ನಾನು ಅತಿ ಶೀಘ್ರದಲ್ಲಿ ಸದರಿ ಸಕ್ಕರೆ ಕಾರ್ಖಾನೆಗಳ, ಸಹಕಾರಿ, ಖಾಸಗಿ ಮತ್ತು ಜಂಟಿ ವಲಯದ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳ ಸಭೆ ಕರೆದು, ಇವೊತ್ತು ಸಕ್ಕರೆ ಕಾರ್ಖಾನೆಗಳಿಗೆ ಬಂದಿರುವ ಆಪತ್ತು, ರೈತರಿಗೆ ಬಂದಿರುವ ಆಪತ್ತಾಗಿದೆ. ಈ ಒಂದು ವಿಶೇಷ ದೃಷ್ಟಿಯಿಂದ ನಾವು ಉದ್ಭವಿಸಿರುವ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಉಮೇಶ್ ವಿ. ಕತ್ತಿ : ಬೆಳಗಾಂ ಜಿಲ್ಲೆಯ ರಾಯಬಾಗ್ ಸಕ್ಕರೆ ಕಾರ್ಖಾನೆಯಲ್ಲೊಂದು ವಿಶೇಷವಾದಂಥ ಬೆಳವಣಿಗೆಯುಂಟಾಗಿರುವುದರಿಂದ ತಾವು ಏನು ಕ್ರಮ ಕೈಗೊಳ್ಳುತ್ತೀರೆಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ಏಕೆಂದರೆ, ಸುಮಾರು 52 ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದರೂ ಅಲ್ಲಿ ಸಕ್ಕರೆ ಇಲ್ಲ. ಇನ್ನು 23 ಕೋಟಿ ರೂಪಾಯಿಗಳಷ್ಟು ಹಣವನ್ನು ರೈತರಿಗೆ ಬಾಕಿ ಕೊಡಬೇಕಾಗಿದೆ. ಡಿ.ಸಿ.ಸಿ. ಬ್ಯಾಂಕ್‌ನವರು ಸಾಲ ಒದಗಿಸಿಕೊಡಬೇಕೆಂದು ಒತ್ತಾಯಿಸಿ ಇವೊತ್ತು ಬೆಳಿಗ್ಗೆಯಿಂದಲೇ ಧರಣಿ ಪ್ರಾರಂಭಿಸಿದ್ದಾರೆ. ಇದರ ಬಗ್ಗೆ ತಾವು ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ. ರಾಯಭಾಗ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯವರು ಜಿಲ್ಲೆಯ ಜನರನ್ನು ಇವೊತ್ತು ದಿಕ್ಕು ತಪ್ಪಿಸುವಂಥ ಕೆಲಸ

ಮಾಡುತ್ತಿದ್ದಾರೆ. ಅದೇ ರೀತಿ ಹಾವೇರಿಯಲ್ಲಿ ನೆಟ್‌ವರ್ಕ್ ಇರುವಂಥ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರ ಗ್ರಾಂಟ್ ಕೊಟ್ಟರೆ ಡಿ.ಸಿ.ಸಿ. ಬ್ಯಾಂಕ್ ನವರು ಸಾಲ ಕೊಡಬೇಕೆಂದು ನಬಾರ್ಡ್‌ನವರು ತಿಳಿಸಿದ್ದು, ಹಾವೇರಿ ಸಕ್ಕರೆ ಕಾರ್ಖಾನೆಯಲ್ಲಿ ಈಗಾಗಲೇ ಸಕ್ಕರೆ ಇರುವುದರಿಂದ ಈ ದಿಸೆಯಲ್ಲಿ ಅವರಿಗೆ ಸಹಾಯ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಸಿ. ಚನ್ನಿಗಪ್ಪ: ಗೌರಿಬಿದನೂರು ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದಂತೆ ಸುಮಾರು ಎರಡು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳಷ್ಟು ಬಾಕಿ ಇದೆ, ಇವೊತ್ತಿನವರೆವಿಗೂ ಪಾವತಿಯಾಗಿರುವುದಿಲ್ಲ. ನಮ್ಮದು ಒಣ ಭೂಮಿಯ ಪ್ರದೇಶವಾಗಿದ್ದು, ಒಣ ಭೂಮಿಯಲ್ಲಿ ಕಬ್ಬು ಬೆಳೆಯುವುದು ಬಹಳ ಕಷ್ಟವಾಗಿದೆ. ಪಿ.ಎಲ್.ಡಿ. ಬ್ಯಾಂಕಿಗೆ ಸಾಲ ಕಟ್ಟಲು ರೈತರ ಬಳಿ ಹಣವಿಲ್ಲ, ಸೊಸೈಟಿಯಿಂದಲೂ ಸಾಲ ಕೊಡುತ್ತಿಲ್ಲವಾದ್ದರಿಂದ, ಸುಮಾರು ಎರಡೂವರೆ ಕೋಟಿ ರೂಪಾಯಿಗಳಷ್ಟು ಬಾಕಿ ಹಣ ಬರಬೇಕಿರುವುದರಿಂದ ಇದನ್ನು ಬೇಗ ಕೊಡಿಸುವಂಥ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಸಕ್ಕರೆ ಕಾರ್ಖಾನೆ ವಿಚಾರದಲ್ಲಿ ಉದ್ಭವಿಸಿರುವ ಸಮಸ್ಯೆಗಳ ಕುರಿತು ಚರ್ಚಿಸಲು ತಮ್ಮೆಲ್ಲರನ್ನೂ ನಾವು ಕರೆಯುತ್ತೇವೆ. ಆ ಸಮಯದಲ್ಲಿ ಸಮಸ್ಯೆಗೆ ನಾವೆಲ್ಲರೂ ಒಟ್ಟಾಗಿ ಸೇರಿ ಪರಿಹಾರ ಕಂಡುಹಿಡಿಯುವುದಕ್ಕೆ ಪ್ರಯತ್ನಿಸೋಣ. ಮಾನ್ಯ ಸದಸ್ಯರಾದ ಸಿಂಧ್ಯರವರು ಮಾತನಾಡುತ್ತಾ, ಕಳೆದ ವರ್ಷದವರೆವಿಗೂ ಶೇಕಡ 20 ರಷ್ಟಿದ್ದ ವಿದ್ಯುತ್ ವಿತರಣೆ ಮತ್ತು ಪ್ರಸರಣಾ ನಷ್ಟ ಈ ವರ್ಷ ಶೇಕಡ 38ಕ್ಕೆ ಹೇಗೆ ಹೋಯಿತು ಎಂದು ಪ್ರಶ್ನಿಸಿದ್ದಾರೆ. ಏಕೆಂದರೆ, ನಾನು 1992, 93 ಮತ್ತು 94ನೇ ಇಸವಿಯಲ್ಲಿ ವಿದ್ಯುತ್ ಸಚಿವನಾಗಿದ್ದಾಗ ಶೇಕಡ 18 ರಷ್ಟು ವಿತರಣೆ ಮತ್ತು ಪ್ರಸರಣಾ ನಷ್ಟವಿದೆಯೆಂದು ವಿದ್ಯುತ್ ಮಂಡಳಿಯವರು ಹೇಳುತ್ತಿದ್ದರು. ಇತ್ತೀಚೆಗೆ ಮಾನ್ಯ ಪ್ರಧಾನ ಮಂತ್ರಿಗಳು ಕರೆದಿದ್ದಂಥ ಸಭೆಯಲ್ಲೂ ರಾಷ್ಟ್ರೀಯ ಸರಾಸರಿ ಶೇಕಡ 38 ರಿಂದ 40 ರಷ್ಟಿದೆಯೆಂಬುದು ಸಭೆಯಲ್ಲಿ ತೀರ್ಮಾನವಾಗಿರುವ ವಿಚಾರವಾಗಿದೆ. ಶೇಕಡ 20 ರಿಂದ 38 ರಷ್ಟು ಹೇಗಾಯಿತೆಂಬ ಆ ಗ್ರೋತ್ ಚೈನ್ ಅನ್ನು ನನಗೆ ಗುರ್ತಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ, ಇದರಲ್ಲಿ ನನ್ನ ಅಸಹಾಯಕತೆಯನ್ನು ಈ ದಿವಸ ವ್ಯಕ್ತಪಡಿಸುತ್ತಿದ್ದೇನೆ. ಏಕೆಂದರೆ, ಪ್ರತಿಯೊಬ್ಬ ಮುಖ್ಯಮಂತ್ರಿ ಕೂಡ ಒಪ್ಪಿರುವ ಅಂಶವೇನೆಂದರೆ, ಪ್ರತಿಯೊಂದು ರಾಜ್ಯದಲ್ಲೂ ಕೂಡ ಶೇಕಡ 30 ರಿಂದ 40 ರವರೆಗೆ.... ದೆಹಲಿಯಲ್ಲಿ ಕೂಡ ಶೇಕಡ 52 ರಷ್ಟಿದೆಯೆಂದು ಹೇಳುತ್ತಾರೆ. ಆದಕಾರಣ, ಹೇಗೆ ಈ ಬೆಳವಣಿಗೆ ಯುಂಟಾಯಿತೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಎಲ್ಲಿಯೋ ಒಂದು ಕಡೆ ನಾವು ಇವರ ಬಗ್ಗೆ ಸ್ವಲ್ಪ ಶಿಸ್ತು ತರಬೇಕೆನ್ನುವ ದೃಷ್ಟಿಯಿಂದ ಮುಂಬರುವ ನಾಲ್ಕು ವರ್ಷಗಳಲ್ಲಿ ಶೇಕಡ 9 ರಷ್ಟು ಕಡಿಮೆ ಮಾಡುವುದಕ್ಕೆ ಬೇಕಾದಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ಬಗ್ಗೆ ಆಯವ್ಯಯ ಅಂದಾಜು ಪತ್ರದಲ್ಲೂ ಸಹ ಪ್ರಕಟಿಸಿದ್ದೇವೆ. ಇದು ಹೇಗೆ ಸಾಧ್ಯವೆಂದರೆ, ಟ್ರಾನ್ಸ್‌ಮಿಷನ್ ಲೈನ್ಸ್, ಸಬ್ ಸ್ಟೇಷನ್ ಹಾಕುವುದರ ಮೂಲಕ, ಹೊಸ ಟ್ರಾನ್ಸ್‌ಫಾರ್ಮರ್ ಹಾಕುವುದರ ಮೂಲಕ, ಕೆಪ್ಯಾಸಿಟರ್ ಅಳವಡಿಸುವುದರ ಮೂಲಕ ಇನ್ನೂ ಹಲವಾರು ವಿಧಾನಗಳಿಂದ ಸೋರಿ ಹೋಗುತ್ತಿರುವ ವಿದ್ಯುತ್‌ನ್ನು ನಾವು ತಡೆಹಿಡಿಯುವುದಕ್ಕೆ ಸಾಧ್ಯ. ಇನ್ನು ವಿದ್ಯುತ್ ಕಳ್ಳತನದ ಕುರಿತು ಹೇಳುವುದಾದರೆ, ಇವೊತ್ತು ವಿದ್ಯುತ್ ಕಳ್ಳತನ ಜಾಸ್ತಿ ನಡೆಯುತ್ತಿರುವುದರಿಂದ

ಇದನ್ನು ತಡೆಗಟ್ಟುವ ಸಲುವಾಗಿ ನಾವು ಕಟ್ಟುನಿಟ್ಟಾಗಿ, ದಯಾದಾಕ್ಷಿಣ್ಯವಿಲ್ಲದೆ, ಯಾರ ಮರ್ಜಿಗೂ ಒಳಗಾಗದೆ ವಿದ್ಯುತ್ ಕಳ್ಳತನ ಮಾಡುವವರಿಗೆ ಮತ್ತು ಕಳ್ಳತನ ಮಾಡುವುದಕ್ಕೆ ಪ್ರೋತ್ಸಾಹ ನೀಡುತ್ತಿರುವ ವಿದ್ಯುತ್ ಮಂಡಳಿಯ ಜನರು, ಇವರಿಬ್ಬರೂ ಸಹ ಶಿಕ್ಷಾರ್ಹರು ಎಂದು ಸಂಬಂಧಿತ ಕಾನೂನಿಗೆ ಹೊಸದಾಗಿ ಈ ಅಧಿವೇಶನದಲ್ಲಿಯೇ ತಿದ್ದುಪಡಿ ತರಲು ಪ್ರಯತ್ನ ಪಟ್ಟಿದ್ದೇವೆ. ಬಹುಶಃ ನಾವುಗಳೆಲ್ಲರೂ ಮುಂದಿನ ಅಧಿವೇಶನದಲ್ಲಿ ಸೇರುವಷ್ಟರ ಹೊತ್ತಿಗೆ ಇದರಲ್ಲಿ ಗಮನಾರ್ಹ ಪ್ರಗತಿ ಸಾಧಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು 'ತತ್ಕಾಲ್ ಯೋಜನೆ' ಯನ್ನು ಯಾರಿಗೋಸ್ಕರ ಮಾಡಿದ್ದೀರಿ? ಎಂದು ಮಾನ್ಯ ಸದಸ್ಯರೊಬ್ಬರು ಕೇಳಿದ್ದಾರೆ. ನಾನು ಈ ಕುರಿತು ಹೇಳುವುದೇನೆಂದರೆ, ಯಾರಿಗೆ ಅದನ್ನು ಭರಿಸುವ ಶಕ್ತಿಯಿದೆಯೋ ಅವರು ಅದನ್ನು ಉಪಯೋಗಿಸಿಕೊಳ್ಳಲಿ. ತಮ್ಮ ಪಂಪುಸೆಟ್ಟುಗಳಿಗೆ ವಿದ್ಯುತ್ ಲೈನ್ ಹಾಕಿಕೊಟ್ಟು ವಿದ್ಯುತ್ ಸಂಪರ್ಕ ಕಲ್ಪಿಸಿಕೊಳ್ಳಲು ಪರವಾನಗಿ ಕೊಡಬೇಕೆಂದು ಕೋರಿ ಈಗಾಗಲೇ ವಿದ್ಯುತ್ ಮಂಡಳಿಯ ಮುಂದೆ ಸುಮಾರು ಒಂದು ಲಕ್ಷದಷ್ಟು ಅರ್ಜಿಗಳು ಬಂದಿವೆ. ಇದರಲ್ಲಿ 'ಕ್ಯೂ' ಇರುತ್ತದೆ. ಇವೊತ್ತು ಕೆಲವರಿಗೆ ಅವಸರವಿರುತ್ತದೆ, ವಿಶೇಷವಾದ ಕಾರಣಗಳೂ ಇರುತ್ತದೆ. ಆದುದರಿಂದ, 'ಕ್ಯೂ' ಒಳಗಡೆ ಅವರಿಗೊಂದು ಅವಕಾಶ ಮಾಡಿಕೊಟ್ಟಿದ್ದೇವೆ. ಯಾರು ಹಣವಂತರಿದ್ದಾರೋ ಅವರು ಮಾತ್ರ ಈ ತತ್ಕಾಲ್ ಯೋಜನೆಯಡಿ ಬರಲು ಸಾಧ್ಯ. ಸಾಧಾರಣವಾದ ಜನರು ಸದರಿ ಯೋಜನೆಯನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಯಾರು ಉಪಯೋಗಿಸಿಕೊಳ್ಳುತ್ತಾರೆ, ಅವರು ಮಾಡಿದರೆ ತೊಂದರೆ ಏನೂ ಇಲ್ಲ ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಭೂಕಂದಾಯವನ್ನು ಪಂಚಾಯಿತಿಗಳಿಗೆ ನೀಡುವುದು ಹೇಗೆ ಸಾಧ್ಯ ಎಂದು ಕೇಳಿದ್ದಾರೆ. ಏಕೆ ಸಾಧ್ಯವಾಗುವುದಿಲ್ಲ? ಭೂ ಕಂದಾಯವನ್ನು ಅವರು ವಸೂಲು ಮಾಡುವುದಕ್ಕೆ ಅವರ ಸಹಕಾರವನ್ನು ನಾವು ಅಪೇಕ್ಷಿಸುತ್ತೇವೆ. ಆದ್ದರಿಂದ ಒಂದು ಪ್ರಾಥಮಿಕ ಹಂತದಲ್ಲಿ ಅವರಿಗೂ ಕೂಡ ಭೂಕಂದಾಯದ ಮೇಲೆ ನಮ್ಮದೂ ಒಂದು ಭಾಗ ಇದೆ ಎನ್ನುವ ಅನಿಸಿಕೆ ಪಂಚಾಯಿತಿಗಳಿಗೆ ಬಂದಾಗ ಯಾವ ಜನರು ಭೂಕಂದಾಯವನ್ನು ಇವತ್ತು ಕೊಡುತ್ತಲೇ ಇಲ್ಲ, ಇವತ್ತು ಭೂಕಂದಾಯದ ವಸೂಲಿ ಶೇಕಡ 20 ರಷ್ಟು ಇರಬಹುದು, 30 ರಷ್ಟು ಇರಬಹುದೋ, ಇದನ್ನು ಹಳೆಯ ಹಿಂದಿನ ರೆವಿನ್ಯೂ ಸಚಿವರೇ ಹೇಳಬೇಕು.

ಶ್ರೀ ಬಿ. ಸೋಮಶೇಖರ್ : ತಾವು ವ್ಯಕ್ತಮಾಡಿರತಕ್ಕದ್ದು ಬಹಳ ಒಳ್ಳೆಯ ಯೋಚನೆ. ಆದರೆ ಭೂಕಂದಾಯವನ್ನು ಯಾವಾಗ ಫಿಕ್ಸ್ ಮಾಡಿದರೋ ಯಾವ ಕಾಲದಲ್ಲಿ ಆಗಿತ್ತೋ ಗೊತ್ತಿಲ್ಲ. ಆ ಭೂಕಂದಾಯವನ್ನು ಸಹಾ ಸರಿಯಾಗಿ ವಸೂಲಿ ಮಾಡುತ್ತಿಲ್ಲ. 64ರ ದಶಕದಲ್ಲಿ ಇವತ್ತು ಭೂಕಂದಾಯ ಒಂದಾಣೆ, ಎರಡಾಣೆ ಎಂದು ಇದ್ದರೂ ಅದನ್ನೂ ಕಲೆಕ್ಟ್ ಮಾಡುತ್ತಿಲ್ಲ. ಅದಕ್ಕೆ ವಿನಾಯಿತಿಯನ್ನು ಬೇರೆ ಕೊಡುತ್ತಿದ್ದೀರಿ. ನಾವು ಅನೇಕ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಶಿಕ್ಷಣ ಸುಧಾರಣೆ ಬಗ್ಗೆ ಇರಬಹುದು. ಮಾಹಿತಿ ತಂತ್ರಜ್ಞಾನದ ಬಗ್ಗೆ ಇರಬಹುದು, ಎಲ್ಲಾ ಈ ರೀತಿ ಸುಧಾರಣೆಗಳನ್ನು ಮಾಡಿದ್ದೇವೆ. ನನಗಾದರೂ ಅನ್ನಿಸುತ್ತದೆ, ಈ ಭೂಕಂದಾಯವನ್ನು ವೈಜ್ಞಾನಿಕವಾಗಿ ಫಿಕ್ಸ್ ಮಾಡುವುದಕ್ಕೆ ಒಂದು ಸಮಿತಿ ಅವಶ್ಯಕತೆ ಇತ್ತು. ಇದನ್ನು ನಮ್ಮ ಕಾಲದಲ್ಲೇ ಯೋಚನೆ ಮಾಡಿದ್ದವು. ಅಡಿಕೆ ಬೆಳೆಯತ್ತಕಂಥವರು, ಕಾಫಿ ಬೆಳೆಯತಕ್ಕವರು, ಜೋಳ ಬೆಳೆಯತಕ್ಕಂಥವರು, ಭೂಕಂದಾಯದಲ್ಲಿ ವರ್ಗೀಕರಣ ಏನು ಇದೆ, ಪ್ಲಾಂಟೇಷನ್ ಕ್ರಾಫ್ಸ್‌ಗೆ ಇರಬಹುದು, ನೀರಾವರಿ ಪ್ರದೇಶಕ್ಕೆ ಇರಬಹುದು, ಮತ್ತು ಬೇರೆ ಪ್ರದೇಶಕ್ಕೂ ಇರಬಹುದು,

ಈ ರೀತಿ ನಾಲ್ಕೈದು ವಿಭಾಗಗಳನ್ನು ಮಾಡಿ ವೈಜ್ಞಾನಿಕವಾಗಿ ಮೊದಲು ಫಿಕ್ಸ್ ಮಾಡಿಸಿ ಆಮೇಲೆ ಅದನ್ನು ಇಷ್ಟು ಪರ್‌ಸೆಂಟ್ ರಾಜ್ಯಕ್ಕೆ ಇರಲಿ, ಇಷ್ಟು ಪರ್‌ಸೆಂಟ್ ಪಂಚಾಯಿತಿಗೆ ಇರಲಿ ಎಂದು ಇದ್ದಿದ್ದರೆ ಅದನ್ನು ನಾವು ಸ್ವಾಗತ ಮಾಡಬಹುದಾಗಿತ್ತು. ಈಗಲಾದರೂ ಅದರ ಬಗ್ಗೆ ಒಂದು ಸಮಿತಿಯನ್ನು ಮಾಡಿ. ಏಕೆಂದರೆ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಅದರ ಬಗ್ಗೆ ತಾವು ಯೋಚನೆ ಮಾಡಿದರೆ ಬಹಳ ಒಳ್ಳೆಯದು.

ಶ್ರೀ ಎಸ್.ಎಂ. ಕೃಷ್ಣ: ಭೂಕಂದಾಯದಿಂದ ಸಾವಿರಾರು ಕೋಟಿ ರೂಪಾಯಿಗಳ ವರಮಾನ ಎಲ್ಲಿ ಬರುತ್ತದೆ?

ಶ್ರೀ ಬಿ. ಸೋಮಶೇಖರ್ : ಪ್ಲಾಂಟೇಷನ್ ಕ್ರಾಪ್ಸ್‌ಗೆ ವೈಜ್ಞಾನಿಕವಾಗಿ ಹಾಕಿದರೆ ಬರುತ್ತದೆ. ಎಲ್ಲದಕ್ಕೂ ಹಾಕಬೇಕಾಗುತ್ತದೆ. ಅವರಿಗೆ ನೀವು ವಿದ್ಯುತ್‌ನ್ನು ಕೊಡುತ್ತಿದ್ದೀರಿ, ಅವರಿಗೆ ನೀವು ನೀರನ್ನು ಕೊಡುತ್ತಿದ್ದೀರಿ. ನೀರಾವರಿ ಯೋಜನೆಗಳಿಗೆ ನಾವು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಎಲ್ಲಿ ನಾವು ಭತ್ತ ಬೆಳೆಯುವವರಿಗೆ, ಕಬ್ಬನ್ನು ಬೆಳೆಯುವವರಿಗೆ ಭೂಕಂದಾಯವನ್ನು ಹಾಕುತ್ತಿದ್ದೇವೆ? ಅನೇಕ ಜನ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ನಾನು ಇದನ್ನು ಹೇಳಿದ್ದೇನೆ. ಸರಿಯಾಗಿ ವಸೂಲು ಮಾಡುತ್ತಿಲ್ಲ. ಆದ್ದರಿಂದ ಅದನ್ನು ವೈಜ್ಞಾನಿಕವಾಗಿ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ: ಈ ವಾದ ಸರಣಿಯನ್ನು ನಾನು ಒಪ್ಪುತ್ತೇನೆ. ಈ ಸರ್ಕಾರದ ಘೋಷಿತ ನಿಲುವೇನೆಂದರೆ ಯೂಸರ್ಸ್ ಛಾರ್ಜ್ ಇರಲೇಬೇಕು. ಯಾರು ಸರ್ಕಾರದಿಂದ ಅನುಕೂಲವನ್ನು ಪಡೆಯುತ್ತಾರೆ, ಅವರು ಅದಕ್ಕೆ ಕಂದಾಯವನ್ನು ಕಟ್ಟಲೇಬೇಕು. ಇದು ರೆವಿನ್ಯೂಗೆ ಅನ್ವಯವಾಗುತ್ತದೆ. ನೀರು, ವಾಟರ್ ರೇಟ್ ಬೆಟರ್‌ಮೆಂಟ್ ಇವುಗಳೆಲ್ಲದಕ್ಕೂ ಅನ್ವಯ ವಾಗುತ್ತದೆ. ಆದರೆ ಜನರನ್ನು ಎತ್ತಿ ಕಟ್ಟಬೇಡಿ. ಕಟ್ಟಬೇಡಿ ಎಂದು ಹೇಳುವುದಿಲ್ಲ. ನೀವಲ್ಲ. ಹೊರಗಡೆ ಎತ್ತಿಕಟ್ಟುವ ಜನ ಇದ್ದಾರಲ್ಲಾ, ಅವರಿಗೆ ನಾನು ಹೇಳುತ್ತಿರುವುದು.

SRI B. SOMASHEKAR : It will be an unpleasant decision but we have to face it.

SRI S.M. KRISHNA : You are right. I am very grateful to the former Revenue Minister that he has come out with this suggestion. ತಮ್ಮ ಸೂಚನೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಅಂದರೆ ರೈತರ ಮೇಲೆ ಪ್ರಹಾರ ಮಾಡಿ ಎಂತಲ್ಲ. ಕನಿಷ್ಟವಾದ ಇವತ್ತು ನಮ್ಮ ಹಿರಿಯರ ಕಾಲದಲ್ಲಿ ಭೈರೇಗೌಡರ ತಂದೆಯವರು ನಮ್ಮ ತಂದೆಯವರು ಇದ್ದಂಥ ಕಾಲದಲ್ಲಿ ಮೊದಲು ಲ್ಯಾಂಡ್ ರೆವಿನ್ಯೂವನ್ನು ಕಟ್ಟುತ್ತಿದ್ದರು. ಏಕೆಂದರೆ ನಮಗೂ ಮಣ್ಣಿಗೂ ಏನು ನೆಂಟಸ್ತನ ಇದೆ. ಆ ನೆಂಟಸ್ತನ ಕಿತ್ತುಹೋಗಬಾರದು ಎಂದು ಹೇಳಿ ಕಟ್ಟುತ್ತಿದ್ದರು. ಚನ್ನಭೈರೇಗೌಡರು ಇದ್ದಾಗ. ಮೊದಲು ಲ್ಯಾಂಡ್ ರೆವಿನ್ಯೂವನ್ನು ಕಟ್ಟುತ್ತಿದ್ದರು. ಇವತ್ತು ಲ್ಯಾಂಡ್ ರೆವಿನ್ಯೂ ಅಂದರೆ ಕಸ ಕಡ್ಡಿ. ಯಾರೂ ಕಟ್ಟುವುದಿಲ್ಲ. ತಹಶೀಲ್ದಾರ್‌ಗಳು ಹೋದರೆ ಅವರಿಗೆ ಛೇರಾವೆ ಮಾಡುತ್ತಾರೆ. ನೀವಲ್ಲ ಮಾಡಿಸುವುದು? ಆ ರೀತಿ ಮಾಡಿಸುವ ದಂಧೆಯವರೇ ಬೇರೆಯವರು ಇದ್ದರೆ.

ಶ್ರೀ ಅರಗ ಜ್ಞಾನೇಂದ್ರ : ಈಗ ಹೋಗುವುದೇ ಇಲ್ಲ ಸಾರ್. ಮೊದಲು ಪಟೇಲರು, ಶ್ಯಾನುಭೋಗರು ಮನೆಯ ಬಾಗಿಲಿಗೆ ಹೋಗಿ ತೆಗೆದುಕೊಂಡು ಬರುತ್ತಿದ್ದರು. ಆ ವ್ಯವಸ್ಥೆಯೇ ಇಲ್ಲ. ವಿಲೇಜ್ ಅಕೌಂಟೆಂಟರು ಎಲ್ಲಿ ಹೋಗುತ್ತಾರೆ?

ಶ್ರೀ ಎಸ್.ಎಂ. ಕೃಷ್ಣ : ಆದುದರಿಂದಲೇ ಈಗ ವಿಲೇಜ್ ಅಕೌಂಟೆಂಟ್‌ಗಳನ್ನು ನಾವು ಈ ದಂಧೆಯಲ್ಲಿ ಅವರನ್ನು ಉಪಯೋಗಿಸಬೇಕು ಎಂದು ಮಾಡಿದ್ದೇವೆ. ಯಾವುದಾದರೂ ಒಂದು ವ್ಯವಸ್ಥೆ ಬೇಕಲ್ಲ. ಈಗ ನಾವು ಪಟೇಲರನ್ನು ನೇಮಿಸುವುದಕ್ಕೆ ಸಾಧ್ಯ ಇಲ್ಲ. ಶ್ಯಾನುಭೋಗರನ್ನು ಪುನಃ ಕರೆದುಕೊಂಡು ಬರುವುದಕ್ಕೆ ಸಾಧ್ಯವೇ? ಪಾಪ ಅವರೆಲ್ಲಾ ಹೋಗಿಬಿಟ್ಟರು. ಶ್ಯಾನುಭೋಗರುಗಳು, ಪಟೇಲರುಗಳೆಲ್ಲಾ. ಇವತ್ತು ಆಧುನಿಕ ಪಟೇಲರು, ಆಧುನಿಕ ಶ್ಯಾನುಭೋಗರುಗಳು ಯಾರು ಎಂದರೆ ಗ್ರಾಮ ಲೆಕ್ಕಿಗ ಮತ್ತು ಗ್ರಾಮಪಂಚಾಯಿತಿ ಸೆಕ್ರೆಟರಿ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ಲ್ಯಾಂಡ್ ರೆವಿನ್ಯೂವನ್ನು ಏರಿಸುವುದರ ಜೊತೆಗೆ ಲ್ಯಾಂಡನ್ನು ರೀ-ಕ್ಲಾಸಿಫಿಕೇಷನ್ ಕೂಡ ಮಾಡಬೇಕಾಗುತ್ತದೆ. ಏಕೆಂದರೆ ಸಾಕಷ್ಟು ಲ್ಯಾಂಡ್‌ಗಳು ಈಗಾಗಲೇ ಕನ್‌ವರ್ಷನ್ ಆಗಿದೆ. ಕೆಲವುಗಳನ್ನು ತೋಟವಾಗಿ ಕನ್‌ವರ್ಷನ್ ಮಾಡಿದ್ದಾರೆ. ಅಡಿಕೆ ತೋಟ ಮಾಡಿದ್ದಾರೆ. ತೆಂಗಿನ ತೋಟ ಮಾಡಿದ್ದಾರೆ ಖುಷ್ಕಿ ಲ್ಯಾಂಡ್‌ನಲ್ಲಿ. ಆದ್ದರಿಂದ ಇದೂ ಕೂಡ ಒಂದು ಅವಕಾಶವಾಗುತ್ತೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ದಯವಿಟ್ಟು ಉತ್ತರ ಮುಗಿಯುವವರೆಗೂ ಯಾರೂ ಓಡಾಡಬೇಡಿ. ಕ್ಲಾರಿಫಿಕೇಷನನ್ನು ಉತ್ತರ ಮುಗಿದ ಮೇಲೆ ಕೇಳಿ.

ಶ್ರೀ ಎಸ್.ಎಂ. ಕೃಷ್ಣ : ಇದರ ಬಗ್ಗೆ ಒಂದು ಚರ್ಚೆಯು ಪ್ರಾರಂಭವಾಗಲಿ ಎನ್ನುವ ಉದ್ದೇಶದಿಂದ ಈ ವಿಚಾರ ಪ್ರಸ್ತಾಪಕ್ಕೆ ಅರ್ಹವಾಗಿದೆ ಎಂದು ಹೇಳಿ ನಾನು ಭಾವನೆ ಮಾಡುತ್ತೇನೆ. ವಾಟರ್ ರೇಟ್ಸ್ ಮತ್ತು ಲ್ಯಾಂಡ್ ರೆವಿನ್ಯೂ ಇವುಗಳನ್ನು ನಾವು ಕಡ್ಡಾಯವಾಗಿ ವಸೂಲು ಮಾಡಬೇಕಾಗಿರತಕ್ಕ ಅನಿವಾರ್ಯತೆಯನ್ನು ಈ ಸದನದ ಮುಂದೆ ನಾನು ಮಂಡಿಸುತ್ತಿದ್ದೇನೆ. ಮಾನ್ಯ ಸೋಮಶೇಖರ್‌ರವರು ಇದಕ್ಕೊಂದು ಸಮಿತಿ ಮಾಡಿ ಎಂದು ಹೇಳಿದರು. ಆದರೆ ಈ ಸಮಸ್ಯೆ ನಮಗೆಲ್ಲರಿಗೂ ಅರ್ಥವಾಗಿರುವ ಸಮಸ್ಯೆ. ಆದರೆ ಈ ಸಮಸ್ಯೆಯ ಆಳ, ವ್ಯಾಪಕತೆ ಇವುಗಳನ್ನು ಗಮನಿಸಿ ಅಗತ್ಯಬಿದ್ದರೆ ಸಮಿತಿಯನ್ನು ಮಾಡೋಣ. ಆದರೆ ಸಮಿತಿಗಳು ಕೆಲವು ಸಮಯ ನಮ್ಮ ಸಹಾಯಕ್ಕೆ ಬರುತ್ತವೆ ಎನ್ನುವುದಕ್ಕೆ ಇದೊಂದು ಸಣ್ಣ ನಿದರ್ಶನ. ಇಲ್ಲದಿದ್ದರೆ ನೀವು ಸಮಿತಿಯನ್ನು ಮಾಡಿ ಎಂದು ಹೇಳುತ್ತಿರಲಿಲ್ಲ. ಆದ್ದರಿಂದ ನಾವು ಇದುವರೆಗೂ ಏನು ಸಮಿತಿಗಳನ್ನು ಮಾಡಿದ್ದೇವೆ. ಟಾಸ್ಕ್‌ಫೋರ್ಸ್‌ಗಳನ್ನು ಮಾಡಿದ್ದೇವೆ, ಮತ್ತೊಂದು ಮಾಡಿದ್ದೇವೆ, ಇವುಗಳೆಲ್ಲವೂ they also serve ಆಗಿ ಎಂದು ಇಂಗ್ಲೀಷ್‌ನಲ್ಲಿ ಹೇಳುತ್ತಾರಲ್ಲಾ, ಏಕೆಂದರೆ ನಾವು ಇಲ್ಲಿ ಕೂತಿರತಕ್ಕಂಥವರು ಎಲ್ಲಾ ವಿಚಾರಗಳ ಮೇಲೂ ನಾವು ಅಧಿಪತ್ಯವನ್ನು ಸ್ಥಾಪಿಸಿದವರಲ್ಲ. ಎಷ್ಟೋ ವಿಚಾರಗಳನ್ನು ನಾವು ತಿಳಿದುಕೊಳ್ಳಬೇಕಾಗಿದೆ. ವಯಸ್ಸಾಗಿರುತ್ತದೆ. ಆದರೆ ವಿಚಾರಗಳನ್ನು ನಮ್ಮ ವಿಶ್ವೇಶ್ವರ ಹೆಗಡೆಯವರಿಗೆ ತಿಳಿದಂಥ ವಿಚಾರಗಳು ನಮಗೆ ತಿಳಿಯದೆ ಇರಬಹುದು. ವಯಸ್ಸು ನನಗೆ ಅವರಿಗಿಂತ ಎರಡರಷ್ಟು ಜಾಸ್ತಿಯಾಗಿದೆ. ಆದ್ದರಿಂದ

ನಾವು ತಿಳಿದುಕೊಳ್ಳುವುದಕ್ಕೆ ಸದಾ ಸಿದ್ಧರಾಗಿದ್ದೇವೆ. ಹಿಂದೆ ಈ ಮಾತನ್ನು ಹೇಳಿದ್ದೇನೆ. ಎಲ್ಲಿ ತಪ್ಪುತ್ತೇವೆ ಅಲ್ಲಿ ನೀವು ತಿದ್ದಿ. ಅದನ್ನು ನಾವು ತಪ್ಪಾಗಿದ್ದರೆ ತಪ್ಪು ಎಂದು ಹೇಳಿ ಒಪ್ಪಿಕೊಂಡು ನಾವು ತಿದ್ದಿಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿ ಹೇಳಿದ್ದೇವೆ. ವಿತ್ತೀಯ ಕೊರತೆ ಇಷ್ಟು ಇವೆ, ಶಾಸಕರ ನಿಧಿಗೆ ಹಣವನ್ನು ಎಲ್ಲಿಂದ ತರುತ್ತೀರಿ ಎಂದು ಹೇಳಿ ಮಾನ್ಯ ಸಿಂಧ್ಯಾರವರು ಹೇಳಿದರು. ವಿತ್ತೀಯ ಕೊರತೆಗೂ ಮತ್ತು ನಮ್ಮ ಮಾನ್ಯ ಶಾಸನಸಭಾ ಸದಸ್ಯರಿಗೆ ಪ್ರಾರಂಭಿಕವಾಗಿ 25 ಲಕ್ಷ ರೂಪಾಯಿಗಳನ್ನು ಅವರ ಕ್ಷೇತ್ರ ಕಲ್ಯಾಣಕ್ಕೋಸ್ಕರ ಏನು ಉಪಯೋಗಿಸಿಕೊಳ್ಳಬೇಕೆಂದು ಹೇಳಿದ್ದೇವೆ, ಇದು ಬಹಳ ವಿರೋಧಗಳ ಮಧ್ಯೆಯೂ ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದು ನಮ್ಮ ದೃಷ್ಟಿಯಲ್ಲಿ ಬಹಳ ಅಗತ್ಯವಾಗಿ ಆಗಲೇ ಬೇಕಾಗಿರತಕ್ಕ ಒಂದು ತೀರ್ಮಾನ ಎಂದು ಹೇಳಿ ಭಾವಿಸಿದೆವು. ಏಕೆಂದರೆ ನಾವು ನಾನ್‌ಪ್ಲಾನ್ ಎಕ್ಸ್‌ಪೆಂಡಿಚರನ್ನು ಕಟ್ ಮಾಡಬೇಕೆಂದು ಹೇಳಿ ಒಂದು ಕಡೆ ನಮ್ಮ ಬಜೆಟ್‌ನಲ್ಲಿ ಹೇಳುತ್ತೇವೆ. ಇದು ಈ ಬೆಳವಣಿಗೆ it is a contradiction in terms. It doesn't subscribe to the philosophy of the budget. Let me go down on record. ಮಾನ್ಯ ಶಾಸನ ಸಭಾ ಸದಸ್ಯರಿಗೆ ಅವರ ಕ್ಷೇತ್ರ ಕಲ್ಯಾಣ ನಿಧಿ ಏನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿ ನಮೂದಿಸಿದ್ದೇವೆ. it goes exactly in the opposite direction of bringing about certain discipline in the non-plan expenditure. But still I am convinced. All of us are convinced here perhaps many of you who have welcomed this, you are also convinced. ಏಕೆಂದರೆ ಒಂದು ಕಡೆ ಪಾರ್ಲಿಮೆಂಟ್ ಸದಸ್ಯರುಗಳಿಗೆ ಅವರು ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದ್ದರಿಂದ ಈ ಕ್ರೈಸಿಸ್ ಆಫ್ ಕಾನ್‌ಫಿಡೆನ್ಸ್ ನಮ್ಮ ನಮ್ಮ ಮಾನ್ಯ ಶಾಸನಸಭಾ ಸದಸ್ಯರುಗಳಲ್ಲಿ ಡೆವಲಪ್ ಆಗಿ ಹೋಯಿತು. ಕಳೆದ ನಾಲ್ಕಾರು ವರ್ಷಗಳಿಂದ. ಏಕೆಂದರೆ ಇಬ್ಬರೂ ಜೊತೆಯಲ್ಲೇ ಟೂರ್ ಮಾಡುತ್ತಿರುತ್ತೇವೆ. ಅವರು 10-15 ಲಕ್ಷ ರೂಪಾಯಿಗಳನ್ನು ಕೊಡುತ್ತಿರುತ್ತಾರೆ. ನಮ್ಮ ಶಾಸನಸಭಾ ಸದಸ್ಯರುಗಳು ಆಕಾಶ ನೋಡಿಕೊಂಡು ನಿಂತಿರುತ್ತಾರೆ. ಆದ್ದರಿಂದ ಬಹಳ ದೊಡ್ಡಪ್ರಮಾಣದಲ್ಲಿ ಅವರ ಸಹಾಯಕ್ಕೆ ಹೋಗುತ್ತಿಲ್ಲ ಎನ್ನುವ ಕೊರತೆ ಇದ್ದರೂ ಕೂಡ ಎಲ್ಲೋ ಒಂದು ಕಡೆ ಪ್ರಾರಂಭ ಮಾಡಬೇಕು, ಅದನ್ನು ಪ್ರಾರಂಭ ಮಾಡಿದ್ದೇವೆ. ಇದರ ಸದುಪಯೋಗವಾಗಬೇಕೆಂದು ಹೇಳಿ. ಇದನ್ನು ಎಲ್ಲೋ ಖರ್ಚಾಗುತ್ತಿದ್ದುದನ್ನು ನಾವು ತಡೆದು ಇಲ್ಲಿ ಸೇರಿಸಿದ್ದೇವೆ ಎನ್ನುವ ಪ್ರಶ್ನೆಗಿಂತಲೂ ಹೆಚ್ಚು ಮುಖ್ಯ ಏನೆಂದರೆ ನಾವು ಖರ್ಚು ಮಾಡುವುದರಲ್ಲಿ ಒಂದು ಡಿಸಿಪ್ಲಿನ್ ಇರಬೇಕು ಎನ್ನುವುದಕ್ಕೋಸ್ಕರ ಅದಕ್ಕೆ ಕೆಲವು ಮಾತುಗಳನ್ನು ಸೇರಿಸಿದ್ದೇವೆ. ಸೇರಿಸಿದ ಮಾತ್ರಕ್ಕೆ ಏನು ಘೋಷಣೆಯಾಗಿದೆ, ಆ ಘೋಷಣೆಗೆ ಅದು ಅಪವಾದವಾಗುವುದಿಲ್ಲ. ಆ ಘೋಷಣೆಯನ್ನು ನಾವು ಈ ವರ್ಷದಿಂದ ಕಾರ್ಯರೂಪಕ್ಕೆ ತರುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ರಾಯಚೂರಿನ ಆಧುನಿಕವಾದ ಒಪೆಕ್ ಆಸ್ಪತ್ರೆ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಈ ಒಪೆಕ್ ಆಸ್ಪತ್ರೆಯನ್ನು ಸರ್ಕಾರ ನಡೆಸಲಿಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ಕೊಡಬೇಕೆಂಬ ವಿಚಾರ ನಮ್ಮ ಪರಿಶೀಲನೆಯಲ್ಲಿದೆ. ಅದಕ್ಕೆ ಟೆಂಡರ್‌ಗಳನ್ನು ಕರೆಯಲಾಗಿತ್ತು. ಕೆಲವರು ಆ ಟೆಂಡರ್‌ನಲ್ಲಿ ಭಾಗವಹಿಸಿ ಇಂಥಿಂಥ ಕಂಡೀಷನ್ಸ್

ಮೇಲೆ ನಾವು ಈ ಆಸ್ಪತ್ರೆಯನ್ನು ನಡೆಸಲಿಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದ್ದಾರೆ. ಮಾನ್ಯ ಆರೋಗ್ಯ ಸಚಿವರು ಈ ವಿಚಾರದಲ್ಲಿ ಅತಿ ಶೀಘ್ರದಲ್ಲೇ ತಮ್ಮ ತೀರ್ಮಾನಗಳನ್ನು ಬಹಿರಂಗಪಡಿಸುತ್ತಾರೆ. ಈಗ ನೆಗೋಷಿಯೇಷನ್ಸ್ ನಡೆಯುತ್ತಿದೆ. ಯಾರು ಟೆಂಡರ್ ಹಾಕಿದ್ದರೋ ಅವರ ಜೊತೆಯಲ್ಲಿ ಈಗ ಮಾತುಕತೆ ನಡೆಯುತ್ತಿದೆ. ಇದು ಹೈಟೆಕ್ ಸ್ಪೆಷಾಲಿಟಿ ಆಸ್ಪತ್ರೆಯಾದ್ದರಿಂದ ಅಲ್ಲಿ ನಮ್ಮ ಸರ್ಕಾರಿ ವೈದ್ಯರುಗಳನ್ನು ಅಲ್ಲಿ ನೇಮಿಸಲಿಕ್ಕೆ ಆಗುವುದಿಲ್ಲ. ಆದ್ದರಿಂದ ಇದಕ್ಕೆ ಏನು ಪರಿಹಾರ ಎಂದು ಹೇಳಿದರೆ, ಹೇಗೆ ದೆಹಲಿಯಲ್ಲಿ ರಾಜೀವ್ ಗಾಂಧಿ ಆಸ್ಪತ್ರೆಯನ್ನು ಪ್ರೈವೇಟ್‌ನವರು ನಡೆಸುತ್ತಿದ್ದಾರೋ ಹಾಗೆಯೇ ಇದರ ಬಗ್ಗೆಯೂ ಕೂಡ ಆ ದಿಕ್ಕಿನಲ್ಲೇ ನಮ್ಮ ಆಲೋಚನೆಗಳು ನಡೆಯುತ್ತಿವೆ ಎಂದು ತಿಳಿಸಬಯಸುತ್ತೇನೆ. ಮಾನ್ಯ ಸದಾನಂದಗೌಡರು ಶೇ. 2 ರಷ್ಟು ಬಡ್ಡಿ ಕಡಿತದಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅವರು ಏಕೆ ಆ ಅಭಿಪ್ರಾಯಕ್ಕೆ ಬಂದರೋ ಎಂದು ನನಗೆ ಅರ್ಥವಾಗುವುದಿಲ್ಲ. ಯಾವುದಾದರೂ ಒಂದು ಮೆಕ್ಯಾನಿಸಂ ಅನುಸರಿಸಿ ನಾವು ಶೇ. 2 ರಷ್ಟು ಕಡಿಮೆ ಬಡ್ಡಿ ಪ್ರಮಾಣದಲ್ಲಿ ರೈತರಿಗೆ ಸಾಲವನ್ನು ಕೊಡತಕ್ಕಂಥ ಪ್ರಯತ್ನದಲ್ಲಿ ಯಶಸ್ವಿಯಾದರೆ ಅದೊಂದು ಸ್ವಾಗತಾರ್ಹವಾದಂತಹ ಬೆಳವಣಿಗೆಯೆಂದು ತಾವೇಕೆ ನೋಡಬಾರದು? ಹೇಗೆ ಇದನ್ನು ಮಾಡುತ್ತೀರಿ ಎಂಬ ಪ್ರಶ್ನೆಯನ್ನು ಪ್ರಾಮುಖ್ಯವಾಗಿ ಮಾನ್ಯ ಎಲ್ಲಾ ಸದಸ್ಯರುಗಳೂ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಇದರ ಬಗ್ಗೆ ಈಗಾಗಲೇ ಅಪೆಕ್ಸ್ ಬ್ಯಾಂಕ್‌ನವರನ್ನು ಕರೆಸಿ ಮಾತನಾಡಿದ್ದೇವೆ. ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕ್‌ಗಳವರ ಜೊತೆಯಲ್ಲೂ ಸಹಾ ನಾವು ಮಾತನಾಡಿದ್ದೇವೆ. ನಬಾರ್ಡ್ ಅಧ್ಯಕ್ಷರ ಜೊತೆಯಲ್ಲೂ ಕೂಡ ನಾವು ಮಾತನಾಡಿದ್ದೇವೆ. ನಬಾರ್ಡ್ ಅಧ್ಯಕ್ಷರು ನೀವು ಇಂಟರ್‌ನಲ್ ಅರೇಂಜ್‌ಮೆಂಟ್ ಏನು ಬೇಕಾದರೂ ಮಾಡಿಕೊಳ್ಳಬಹುದೆಂದು ಎಂದು ನಮಗೆ ತಿಳಿಸಿದ್ದಾರೆ. ನಬಾರ್ಡ್‌ನ ಹಣ ಸುಮಾರು 400-500 ಕೋಟಿ ರೂ.ಗಳು ಇರಬಹುದು. 1880 ಕೋಟಿ ರೂ.ಗಳನ್ನೇನು ಸಹಕಾರ ಸಂಘಗಳು ವಿತರಣೆ ಮಾಡುತ್ತವೆಯೋ ಅದರಲ್ಲಿ ಸುಮಾರು 600 ಕೋಟಿ ರೂ.ಗಳು ನಬಾರ್ಡ್‌ನ ಹಣ ಇರಬಹುದು. ಉಳಿದೆಲ್ಲವೂ ಕೂಡ ನಮ್ಮ ಡಿಪಾಸಿಟ್ಸ್ ಮತ್ತಿತರರು ಇರಬಹುದು. ಮಾನ್ಯ ಪಾಟೀಲರಿಗೆ ಒಂದು ವಿಚಾರವನ್ನು ನಾನು ಕೇಳಬಯಸುತ್ತೇನೆ. ಅವರು ಸಹಕಾರಿ ಕ್ಷೇತ್ರದಲ್ಲಿ ಹೆಚ್ಚಿನ ಶ್ರದ್ಧೆ ಇರತಕ್ಕವರಾಗಿದ್ದಾರೆ. ರೈತ ಒಂದು ವಿಶೇಷವಾದಂತಹ ಸಮಸ್ಯೆಗೆ ಸಿಕ್ಕಿದಾಗ ಸಹಕಾರಿ ಕ್ಷೇತ್ರದವರು ರೈತರ ನೆರವಿಗೆ ಬರಬೇಕೇ ಬೇಡವೇ? ಬರಬೇಕಾದರೆ ಸರ್ಕಾರ ಅದಕ್ಕೆ ಒಂದು ಎನೇಬಲರ್ ಆಗಿ, ಆ ಒಂದು ರೋಲ್ ಅನ್ನು ಸರ್ಕಾರ ವಹಿಸುವುದು ಸರಿಯೇ? ತಪ್ಪೆ? ಎಂಬುದರ ಬಗ್ಗೆ ಮಾನ್ಯ ಪಾಟೀಲರು ತಿಳಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಒಂದು ವಿಚಾರದ ಬಗ್ಗೆ ಕಳಕಳಿಯಿಂದ ಕೇಳಿಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ನಾನು ಸ್ವಾಗತ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷಗಳವರು ಟೀಕೆ ಮಾಡುವಾಗ ಅದಕ್ಕೆ ಏನಾದರೂ ಒಂದು ಬದಲಿ ಪರಿಹಾರವನ್ನೂ ಸಹ ಹೇಳಬೇಕಾಗುತ್ತದೆ ಎಂದು ಹೇಳಿದರು. ನಾವು ಆ ಪರಿಹಾರವನ್ನು ಹೇಳಬೇಕೆಂದರೆ ನಾವು ಮಾತನಾಡಲು ನಮಗೆ ಈಗ ಸಿಗುತ್ತಿರುವ ಸಮಯ ಸಾಕಾಗುವುದಿಲ್ಲ. 15-20 ನಿಮಿಷಗಳಲ್ಲೇ ನಮ್ಮ ಭಾಷಣವನ್ನು ಮುಗಿಸಬೇಕಾದ

ಅನಿವಾರ್ಯತೆ ಈಗಿದೆ. ಮುಂದಿನ ವರ್ಷವಾದರೂ ನಾವು ಮಾತನಾಡಲು ಹೆಚ್ಚು ಸಮಯಾವಕಾಶ ಸಿಗುವಂತಾಗಬೇಕು. ನಾನು ಬಜೆಟ್ ಬಗ್ಗೆ ಮಾತನಾಡಲು ತಯಾರಿ ನಡೆಸಿ ಸಿದ್ಧಪಡಿಸಿಕೊಂಡಿದ್ದ ಅಂಶಗಳ ಬಗ್ಗೆ ಎಲ್ಲವನ್ನೂ ಹೇಳಬೇಕೆಂದರೆ ನನಗೆ ಕನಿಷ್ಟ ಮೂರು ಗಂಟೆಗಳಾದರೂ ಬೇಕಾಗಿತ್ತು. ಆದರೆ ನಾನು ಒಂದೇ ಗಂಟೆಯಲ್ಲಿ ಎಲ್ಲವನ್ನೂ ಹೇಳಬೇಕಾಗಿದ್ದರಿಂದ ಶೇ. 2 ರಷ್ಟು ಬಡ್ಡಿ ಕಡಿತ ಕೊಡುವುದಕ್ಕಾಗುವುದಿಲ್ಲ, ಆದರಿಂದ ಸೊಸೈಟಿಗಳು ಹಾಳಾಗುತ್ತವೆ ಎಂದಷ್ಟೇ ನನ್ನ ಭಾಷಣದಲ್ಲಿ ಹೇಳಬೇಕಾಯಿತು. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಕೇಳಿರತಕ್ಕಂಥ ಪ್ರಶ್ನೆ ಸರಿಯಾಗಿದೆ. 1983 ರಲ್ಲಿ ನಿಮ್ಮ ಸರ್ಕಾರ ಬಂದಾಗ ಬಡ್ಡಿ ಮನ್ನಾ ಮಾಡಿ ಅಸಲುಗಳೆಲ್ಲಾ ಇವತ್ತಿಗೂ ಕೂಡ ವಸೂಲಾಗುವಂತಹ ಸ್ಥಿತಿ ಇಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಆಗಲೇ ಹೇಳಿದರು. ತದನಂತರ ಪುನಃ ನಾವು ಅಧಿಕಾರಕ್ಕೆ ಬಂದಾಗ ಬಡ್ಡಿ ಮನ್ನಾ ಮಾಡಿದೆವು. ಇವತ್ತಿಗೂ 6 ಕೋಟಿ ರೂ.ಗಳು ದುಡ್ಡು ಇನ್ನೂ ರೈತರು ತುಂಬಿಲ್ಲ. ಸುಮಾರು 10 ಕೋಟಿ ರೂ.ಗಳು ಇವತ್ತಿಗೂ ಹಾನಿಯಾಗುತ್ತದೆ. ಅದನ್ನು ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಯಾವ ಪರಿಸ್ಥಿತಿಯಲ್ಲಿ ಅದನ್ನು ನಾವು ಮಾಡಿದೆವು ಎಂಬುದನ್ನೂ ಕೂಡ ಇಲ್ಲಿ ಹೇಳಬೇಕಾಗುತ್ತದೆ. ಸರ್ಕಾರ ಬಡ್ಡಿ ಮನ್ನಾ ಮಾಡಿದ್ದರಿಂದ ಪರಿಸ್ಥಿತಿ ಹಾಗಾಗಿದೆ. ಇವತ್ತು ಈ ಸಂಘಗಳು ಪರಿಸ್ಥಿತಿ ಸರಿ ಇಲ್ಲದಿರುವಂತಹ ಸಂದರ್ಭದಲ್ಲಿ ಪುನಃ ಅವರು ಶೇ. 2 ರಷ್ಟು ಬಿಡಿ ಎಂದು ಹೇಳಿದರೆ ಹೇಗೆ? ಆ ಸಂಘಗಳೇ ಈಗ ಬಡ್ಡಿಯಲ್ಲಿ ಕಡಿತ ಮಾಡಬೇಕು. ಅಪೆಕ್ಸ್ ಬ್ಯಾಂಕ್‌ನವರು 50-60 ಪೈಸೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆ 40 ಪೈಸೆ ಇವರು ಬಿಟ್ಟರೆ ಹೆಚ್ಚೆಂದರೆ 1.60 ರೂ. ಡಿ.ಸಿ.ಸಿ. ಬ್ಯಾಂಕ್‌ನವರು ಬಿಡುವಂತಹ ಸ್ಥಿತಿ ಇವತ್ತು ರಾಜ್ಯದಲ್ಲಿ ಇಲ್ಲ. ಅದನ್ನು ಸಂಘಗಳ ಮೇಲೆ ಹಾಕುತ್ತಾರೆ. ಇವರೇನೋ ವಸೂಲು ಮಾಡಿಕೊಳ್ಳುತ್ತಾರೆ. ಆದರೆ ಪ್ರೈಮರಿ ಸೊಸೈಟಿಗಳೆಲ್ಲಾ ಹಾಳಾಗಿ ಹೋಗುತ್ತವೆ. ಇದರ ಬಗ್ಗೆ ಒಂದು ಚರ್ಚೆಯೇ ಆಗಬೇಕಾಗುತ್ತದೆ. ಇದನ್ನು ಇಷ್ಟರಲ್ಲೇ ಹೇಳಿ ಮುಗಿಸುವುದಲ್ಲ, ಬೇಕಾದರೆ ಸರ್ಕಾರದವರು ಅಂಕಿ ಅಂಶಗಳನ್ನು ತರಿಸಲಿ. ಆ ಸಂಘಗಳಿಂದ ನೀವು ಬಿಡಿಸಿದರೆ ಖಂಡಿತವಾಗಿಯೂ ಸಹಾ ಆ ಸಂಘಗಳು ಉದ್ಧಾರವಾಗುವುದಿಲ್ಲ. ಮುಂದೆ ಆ ಸಂಘಗಳು ಪುನರ್ ಧನಕ್ಕಾಗಿ ಅವಕಾಶವಿಲ್ಲದೇ ವಂಚಿತರಾಗುತ್ತವೆ. ಆಗ ರೈತರಿಗೆ ಸಾಲ ಕೊಡಲಿಕ್ಕಾಗುವುದಿಲ್ಲ. ಇದು ನಮ್ಮ ಅನುಭವದಿಂದ ಬಂದಂತಹ ಮಾತಾಗಿದೆ. ಅದಕ್ಕಾಗಿ ನಾನು ಹೇಳುತ್ತೇನೆ, ಇದಕ್ಕೆ ಏನಾದರೂ ಒಂದು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿ. ಆ ಬಜೆಟ್‌ನಲ್ಲಿ ನೀವು ದುಡ್ಡು ತುಂಬಿ ಕೊಟ್ಟರೆ ಮಾತ್ರ ಆ ಸಂಘಗಳು ಉಳಿಯುತ್ತವೆ. ಇದನ್ನು ಜಾರಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ನಾವು ಅವರ ಮೇಲೆ ಒತ್ತಡ ತಂದು ಕೊಡಲಿಕ್ಕೆ ಹಚ್ಚಿದರೆ ಮುಂದೆ ಒಂದೆರಡು ವರ್ಷಗಳಲ್ಲಿ ಅವುಗಳ ಪರಿಸ್ಥಿತಿ ಹಾಳಾಗಿ ಹೋಗುತ್ತದೆ. 1983 ರಲ್ಲಿ ನಾವು ಬಡ್ಡಿ ಮನ್ನಾ ಮಾಡಿದೆವು. ಈಗಲೂ ಸಹಾ ಬಡ್ಡಿ ಮನ್ನಾ ಮಾಡಬೇಕೆಂದು ನಾವು ಇಲ್ಲಿ ಕೇಳಿದ್ದೇವೆ. ನೀವು ಈ ರೀತಿ ಬಡ್ಡಿ ಮನ್ನಾ ಕೇಳುವುದು ತಪ್ಪು, ನೀವು ಹಿಂದೆ ಬಡ್ಡಿ ಮನ್ನಾ ಮಾಡಿದ್ದರಿಂದ ಹೀಗಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಿಜವಾಗಿ ಹೇಳುವುದಾದರೆ, ನಾನೂ ಕೂಡ ಬಡ್ಡಿ ಮನ್ನಾ ಮಾಡಲಿಕ್ಕೆ ವಿರೋಧ ಇದ್ದವನಾಗಿದ್ದೇನೆ. ಇಲ್ಲ ಎಂದು ನಾನು ಹೇಳುವುದಿಲ್ಲ. ನಾನೂ ಕೂಡ ಆ ಜಾಗದಲ್ಲಿ ಕುಳಿತುಕೊಂಡು ನಂತರ ಈ ಕಡೆಗೆ ಬಂದಿದ್ದೇನೆ. ಆದರೆ ದುರ್ದೈವದಿಂದ ಇವತ್ತು ಏನಾಗಿದೆ, ನಾವು ಏಕೆ ಆ ಬೇಡಿಕೆಯನ್ನು

ಇಟ್ಟಿವೆ ಎಂದರೆ, 1983 ರಲ್ಲಿ ಬಡ್ಡಿ ಮನ್ನಾ ಮಾಡಿದರೆ ಆ ಸಂಘಗಳೆಲ್ಲಾ ಮುಚ್ಚಿ ಹೋಗುವಂತಹ ಸ್ಥಿತಿ ಇತ್ತು. ಹಿಂದೆ ಇರುವ ದಾಖಲೆಗಳನ್ನು ತೆಗೆದು ನೋಡಿ. ಆ ಸಂಘಗಳೆಲ್ಲಾ ನಂತರ ಕೆಟ್ಟವೋ ಅಥವಾ ಮೊದಲೇ ಕೆಟ್ಟು ಹೋಗಿದ್ದವೋ ಎಂದೂ ಸಹಾ ನಾವು ನೋಡಬೇಕಾಗುತ್ತದೆ. ಸಾಲ ವಸೂಲಾಗದೇ ಹೇಗೆ ನಿಂತಿತ್ತು? ಎಷ್ಟು ಬಡ್ಡಿ ಬಾಕಿ ಇತ್ತು? ಅಸಲು ಎಷ್ಟು ಬಾಕಿ ಇತ್ತು ಎಂಬುದನ್ನು ನೋಡಬೇಕಾಗುತ್ತದೆ. ಆಗ ಸುಮಾರು ಜನ ಅಸಲೆಲ್ಲಾ ಕಟ್ಟಿ ಆಗ ಬಡ್ಡಿ ಮನ್ನಾ ಮಾಡಿಕೊಂಡರು. ಮಾಡಿಕೊಂಡು ಆ ಸಂಘಗಳು ಇವತ್ತು ಬೆಳವಣಿಗೆಯಾಗಿ, ಸರಿಯಾಗಿ ಮುಂದೆ 2-3 ವರ್ಷಗಳ ಕಾಲ ಒಳ್ಳೆಯ ರಿಕವರಿಯಾಗಿ ಚೆನ್ನಾಗಿ ನಡೆದವು. ಇದು ಒಂದು ರೀತಿಯ ಪರಿಸ್ಥಿತಿ. ನಿನ್ನೆ ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯನವರು ಮಾತನಾಡುತ್ತಾ ರೈತರಿಗೆ ಇನ್‌ಶೂರೆನ್ಸ್ ಕೊಡಬೇಕು, ರೈತರಿಗೆ ಸರಿಯಾದ ಬೆಲೆ ಕೊಡಬೇಕು, ಅವರ ಬೆಳೆ ಬಾರದಿದ್ದರೆ ಅವರಿಗೆ ಸರಿಯಾದ ಇನ್‌ಶೂರೆನ್ಸ್ ಬರಬೇಕು ಎಂದು ಹೇಳಿದರು. ಅದ್ಯಾವುದನ್ನೂ ಸಹಾ ನಮಗೆ ಇವತ್ತು ಮಾಡಲಿಕ್ಕೆ ಆಗಿಲ್ಲ. ಉದಾಹರಣೆಗೆ ಒಂದು ಮಾತು ಹೇಳುತ್ತೇನೆ. ನೀವಂತೂ ನಮಗೆ ಸಕ್ಕರೆ ರೊಕ್ಕ ಕೊಡಿಸಲಿಕ್ಕಾಗಿಲ್ಲ. ಗೋವಿನ ಜೋಳ ಖರೀದಿ ಮಾಡಿದ್ದೀರಿ. ಆ ಗೋವಿನ ಜೋಳ ಖರೀದಿ ಮಾಡಿದ ರೊಕ್ಕ ನಮಗೆ ಇನ್ನೂ ಕೊಟ್ಟಿಲ್ಲ. ಇವತ್ತು ತಾನೇ ನಾನು ಧಾರವಾಡ ಡಿ.ಸಿ.ಸಿ. ಬ್ಯಾಂಕಿನಿಂದ ಒಂದು ಅಂಕಿ ಅಂಶಗಳನ್ನು ತರಿಸಿದೆ. ಸಕ್ಕರೆ ಮತ್ತು ಗೋವಿನ ಜೋಳ ಎಲ್ಲಾ ಸೇರಿ ಸುಮಾರು 60 ಕೋಟಿ ರೂ.ಗಳು ಇವತ್ತು ಧಾರವಾಡ ಡಿ.ಸಿ.ಸಿ. ಬ್ಯಾಂಕಿಗೆ ಬರಬೇಕು. ಆ ರೊಕ್ಕವೆಲ್ಲಾ ತುಂಬಿಕೊಡಿ ಎಂದು ರೈತರು ಬರೆದು ಕೊಟ್ಟಿದ್ದಾರೆ. ಮಾರ್ಚ್‌ನೊಳಗೆ ರೈತರಿಗೆ ಅದನ್ನು ತುಂಬುವುದಕ್ಕಾಗುವುದಿಲ್ಲ. ಇವತ್ತು ಸರ್ಕಾರದಿಂದಲೂ ಸಹಾ ಅದನ್ನು ತುಂಬಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರೂ ಸಹ ಇದನ್ನು ಕೊಡುವುದಿಲ್ಲ. ನಾಳೆ 60 ಕೋಟಿ ರೂ.ಗಳನ್ನು ಕೊಡಿ ಎಂದು ಹೇಳಿದರೆ ಅದನ್ನು ಕೊಡಲು ತಮ್ಮಿಂದಲೂ ಕೂಡ ಸಾಧ್ಯವಿಲ್ಲ. ನಾವು ಸುಮ್ಮನೆ ಕೇಳಿದಂತಾಗುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ನಾವು ಬಡ್ಡಿ ಮನ್ನಾ ಮಾಡಲು ಕೇಳಿದೆವು. ಬಡ್ಡಿ ಮನ್ನಾ ಮಾಡುವುದರಿಂದ ಇವತ್ತು ಅವನಿಗೆ ಸಹಾಯವಾಗುತ್ತದೆ. 200 ಕೋಟಿ ರೂ.ಗಳನ್ನು ಸರ್ಕಾರ ಕೊಟ್ಟರೆ ರೈತರಿಗೆ ಸಹಾಯ ಆಗುತ್ತದೆ ಎಂಬ ದೃಷ್ಟಿಯಿಂದ ನಾವು ಆ ಮಾತನ್ನು ಹೇಳಿದ್ದೇವೆ. ರೈತರಿಗೆ ನಾವು ಅದನ್ನೆಲ್ಲಾ ಮಾಡಿದ್ದೇವೋ ಇಲ್ಲವೋ ಎಂಬ ಚರ್ಚೆ ಇಲ್ಲಿ ಬೇಕಾಗಿಲ್ಲ. ನನ್ನ ಕೇಳಿದರೆ ಮಾಡಲೇಬಾರದು ಎಂದು ಹೇಳುತ್ತೇನೆ. ಇವತ್ತು ಕರೆಂಟ್ ಫ್ರೀ ಕೊಡುವುದೂ ಸಹಾ ಬೇಕಾಗಿಲ್ಲ. ಇವತ್ತು ಇನ್‌ಶೂರೆನ್ಸ್ ಬಗ್ಗೆ ನಾನೊಂದು ಮಾತನ್ನು ಹೇಳುತ್ತೇನೆ. ನಾವು ಅಧಿಕಾರದಲ್ಲಿದ್ದಾಗ ನಮ್ಮದೇ ಆದಂತಹ ಸಹಕಾರಿ ಕ್ರಾಪ್ ಇನ್‌ಶ್ಯೂರೆನ್ಸ್ ಸೊಸೈಟಿಯನ್ನು ಸ್ಥಾಪನೆ ಮಾಡಬೇಕೆಂದು ನಾನು ವಿಚಾರ ಮಾಡಿದ್ದೆ. ಆಗ ಇನ್‌ಶೂರೆನ್ಸ್ ಕಾಯ್ದೆಗೆ ಇನ್ನೂ ಅಮೆಂಡ್‌ಮೆಂಟ್ ಆಗಿರಲಿಲ್ಲ. ಅದು ಬರುವುದಿಲ್ಲವೆಂದು ಹೇಳಿದರು. ಇವತ್ತೂ ಕೂಡ ನಮ್ಮ ರಾಜ್ಯದಲ್ಲಿ ಇದನ್ನು ಮಾಡಬಹುದಾಗಿದೆ. ಒಂದು ನಮ್ಮದೇ ಆದಂತಹ ಸಹಕಾರಿ ಇನ್‌ಶೂರೆನ್ಸ್ ಸೊಸೈಟಿಯನ್ನು ನಾವು ಮಾಡಿಕೊಂಡು ರೈತರಿಂದ ಎಕರೆಗೆ ಇಂತಿಷ್ಟು ಎಂದು ಪಡೆಯಬಹುದಾಗಿದೆ. 200 ಕೋಟಿ ರೂ.ಗಳ ನಿಧಿಯೊಂದನ್ನು ಸರ್ಕಾರ ಈಗ ಸ್ಥಾಪನೆ ಮಾಡಿದೆ. ಎಲ್ಲಾ ಶಾಸಕರೂ ಕೂಡ ನನ್ನ ಮೇಲೆ ಸಿಟ್ಟಿಗೇಳಬಹುದು, ಆದರೂ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. 75 ಕೋಟಿ ರೂ.ಗಳನ್ನು ಶಾಸಕರ ನಿಧಿಗೆಂದು ತೆಗೆದಿಟ್ಟಿದ್ದೀರಿ. ಅದರ ಜೊತೆಗೆ ಮತ್ತಷ್ಟು 75

ಕೋಟಿ ರೂ.ಗಳನ್ನು ಬೇರೆ ಎಲ್ಲಿಂದಲಾದರೂ ತಂದು, ಒಟ್ಟಾರೆಯಾಗಿ 150 ಕೋಟಿ ರೂ.ಗಳನ್ನು ರೈತರ ಇನ್‌ಶ್ಯೂರೆನ್ಸ್‌ಗೆ ಕೊಟ್ಟರೆ ಅಡ್ಡಿಯಿಲ್ಲ. ನಾನಂತೂ ಇದಕ್ಕೆ ಒಪ್ಪುತ್ತೇನೆ, ಬೇರೆಯವರೂ ಸಹ ವಿರೋಧ ಮಾಡುವುದಿಲ್ಲ ಎಂದು ಭಾವಿಸುತ್ತೇನೆ. ಶಾಸಕರು ಈ ನಿಧಿಯನ್ನು ಇನ್ನೊಂದು ವರ್ಷ ತಡವಾಗಿ ತೆಗೆದುಕೊಂಡರೆ ಏನೂ ತಪ್ಪಾಗಲಿಕ್ಕಿಲ್ಲ. ರೈತರಿಗೆ ಒಳ್ಳೆಯದಾಗುವುದಿದ್ದರೆ ನಾವೆಲ್ಲಾ ಅದಕ್ಕಾಗಿ ತ್ಯಾಗ ಮಾಡಬೇಕಾಗುತ್ತವೆ. ಇನ್ನೊಂದು ವರ್ಷ ಬಿಟ್ಟು ನಾವು ದುಡ್ಡನ್ನು ತೆಗೆದುಕೊಂಡರೆ ಏನೂ ಅಂತಹ ದೊಡ್ಡ ಅನಾಹುತವಾಗುವುದಿಲ್ಲ. ಈ ದುಡ್ಡೂ ಸಹಾ ಇದಕ್ಕೆ ಹಾಕಿ ಒಂದು ಇನ್‌ಶ್ಯೂರೆನ್ಸ್ ಸೊಸೈಟಿ ಮಾಡಿ. ರೈತರಿಗೆ ಇನ್‌ಶ್ಯೂರೆನ್ಸ್ ಕೊಟ್ಟು ಬಿಡಿ, ಆಗ ಇದ್ಯಾವುದೂ ಬೇಕಾಗುವುದಿಲ್ಲ. ಸರಿಯಾದ ಇನ್‌ಶ್ಯೂರೆನ್ಸ್ ಅನ್ನು ರೈತರಿಗೆ ಕೊಟ್ಟು ಬಿಟ್ಟರೆ ಖಂಡಿತವಾಗಿಯೂ ಅವರಿಗೆ ಅದರಿಂದ ಅನುಕೂಲವಾಗುತ್ತದೆ. ದಯವಿಟ್ಟು ಇದಕ್ಕೆ ಯಾವುದಾದರೂ ಒಂದು ಪ್ರಾವಿಷನ್ ಅನ್ನು ಮಾಡಬೇಕೆಂದು ಕೋರುತ್ತೇನೆ. ಅದಾಗುವವರೆಗೂ ಬಡ್ಡಿ ಮನ್ನಾ ಮಾಡಿ ಎಂದು ನಾವು ಕೇಳುತ್ತಿದ್ದೇವೆ. ಮೂಲತಃ ಬಡ್ಡಿ ಮನ್ನಾ ಮಾಡುವುದಕ್ಕೆ ನಾನೂ ಸಹ ವಿರೋಧಿಯಾಗಿದ್ದೇನೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಇದನ್ನು ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿ ಇರುವುದರಿಂದ ಬಡ್ಡಿ ಮನ್ನಾ ಮಾಡಿ ಎಂದು ನಾನು ಕೇಳುತ್ತಿದ್ದೇನೆ.

12.40 ಪಿ.ಎಂ.

ಶ್ರೀ ಅರಗ ಜ್ಞಾನೇಂದ್ರ : 55ನೇ ಪೇಜಿನಲ್ಲಿ ಕರಸಮಾಧಾನ ಯೋಜನೆಯಲ್ಲಿ ಮುಂದಿನ ತಿಂಗಳು 30ನೇ ತಾರೀಖಿನ ಒಳಗಾಗಿ ಬರತಕ್ಕಂತಹ ಟ್ಯಾಕ್ಸ್‌ನ ಬಡ್ಡಿ ಮತ್ತು ದಂಡ 80 ಪರ್ಸೆಂಟ್ ಕನ್ಸೆಕ್ಷನ್ ಮಾಡುತ್ತೇವೆಂದು ನೇರವಾಗಿ ಸರ್ಕಾರದಿಂದ ಕನ್ಸಕ್ಷನ್ ಕೊಟ್ಟಿದ್ದೀರಿ. ಟ್ಯಾಕ್ಸ್ ಹಣ ಕಟ್ಟಿಬಿಟ್ಟರೆ ನಾವು 80 ಪರ್ಸೆಂಟ್ ಬಡ್ಡಿ ಮನ್ನ ಮಾಡುತ್ತೇವೆಂದು ಹೇಳಿದ್ದೀರಿ. ರೈತರಿಗೆ ಎರಡು ಪರ್ಸೆಂಟ್ ನಿಮ್ಮ ಡಿಸಿಸಿ ಬ್ಯಾಂಕ್‌ನವರು ತುಂಬಿಕೊಳ್ಳಿ, ಅಪೆಕ್ಸ್ ಬ್ಯಾಂಕಿನವರು ತುಂಬಿಕೊಳ್ಳಿ ಎಂದು ಹೇಳುತ್ತಿದ್ದೀರಿ. ಈ ರೀತಿ ಕನ್ಸಕ್ಷನ್ ರೈತರಿಗೂ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ಒಟ್ಟಾರೆ ರೈತರಿಗೆ ಸರ್ಕಾರದ ಮೂಲಕ ಹೇಗೆ ಈ ವ್ಯವಸ್ಥೆಯನ್ನು ನಾವು ಕಾರ್ಯ ನಿರ್ವಹಣೆ ಮಾಡುತ್ತೇವೆ ಎನ್ನುವುದು ಸರ್ಕಾರಕ್ಕೆ ಬಿಟ್ಟು ಬಿಡಿ. ಎರಡು ಪರ್ಸೆಂಟ್ ರೈತರಿಗೆ ಅವರು ತೆಗೆದುಕೊಳ್ಳತಕ್ಕಂತಹ ಸಾಲ ಹಗುರವಾಗಬೇಕೆನ್ನುವ ದೃಷ್ಟಿಯಿಂದ ಆ ಎರಡು ಪರ್ಸೆಂಟ್‌ಗೆ ನಾವು ಸೀಮಿತವಾಗಿ ಮಾಡಿದ್ದೇವೆ. ಏಕೆಂದರೆ ಜಿಲ್ಲಾ ಬ್ಯಾಂಕುಗಳು ಬಹಳ ಕೆಟ್ಟು ಹೋಗಿವೆ. ಬೆಂಗಳೂರು, ಚಿತ್ರದುರ್ಗ ಇನ್ನು ಹಲವಾರು ಬ್ಯಾಂಕುಗಳು. ಆದುದರಿಂದ ಈ ಸಹಕಾರ ಬ್ಯಾಂಕುಗಳ ಆರೋಗ್ಯವೂ ಹದಗೆಡದಂತೆ ಮತ್ತು ಎರಡು ಪರ್ಸೆಂಟ್ ರೈತರಿಗೆ ತಲುಪತಕ್ಕಂತಹ ರೀತಿಯಲ್ಲಿ ನಾವು ಯೋಗ್ಯವಾದ ನಿರ್ಣಯ ತೆಗೆದುಕೊಳ್ಳುತ್ತೇವೆ, ಅದಕ್ಕೆ ಈ ಸದನ ಒಪ್ಪಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : ಶಾರ್ಟ್ ಟರ್ಮ್, ಮೀಡಿಯಮ್ ಟರ್ಮ್, ಲಾಂಗ್ ಟರ್ಮ್ ಕಾಸ್‌ಕಾರ್ಡ್ ಬ್ಯಾಂಕಿನವರು ಕೊಡುತ್ತಾರೆ. ರೈತರು ಎಲ್ಲಿ ಸಾಲ ಪಡೆದರೂ ಅಭಿವೃದ್ಧಿ ದೃಷ್ಟಿಯಿಂದ ಅದನ್ನು ಪಡೆಯುತ್ತಾರೆ. ಒಂದಕ್ಕೆ ಎರಡು ಪರ್ಸೆಂಟ್ ಕೊಟ್ಟು ಇನ್‌ವೆಸ್ಟ್‌ಮೆಂಟ್

ಆಗುತ್ತದೆ. ಲಾಂಗ್ ಟರ್ಮ್ ಕಾಸ್‌ಕಾರ್ಡ್ ಬ್ಯಾಂಕ್‌ನಿಂದ ಬರತಕ್ಕಂಥದ್ದು ಲಾಂಗ್‌ಟರ್ಮ್ ಇನ್‌ವೆಸ್ಟ್‌ಮೆಂಟ್ ಆಗುತ್ತದೆ. ಅದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎಸ್.ಎಂ. ಕೃಷ್ಣ: ಅದರ ಬಗ್ಗೆ ತಕ್ಷಣ ರಿಆ್ಯಕ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಸಂಬಂಧಪಟ್ಟವರ ಜೊತೆ ಸಮಾಲೋಚನೆ ಮಾಡಿ ತಿಳಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ: ಬಡ್ಡಿ ಮನ್ನಾ ಮಾಡುವ ವ್ಯವಹಾರ ಏನಿದೆ, ನಿಜವಾಗಿಯೂ ಕಷ್ಟ ಪಟ್ಟು ಬೆಳೆಯುವ ರೈತ ಬಡ್ಡಿ ಮನ್ನಾ ಮಾಡಿ ಎಂದು ಕೇಳುವುದಿಲ್ಲ. ಅವನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಕ್ಕರೆ ಬಡ್ಡಿ ಮನ್ನಾ ಮಾಡಿ ಎಂದು ಹೇಳುವುದಿಲ್ಲ. ಎರಡು ಪರ್ಸೆಂಟ್ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದರೆ ಬಡ್ಡಿ ಕೊಡುವುದಕ್ಕೆ ಸಾಧ್ಯ ಇರತಕ್ಕಂತಹ ರೈತರು ಇದ್ದಾರೆ, ಬಡ್ಡಿ ಕೊಡುವುದಕ್ಕೆ ಸಾದ್ಯವಿಲ್ಲದೆ ಇರತಕ್ಕಂತಹ ರೈತರು ಇದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ಬಡ್ಡಿ ಮನ್ನಾ ಮಾಡುತ್ತೇವೆಂದು ಅಲ್ಲ, ಕನ್‌ಸೆಷನ್ ಬಗ್ಗೆ ಚಿಂತನೆ ಮಾಡುತ್ತೇವೆಂದು ಹೇಳಿದ್ದು. ನೀವು ಈಗಾಗಲೇ ಕಮಿಟ್‌ಮೆಂಟ್ ಮಾಡಿಕೊಳ್ಳುತ್ತಿದ್ದೀರಿ.

ಶ್ರೀ ಬಿ.ಬಿ. ಶಿವಪ್ಪ : ಹಿಂದಿನಿಂದ ಬಡ್ಡಿ ಮನ್ನಾ ಮಾಡಿಕೊಂಡು ಬಂದಿದ್ದೀರಿ. ಎರಡು ಸಾರಿ ಮನ್ನಾ ಮಾಡಿದ್ದೀರಿ. ಬಡ್ಡಿ ಮನ್ನಾ ಮಾಡಿ ಸೊಸೈಟಿಗಳು ಮುಳುಗಿಹೋಗುತ್ತವೆ. ಸೊಸೈಟಿಗಳು ಎತ್ತುವುದಕ್ಕೆ ಸರ್ಕಾರ ಹಣ ಕೊಡಬೇಕು. ರೈತರ ಪರಿಸ್ಥಿತಿ ನಿಜವಾಗಿ ನಾವು ಸುಧಾರಿಸಬೇಕೆಂದು ಕಾಳಜಿ ಇದ್ದರೆ ಅವನು ಬೆಳೆಯತಕ್ಕಂತಹ ಬೆಳೆ ಏನಿದೆ ಅದಕ್ಕೆ ಅವನು ಲಾಭ ಮಾಡುವುದು ಒಂದು ಕಡೆ, ಬರೀ ಖರ್ಚು ವೆಚ್ಚಗಳನ್ನು ಕಳೆದು ಜೀವನ ಮಾಡುವುದಕ್ಕೆ ಅವಕಾಶವಾಗುವ ರೀತಿಯಲ್ಲಿ ಬೆಲೆ ಸಿಕ್ಕತಕ್ಕಂತಹ ವ್ಯವಸ್ಥೆ ಮಾಡಿದರೆ, ಸಾಲ ತೆಗೆದುಕೊಳ್ಳುವುದು, ಬಡ್ಡಿ ಕೊಡುವುದಿಲ್ಲವೆಂದು ಹೇಳುವುದು, ಸಾಲ ಕೊಡುವುದಿಲ್ಲವೆಂದು ಹೇಳುವುದು, ಸಾಲಕ್ಕೆ ಸಮಯ ಕೊಡಿ ಎಂದು ಹೇಳುವುದು ಇವೆಲ್ಲಾ ತಪ್ಪುತ್ತವೆ ಎಂದು ನನ್ನ ಅಭಿಪ್ರಾಯ.

ಶ್ರೀ ಡಿ.ವಿ. ಸದಾನಂದಗೌಡ : ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 1,000 ಕೋಟಿ ರೂ.ಗಳಷ್ಟು ಸಹಕಾರಿ ಸಂಘಗಳಿಂದ ಸಾಲ ವಿತರಣೆಯಾಗುತ್ತಿದೆ. ನನಗೆ ತಿಳಿದ ಅಂಕಿ ಅಂಶಗಳ ಪ್ರಕಾರ 450 ಕೋಟಿ ರೂಪಾಯಿಯಷ್ಟು ರಿಕವರಿ ಆಗಿದೆ. ಇನ್ನು 550 ಕೋಟಿ ರೂ. ಸಹಕಾರಿ ಸಂಘಗಳಿಂದ ಜೂನ್ ಒಳಗೆ ರಿಕವರಿ ಆಗುವುದಕ್ಕೆ ಇರುವುದು. ರಿಸರ್ವ್ ಬ್ಯಾಂಕ್ ಈಗಾಗಲೇ ಒಂದು ಪರ್ಸೆಂಟ್, ಅರ್ಧ ಪರ್ಸೆಂಟ್ ಬಡ್ಡಿ ಕಡಿಮೆ ಮಾಡುವುದು, ಈಗಾಗಲೇ ನಡೆದಿದೆ. ನಿಮಗೂ ಕೂಡ 550 ಕೋಟಿ ರೂ.ಗೆ 13 ಪರ್ಸೆಂಟ್ ಬಡ್ಡಿ ಹಾಕಿದರೆ ಸುಮಾರು 126 ಕೋಟಿ ರೂ.ಯಷ್ಟು ಕೊಕ್ಕೆ ಬೀಳುತ್ತದೆ. ಇದರಲ್ಲಿ ಎರಡು ಪರ್ಸೆಂಟ್ ಎಂದರೆ, ಅದು ಬರುವುದು ಕೇವಲ 2.6 ಕೋಟಿ ರೂ. ಮಾತ್ರ. ಈ ಎಲ್ಲಾ ವ್ಯವಸ್ಥೆಗಳಿಗೆ ಪೂರ್ತಿ ವಿರಾಮ ಹಾಕುವುದಕ್ಕೆ 2.6 ಕೋಟಿ ರೂ. ಸರ್ಕಾರದಿಂದ ನೇರವಾಗಿ ಮಾಡುವ ವ್ಯವಸ್ಥೆಯಾಗಿದ್ದರೆ ಬಹಳ ಸುಲಭವಾಗುತ್ತದೆ. ಏಕೆಂದರೆ ನಮ್ಮ ಜಿಲ್ಲಾ ಬ್ಯಾಂಕುಗಳಲ್ಲಿ ಸಾಧಾರಣ ಒಂದೆರಡು ಬ್ಯಾಂಕುಗಳು ಬಿಟ್ಟರೆ ಯಾವುದೂ ಲಾಭದಲ್ಲಿ ಇಲ್ಲ. ಲಾಭದಲ್ಲಿದ್ದರೆ ಹಂಚಿಕೊಳ್ಳುವುದಕ್ಕಾಗುವುದಿಲ್ಲ. ಒಂದು ವ್ಯವಸ್ಥೆ ಮಾಡುತ್ತೇವೆಂದು ಹೇಳಿದಿರಿ, ನಮ್ಮ ಬೇಡಿಕೆ ಏನೆಂದರೆ ಕೇವಲ 2.6 ಕೋಟಿ ರೂಪಾಯಿ ಸರ್ಕಾರ ಅದನ್ನು ಭರಿಸಲಿಕ್ಕೆ ನಿಮ್ಮಿಂದ ಎರಡು ಪರ್ಸೆಂಟ್ ಇಂಟರೆಸ್ಟ್ ಮಾಡುವುದಕ್ಕಾಗುತ್ತದೆ. ಸರ್ಕಾರ ಅದನ್ನು ಪೂರೈಸಬೇಕೆಂದು ಹೇಳುವುದು ನಮ್ಮ ಆಗ್ರಹ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಮುಖ್ಯ ಮಂತ್ರಿಗಳು ರೈತರ ವಿಚಾರ ಚರ್ಚೆ ಮಾಡುತ್ತಿರುವುದರಿಂದ, ಜಿಲ್ಲಾ ಸಹಕಾರಿ ಬ್ಯಾಂಕುಗಳು ರೈತರಿಗೆ ಸಾಲ ಕೊಡುವ ವಿಚಾರ ಚರ್ಚೆ ಮಾಡುತ್ತಿರುವುದರಿಂದ, ಜಿಲ್ಲಾ ಸಹಕಾರಿ ಬ್ಯಾಂಕುಗಳು ಸರ್ಕಾರದ ಗ್ಯಾರಂಟಿ ತೆಗೆದುಕೊಳ್ಳ ಬೇಕಾದರೆ ನಬಾರ್ಡ್ ಸಂಸ್ಥೆಗೆ 100 ಕ್ಕೆ 100 ರಷ್ಟು ಹಣ ತುಂಬುವ ಹೊಸ ಕಾನೂನು ಜಾರಿಯಾಗಿದೆ. ದಯವಿಟ್ಟು ರೈತರ ಹಿತದೃಷ್ಟಿಯಿಂದ ತಾವು ಸರ್ಕಾರದ ಗ್ಯಾರಂಟಿ ಕೊಡಬೇಕಾಗಿದೆ. ತಾವು ಸರ್ಕಾರದ ಗ್ಯಾರಂಟಿ ಕೊಡಬೇಕಾಗಿದೆ. ಸಾಲ ಪಡೆಯುವುದಕ್ಕೆ ಒಂದು ಪರ್ಸೆಂಟ್ ಹಣ ಸರ್ಕಾರಕ್ಕೆ ತುಂಬಬೇಕೆಂದು ಕಾನೂನು ಜಾರಿಗೆ ಬಂದಿದ್ದು ದಯವಿಟ್ಟು ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಅಧ್ಯಕ್ಷರೆ, ಇದನ್ನು ನೋಡತಕ್ಕಂತಹ ದೃಷ್ಟಿಕೋನಗಳು ಬಹಳಷ್ಟು ಇವೆ. ಆದರೆ ಈ ಸದನಕ್ಕೆ ನಾನು ಆಶ್ವಾಸನೆ ಕೊಡುತ್ತೇನೆ, ಏನೆಂದರೆ ನಾನು ಏನು ಮುಂಗಡಪತ್ರದಲ್ಲಿ ಘೋಷಣೆ ಮಾಡಿದ್ದೇನೆ, ಆ ಘೋಷಣೆ ಫಲ ಯಾವ ರೈತರಿಗೆ ದೊರಕಬೇಕು ಅದಕ್ಕೆ ನಾವು ಬದ್ಧರಾಗಿದ್ದೇವೆ ಎನ್ನುವುದನ್ನು ನಾನು ಈ ಸಮಯದಲ್ಲಿ ಪುನರುಚ್ಚಾರ ಮಾಡಿ ಇನ್ನು ಮಾನ್ಯ ಸದಸ್ಯರುಗಳು ವಿಶ್ವೇಶ್ವರ ಹೆಗಡೆಯವರು ಕೆರೆಗಳ ಹೂಳೆತ್ತುವ ಕಾರ್ಯಕ್ರಮದಲ್ಲಿ ಇದುವರೆಗೆ 388 ಕೆರೆಗಳು ಗುರುತಿಸಿರುವುದಾಗಿ ಹೇಳಿದರು. ಹೂಳೆತ್ತತಕ್ಕಂತಹ ಕಾರ್ಯಕ್ರಮ ಬಹಳ ದೊಡ್ಡ ಕಾರ್ಯಕ್ರಮ. ವಿಶ್ವ ಬ್ಯಾಂಕಿನವರ ಜೊತೆಯಲ್ಲಿ ಈಗಾಗಲೇ advance stage of nagotiations ನಡೆದಿದೆ ಈ ಜೂನ್ ತಿಂಗಳಲ್ಲಿ ವಿಶ್ವ ಬ್ಯಾಂಕಿನ ಬೋರ್ಡ್ ಮೀಟಿಂಗ್‌ಗೆ ಇದು ಹೋಗುತ್ತದೆ. ಅಥವಾ ಜೂನ್‌ನಲ್ಲಿ ಹೋಗದೆ ಇದ್ದರೆ ಡಿಸೆಂಬರ್ ತಿಂಗಳಲ್ಲಿ ಹೋಗುತ್ತದೆ. ನಮ್ಮ ಉದ್ದೇಶದ ಪ್ರಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಈ ಕೆರೆಗಳ ಪುನರ್ ರಚನೆ ಮಾಡುವುದಕ್ಕೆ ನಾವು ದೊಡ್ಡ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಕಾರ್ಯಕ್ರಮವನ್ನು ಹಂತಹಂತವಾಗಿ ಇನ್ನು ಮುಂದಿನ ವರ್ಷಗಳಲ್ಲಿ ನಾವು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈಗಾಗಲೇ ವಿಶ್ವ ಬ್ಯಾಂಕಿನವರು ಅವರ ಹಣ ಕೊಡತಕ್ಕಂತಹ, ಸಾಲ ಮಂಜೂರು ಮಾಡುವುದನ್ನು ನಿಧಾನ ಮಾಡಿದರೂ ಕೂಡ ನಾಸ್ಕ್ರೋದವರ ಜೊತೆ ಒಪ್ಪಂದಕ್ಕೆ ಬಂದಿದ್ದೇವೆ. ಅವರು 200 ಕೋಟಿ ರೂಪಾಯಿಗಳು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಆ 200 ಕೋಟಿ ರೂಪಾಯಿಗಳನ್ನು ನಾವು ಈ ವರ್ಷ ಪಡೆದು ಕೆರೆಗಳು ಪುನರ್ ನಿರ್ಮಾಣ ಮಾಡತಕ್ಕಂತಹ ಕೆಲಸ, ಇದರಲ್ಲಿ ಬಹಳ ಕಷ್ಟದಾಯಕವಾದ ಈ ಕಾರ್ಯಕ್ರಮ. ಏಕೆಂದರೆ ಆರಗ ಜ್ಞಾನೇಂದ್ರ ರವರು ಅವರ ಭಾಷಣದಲ್ಲಿ ಪೈಪೋಟಿ ನಡೆಯುತ್ತದೆ ಎಂದು ಹೇಳುತ್ತಿದ್ದರು. ಕೆರೆಗಳ ಅಭಿವೃದ್ಧಿ ಮಾಡುವುದಕ್ಕೆ ಅಹಿತಕರವಾದ ಪೈಪೋಟಿ ಏಕೆ ಬೇಕೆಂದು ನನಗೆ ಗೊತ್ತಾಗುತ್ತಿಲ್ಲ. ವಾಟರ್ ಯೂಸರ್ಸ್ ಸೊಸೈಟಿ ಮಾಡಬೇಕೆಂದು ಹೇಳಿದರು. ವಾಟರ್ ಯೂಸರ್ ಸೊಸೈಟಿಗಳಿಗೆ ಕೆರೆಗಳ ಮೇಲಿನ ಪ್ರಭುತ್ವವನ್ನು ಅವರಿಗೆ ವರ್ಗಾವಣೆ ಮಾಡಬೇಕು. ಅದರ ಮೇಂಟೆನೆನ್ಸ್ ಜವಾಬ್ದಾರಿ ಅವರಿಗೆ ಕೊಡಬೇಕು. ಎನ್ನುವುದು ಈ ಉದ್ದೇಶಗಳಲ್ಲಿ ಪ್ರಾಮಾಣಿಕತೆ ಇದೆ. ಏಕೆಂದರೆ ಇದುವರೆಗೆ ಇದ್ದಂತಹ ಒಂದು ವ್ಯವಸ್ಥೆ ಏನೆಂದರೆ, ಇಂಜಿನಿಯರ್‌ಗಳ ಕೈಗೆ ನಾವು ಕೆರೆಗಳು ಕೊಟ್ಟು ಬಿಟ್ಟಿದ್ದೇವು. ಇಂಜಿನಿಯರ್ ಹಾವೇರಿಯಲ್ಲಿರುತ್ತಾರೆ. ನಾಳೆ ಹಾಸನಕ್ಕೆ ಹೋಗುತ್ತಾರೆ. ಕೆರೆಗಳಿಗೂ ಅವರಿಗೂ ಏನು ಸಂಬಂಧ ಇದೆ, ಆದರೆ ಯಾರು ಫಲಾನುಭವಿಗಳು ಇದ್ದಾರೆ, ಕೆರೆಯ ಅಚ್ಚುಕಟ್ಟುದಾರರು ಇದ್ದಾರೆ ಅವರಿಗೂ ಕೆರೆಗೂ ತಲ ತಲಾಂತರಗಳಿಂದ

ಬಂದಿರುವಂತಹ ನೆಂಟು. ಆದ್ದರಿಂದ ಅವರ ಮೇಲೆ ನಾವು ಹೆಚ್ಚಿನ ಹೊರೆಯನ್ನು ನಿರ್ವಹಣಾ ಜವಾಬ್ದಾರಿಯನ್ನು ಹೊರಿಸುವುದರಿಂದ ಕಮ್ಯುನಿಟಿಯನ್ನೂ ಕೂಡ ಅದರ ಒಳಗೆ ವಿಶ್ವಾಸಕ್ಕೆ ತೆಗೆದುಕೊಂಡ ಹಾಗಾಗುತ್ತದೆ. ಆ ಕಾರ್ಯಕ್ರಮವನ್ನು ಈ ಸಾರಿ ಮಾಡಿದ್ದೇವೆ. ಈಗಾಗಲೇ ಒಂದು ಪ್ರಶ್ನೆಗೆ ಉತ್ತರದಲ್ಲಿ ಹೇಳಿದ್ದೇವೆ. 388 ಕೆರೆಗಳನ್ನು ಗುರುತಿಸಲಾಗಿದ್ದು, ಈ 388 ಕೆರೆಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಪ್ರಕ್ರಿಯೆ ಮುಗಿದಿದೆ ಎಂದು ಅರ್ಥ ಅಷ್ಟೆ. ಇವೇ ಸಾವಿರಾರು ಕೆರೆಗಳನ್ನು ನಾವು ಮುಂದೆ ಅಭಿವೃದ್ಧಿ ಮಾಡಬೇಕಾಗುತ್ತದೆ. ಇದಕ್ಕೆ ನಾವು ವಿಶೇಷ ಗಮನ ಕೊಡುತ್ತೇವೆಂದು ತಮ್ಮಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ಡಬ್ಲ್ಯು.ಟಿ.ಒ. ಬಗ್ಗೆ ಮಾನ್ಯ ಬೈರೇಗೌಡರು ಮಾತನಾಡಿದ್ದಾರೆ. ಡಬ್ಲ್ಯು.ಟಿ.ಒ. ಬಗ್ಗೆ ನಾನು ವಿಶೇಷವಾದ ರೀತಿಯಲ್ಲಿ ಅಧ್ಯಯನ ಮಾಡಿದವನಲ್ಲ. ಆದರೆ ಇದರ ಬಗ್ಗೆ ಯಾರು ಸಮರ್ಥವಾದ ವಿಚಾರಗಳನ್ನು ತಿಳಿದುಕೊಂಡಿದ್ದಾರೆ ಅವರೆಲ್ಲರ ಸಮೂಹವನ್ನು ಮಾಡಬೇಕೆನ್ನುವ ಆಕಾಂಕ್ಷೆಯಿಂದ ಡಬ್ಲ್ಯು.ಟಿ.ಒ. ಸೆಲ್ ಮಾಡಿದ್ದೇವೆ. ಇದರಲ್ಲಿ ರಿಟೈರ್ಡ್ ಆಫೀಸರ್ಸ್ ಇದ್ದಾರೆ, ಯಾರು ಫುಡ್ ಅಂಡ್ ಅಗ್ರಿಕಲ್ಚರ್ ಆರ್ಗನೈಸೇಷನ್‌ನಲ್ಲಿ ವಿಶ್ವ ಮಟ್ಟದಲ್ಲಿ ಯಾರು ಅನುಭವವನ್ನು ಪಡೆದಿದ್ದಾರೋ ಅವರು ನಮಗೆ ಸಿಕ್ಕಿರುವುದರಿಂದ ಅವರ ಉಪಯೋಗವನ್ನು ನಾವು ಮಾಡಿಕೊಳ್ಳುತ್ತಿದ್ದೇವೆ. ಇದರ ಬಗ್ಗೆ ಅಲ್ಪಸ್ವಲ್ಪ ವಿಚಾರಗಳನ್ನು ತಿಳಿದುಕೊಂಡಿರುವಂಥವರು ಕೂಡ ಇದ್ದಾರೆ. ಆದರೆ ಡಬ್ಲ್ಯು.ಟಿ.ಒ. ವ್ಯವಸ್ಥೆ ನಮ್ಮ ದೇಶದ ಮೇಲೆ ತರಬಹುದಾದ ಹಲವಾರು ಬದಲಾವಣೆಗಳಿವೆ ಅವುಗಳೆಲ್ಲವನ್ನೂ ಕೂಡ ನಾವು ಕಂಟ್ರೋಲ್ ಮಾಡುತ್ತೇವೆ ಎನ್ನುವ ಭ್ರಮೆ ನಮಗೆ ಇಲ್ಲ. ನಮ್ಮ ರಾಜ್ಯದ ರೈತರಿಗೆ ಇದರ ಬಗ್ಗೆ ಎಜ್ಯುಕೇಟ್ ಮಾಡಬೇಕು, ಓರಿಯೆಂಟೇಷನ್ ಕೊಡಬೇಕು ಮತ್ತು ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯದ ಅನಿಸಿಕೆಗಳನ್ನು ಹೇಳಬೇಕು. ಇದನ್ನು ಹೇಳಬೇಕಾದರೆ ಯಾರೇ ಆಗಲಿ ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡಲೇಬೇಕಾಗುತ್ತದೆ. ಆ ಅಧ್ಯಯನವನ್ನು ಮಾಡಲೆಂದೇ ನಾವು ಮಾಡಿದ ಸಮಿತಿ ತನ್ನ ಅಧ್ಯಯನವನ್ನು ಮುಗಿಸಿ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ತೆರಿಗೆಗಳ ಸುಧಾರಣಾ ಆಯೋಗ, ಆಡಳಿತ ಸುಧಾರಣಾ ಆಯೋಗಗಳು ಏನು ವರದಿಗಳನ್ನು ಸರ್ಕಾರಕ್ಕೆ ಕೊಟ್ಟಿದೆಯೋ ಅದೇ ರೀತಿಯಲ್ಲಿ ಈ ಸಮಿತಿ ಕೂಡ ಸರ್ಕಾರಕ್ಕೆ ಉತ್ತಮವಾದ ವರದಿಯನ್ನು ಕೊಟ್ಟಿದೆ. ಸಮಿತಿಗಳು ವರದಿಯನ್ನು ಕೊಟ್ಟತಕ್ಷಣ ಅದನ್ನು ಜಾರಿಗೆ ತರುವುದಕ್ಕೆ ಆಗುವುದಿಲ್ಲ. ಸರ್ಕಾರ ಎನ್ನತಕ್ಕಂಥ ಯಂತ್ರ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲನೆ ಮಾಡಿ, ಅಧ್ಯಯನ ಮಾಡಿ ತದನಂತರ ರಾಜ್ಯದ ಹಿತದೃಷ್ಟಿಯಿಂದ ಸಮಿತಿಯ ಶಿಫಾರಸ್ಸುಗಳು ಜಾರಿಗೆ ತರಬಹುದು ಎಂದು ಸರ್ಕಾರಕ್ಕೆ ಅನ್ನಿಸಿದರೆ ಅಂಥ ಶಿಫಾರಸ್ಸುಗಳನ್ನು ಸರ್ಕಾರ ಜಾರಿಗೆ ತರುತ್ತದೆ. ಈ ಹಿಂದೆ ಶ್ರೀ ಬೆಲ್ಲಯ್ಯ ಸಮಿತಿ ಕೇಂದ್ರ ಸರ್ಕಾರಕ್ಕೆ ವರದಿ ಕೊಟ್ಟ ತಕ್ಷಣ ಅದನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆಯೋ? ಈ ಕಮಿಟಿಗಳು ನಮಗೆ ಬ್ರಾಡ್ ಗೈಡ್‌ಲೈನ್ಸ್ ಒದಗಿಸಬೇಕು. ಅಂಥ ಬ್ರಾಡ್ ಗೈಡ್‌ಲೈನ್ಸ್ ಬಗ್ಗೆ ನಾವು ಯೋಚನೆ ಮಾಡುತ್ತೇವೆ. ಇದರ ಜೊತೆಗೆ ನಮ್ಮ ಅನುಭವ, ನಮ್ಮ ಅಧ್ಯಯನವೆಲ್ಲವನ್ನೂ ಸೇರಿಸಿ ಈ ಡಬ್ಲ್ಯು.ಟಿ.ಒ. ಬಗ್ಗೆ ಏನು ಮಾಡಬಹುದು ಎನ್ನುವ ಬಗ್ಗೆ ತೀರ್ಮಾನಕ್ಕೆ ಬರಲು ಅನುಕೂಲವಾಗಬಹುದು. ಈ ಡಬ್ಲ್ಯು.ಟಿ.ಓ. ತರಬಹುದಾದ ಸಮಸ್ಯೆಗಳನ್ನು ನಾವು ಹಗುರ ಮಾಡುವುದು ಹೇಗೆ ಎನ್ನುವ ಬಗ್ಗೆ ಈ ಸಮಿತಿಯನ್ನು ಮಾಡಿದ್ದೇವೆ. ಮಾನ್ಯ ಬೈರೇಗೌಡರು said about task forces. It is neither an old-age home nor a Pinjrapol.

Sri Somashekhar said, it is both a Pinjrapol as well as an old-age home. ವಿರೋಧ ಪಕ್ಷದಲ್ಲಿದ್ದರೆ ಟೀಕೆ ಮಾಡುವುದು ಸ್ವಾಭಾವಿಕ, ಆ ದೃಷ್ಟಿಯಿಂದ ಈ ಟೀಕೆಗಳನ್ನು ನಾನು ತೆಗೆದುಕೊಳ್ಳುತ್ತೇನೆ. ಮಾನ್ಯ ಬೈರೇಗೌಡರು ಕೃಷಿ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ಹಿಂದೆ ಕೃಷಿ ಸಚಿವಾಲಯದ ಮುಖ್ಯಸ್ಥರೂ ಕೂಡ ಆಗಿದ್ದರು. ಅವರು ತಮ್ಮ ಸಲಹೆಗಳನ್ನು ಈ ಸಮಿತಿಗೆ ಕೊಟ್ಟರೆ ಆ ಸಮಿತಿ ತಮ್ಮ ಅನುಭವದ ಸಲಹೆಗಳಿಗೆ ಆದ್ಯತೆಯನ್ನು ಕೊಟ್ಟು ಪರಿಶೀಲನೆಯನ್ನು ಮಾಡುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಂದು ಡಬ್ಲ್ಯೂ.ಟಿ.ಒ. ಬಗ್ಗೆ ಪ್ರೇಮ್‌ನಾಥ್ ಕಮಿಟಿ ಏನು ಅಧ್ಯಯನ ಮಾಡಿ ವರದಿ ಕೊಡಲಾಗಿದೆಯೋ ಆ ವರದಿಗೆ ಬೇರೆ ರಾಜ್ಯಗಳಿಂದ ಡಿಮ್ಯಾಂಡ್ ಹೆಚ್ಚು ಇದೆ. ಬೇರೆ ರಾಜ್ಯಗಳವರು ಡಬ್ಲ್ಯೂ.ಟಿ.ಒ. ಬಗ್ಗೆ ನಮ್ಮ ರಾಜ್ಯದಲ್ಲಿಯ ಪ್ರೇಮ್‌ನಾಥ್ ಕಮಿಟಿ ಅಧ್ಯಯನ ಮಾಡಿರುವ ವರದಿಯ ಪ್ರತಿಯನ್ನು ಕಳುಹಿಸಿಕೊಡಿ ಎಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಮುಖ್ಯಮಂತ್ರಿಗಳು ಯಾವ ಉದ್ದೇಶವನ್ನು ಇಟ್ಟುಕೊಂಡು ಸಮಿತಿಯನ್ನು ಮಾಡಿದಿರೋ ಆ ಸಮಿತಿ ಆಳವಾದ ಅಧ್ಯಯನವನ್ನು ಮಾಡಿ ಎಲ್ಲಾ ಅಂಶಗಳನ್ನು ಗಮನಿಸಬೇಕಾಗಿತ್ತು. ತಾವೇನೋ ಆ ವರದಿಯನ್ನು ಸಂಪೂರ್ಣವಾಗಿ ನೋಡಿಲ್ಲವೆಂದು ಹೇಳಿದಿರಿ. ಮುಖ್ಯಮಂತ್ರಿಗಳಾದವರು ವರದಿಯ ಪ್ರತಿಯೊಂದು ಪದಗಳನ್ನು ಓದುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಆದರೆ ಆ ಸಮಿತಿ ಆಳವಾದ ಅಧ್ಯಯನವನ್ನು ಮಾಡಿ ವರದಿಯನ್ನು ತಯಾರಿಸಲು ಹೋಗಿಲ್ಲ. ಕರ್ನಾಟಕದಲ್ಲಿ ಕೃಷಿಯ ನೈಜವಾದ ಪರಿಸ್ಥಿತಿ ವರದಿಯಲ್ಲಿ ರಿಫ್ಲೆಕ್ಟ್ ಆಗಿಲ್ಲ. ಅದು ನನ್ನ ಚಿಂತೆ.

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಡಬ್ಲ್ಯೂ.ಟಿ.ಒ. ಎನ್ನತಕ್ಕಂತದ್ದು it is a complex subject ಅದನ್ನು ಯಾವ ಒಬ್ಬ ತಜ್ಞರೂ ಅರ್ಥ ಮಾಡಿಕೊಳ್ಳಲು ಆಗದೇ ಇರುವಂಥ ಸಂದರ್ಭದಲ್ಲಿ, ಮೂಲಭೂತವಾಗಿ ರಾಜ್ಯ ಸರ್ಕಾರ ಸೃಷ್ಟಿಸಬೇಕಾಗಿರತಕ್ಕಂಥ ಹೊಸ ಹೊಸ ಆವಿಷ್ಕಾರಗಳೇನಿವೆ, ಆಯಾಮಗಳೇನಿವೆ ಎಂಬ ಬಗ್ಗೆ ಸ್ಟಡಿ ಮಾಡತಕ್ಕಂಥ ಸಲಹೆಯನ್ನು ಕೊಟ್ಟಿದ್ದಾರೆ. ಪ್ರಸ್ತುತ ಬೆಲೆ ಕುಸಿದಿರುವ ಬಗ್ಗೆ ವರದಿಯಲ್ಲಿ ರಿಫ್ಲೆಕ್ಟ್ ಆಗಿಲ್ಲವೆನ್ನುವ ಮಾನ್ಯ ಸದಸ್ಯರ ಸ್ಪಷ್ಟ ಅಭಿಪ್ರಾಯಕ್ಕೆ ಹೇಳಬೇಕೆಂದರೆ ಈಗ ಸಮಿತಿ ಕೊಟ್ಟಿರುವುದು ಪ್ರಾಥಮಿಕ ವರದಿ ಮಾತ್ರವಾಗಿದೆ. ಆದರೆ ಡಬ್ಲ್ಯೂ.ಟಿ.ಒ. ನಿಂದಲೇ ಬೆಲೆ ಕುಸಿತವಾಗಿದೆ ಎನ್ನುವುದಕ್ಕೆ ನಮಗೆ ಅನೇಕ ರೀತಿಯ ಮಾಹಿತಿಗಳು ಬೇಕಾಗುತ್ತವೆ. ನಮ್ಮ ಸಮಿತಿಯವರು ಕೂಡ ಕೇಂದ್ರ ಸರ್ಕಾರದೊಡನೆ ಅನೇಕ ಕಾಗದಪತ್ರಗಳ ಕರೆಸ್ಪಾಂಡೆನ್ಸ್ ಮಾಡಿದಾಗಲೂ ಕೂಡ ಆಮದು ಮತ್ತು ರಫ್ತು ಸ್ಪಷ್ಟವಾಗಿ ಎಷ್ಟು ಆಗುತ್ತಿದೆ ಎನ್ನುವ ಮಾಹಿತಿಯೂ ಇದುವರೆಗೆ ಲಭ್ಯವಾಗುತ್ತಿಲ್ಲದಿರುವಂಥ ಸಂದರ್ಭದಲ್ಲಿ, ಬಹುಶಃ ಕ್ವಾಂಟಿಟಿ ರಿಸ್ಟ್ರಿಕ್‌ಷನ್ ತೆಗೆದು ಈಗಾಗಲೇ ಒಂದು ವರ್ಷವಾಗಿದೆ, ನಾವು ವಿಶೇಷವಾದ ಮಾಹಿತಿಯನ್ನು ತರಿಸಿಕೊಂಡು ಆ ಸಮಿತಿಗೆ ಕೊಟ್ಟರೆ ಪ್ರಸ್ತುತ ಸಂದರ್ಭದಲ್ಲಿ ನಾವೇನು ಮಾಡಬಹುದು ಎನ್ನುವ ಬಗ್ಗೆ ನಿರ್ದಿಷ್ಟವಾಗಿ ವರದಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಬೆಳೆಯತಕ್ಕ ಅನೇಕ ಬೆಳೆಗಳಿಗೆ ಯಾವ ರೀತಿ ಪರ್ಯಾಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು ಎಂಬ ಬಗ್ಗೆ ಸಲಹೆ ಕೂಡ ಇದೆ. ಅದನ್ನು ತಾವೆಲ್ಲರೂ ಆಳವಾಗಿ ಚಿಂತನೆ ಮಾಡಿದಾಗ ಇನ್ನೂ ಹಲವಾರು ಸಲಹೆಗಳು ಬರಬಹುದು ಎಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ಎಸ್.ಎಂ. ಕೃಷ್ಣಾ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಕಾಂಪ್ಲೆಕ್ಸ್ ಸಬ್ಜೆಕ್ಟ್ ಬಗ್ಗೆ we have to share our thought and pool our efforts. ಆ ದೃಷ್ಟಿಯಿಂದ ಇದನ್ನು ರಚನಾತ್ಮಕವಾದ ದಿಸೆಯಲ್ಲಿ ಡಬ್ಲ್ಯೂ.ಟಿ.ಒ. ಬಗ್ಗೆ ಕೇಂದ್ರ ಸರ್ಕಾರಕ್ಕೆ ನಮ್ಮ ನಿಲುವನ್ನು ತಿಳಿಸಿ ಎಂದು ಆಗ್ರಹಪೂರ್ವಕವಾಗಿ ಮಾನ್ಯ ಸದಸ್ಯರು ತಿಳಿಸಿ ಹೇಳಿದ್ದಾರೆ. ನಾನು ಈಗಾಗಲೇ ಪ್ರಧಾನ ಮಂತ್ರಿಗಳಿಗೆ ಈ ಬಗ್ಗೆ ಪತ್ರ ಬರೆದಿರುವುದರ ಜೊತೆಗೆ ಮುಕ್ತವಾಗಿ ಮಾತನಾಡಿದ್ದೇನೆ. ಅವರು ಅತಿ ಶೀಘ್ರದಲ್ಲಿಯೇ ಸಭೆಯನ್ನು ಕರೆಯುತ್ತಾರೆ ಎನ್ನುವ ವಿಶ್ವಾಸ ನನಗಿದೆ. ಏಕೆಂದರೆ ಪ್ರಧಾನ ಮಂತ್ರಿಗಳೇ ನನ್ನನ್ನು "Are you very serious about this?" ಎಂದು ಕೇಳಿದರು. ಇದರ ಜೊತೆಗೆ ಈಗ ನನಗೆ ಬಂದಿರುವಂಥ ಮಾಹಿತಿ ಪ್ರಕಾರ ಪಕ್ಕದ ರಾಜ್ಯದ ಮುಖ್ಯಮಂತ್ರಿಗಳಾದ ಚಂದ್ರಬಾಬು ನಾಯ್ಡುರವರೂ ಕೂಡ ಇದರ ಬಗ್ಗೆ ಅತಿ ಶೀಘ್ರದಲ್ಲಿಯೇ ಮುಖ್ಯಮಂತ್ರಿಗಳ ಸಭೆಯನ್ನು ಕರೆಯುವುದರ ಮೂಲಕ ಡಬ್ಲ್ಯೂ.ಟಿ.ಒ. ನಮ್ಮ ದೇಶದಲ್ಲಿ ಏನು ಪರಿಣಾಮಗಳನ್ನು ಉಂಟು ಮಾಡಬಲ್ಲದು ಎನ್ನತಕ್ಕ ಬಗ್ಗೆ ಚರ್ಚೆ ಮಾಡಬೇಕೆಂದು ತಿಳಿಸಿದ್ದಾರೆ. ಇನ್ನು ಮಾನ್ಯ ಹೆಗಡೆಯವರು ಮಾತನಾಡುವಾಗ notification issued by the Commercial Tax Department lead to loss of revenue ಎಂದು ಹೇಳಿದ್ದಾರೆ. ಈಗ ಒಂದು ಇಂಡಸ್ಟ್ರಿಯಲ್ ಪಾಲಿಸಿ ಎಂದು ಮಾಡಿದ್ದೇವೆ. ಆ ಇಂಡಸ್ಟ್ರಿಯಲ್ ಪಾಲಿಸಿ ಚೌಕಟ್ಟಿನೊಳಗೆ ಏನಾದರೂ ಇನ್ಸೆನ್‌ಟಿವ್ಸ್ ಅಥವಾ ಸಬ್ಸಿಡಿಗಳನ್ನು ನಾವು ಘೋಷಣೆ ಮಾಡಿದ್ದರೆ ಮತ್ತು ಆ ಕೈಗಾರಿಕೆಗಳೊಂದಿಗೆ ನಾವು ಒಂದು ಒಪ್ಪಂದವನ್ನು ಮಾಡಿಕೊಂಡರೆ..., ಸ್ವಾಭಾವಿಕವಾಗಿ ಆ ಕೈಗಾರಿಕೆಗಳವರು ಏನು ನಿರೀಕ್ಷಣೆ ಮಾಡುತ್ತಾರೆ, ನಾವೇನು ಘೋಷಣೆಯನ್ನು ಮಾಡಿದ್ದೇವೆ ಆ ಘೋಷಣೆಯ ಚೌಕಟ್ಟಿನೊಳಗೆ ಅವರು ಈ ರಾಜ್ಯದಲ್ಲಿ ಕೈಗಾರಿಕೆಯನ್ನು ಹಾಕಿದರೆ ಇಂತಿಷ್ಟು ಅನುಕೂಲಗಳು ನಮಗೆ ಸಿಗುತ್ತವೆ. ಈ ಪ್ಯಾಕೇಜ್ ನಮಗೆ ದೊರೆಯುತ್ತವೆ ಎಂದು ಕೊಂಡಿರುತ್ತಾರೆ. ಆದುದರಿಂದ ಅಂಥ ಪ್ಯಾಕೇಜ್‌ಗಳನ್ನು ನಾವು ಅನುಷ್ಠಾನಕ್ಕೆ ತರಬೇಕು. ಅದು ಕೋಕೋಕೋಲಾ ಕಂಪನಿಯಾಗಬಹುದು, ಬಿಡದಿಯಲ್ಲಿರುವ ಟಿಯೋಟಾ ಕಂಪನಿಯಾಗಬಹುದು, ಹುಬ್ಬಳ್ಳಿ-ಧಾರವಾಡದಲ್ಲಿರತಕ್ಕಂಥ ಟೆಲ್ಕೋ ಕಂಪನಿಯಾಗಬಹುದು, ನಾವು ಏನು ಘೋಷಣೆಯಲ್ಲಿ ಒಪ್ಪಂದದಲ್ಲಿ ಹೇಳಿರುತ್ತೇವೆ ಅದನ್ನು ಸ್ವಾಭಾವಿಕವಾಗಿ ನಿರೀಕ್ಷೆ ಮಾಡುತ್ತವೆ. ಆದರೆ ಒಟ್ಟಾಗಿ ಏನೆಂದರೆ ಹಿಂದಿನ ಸರ್ಕಾರ ಅದರ ಹಿಂದಿನ ಸರ್ಕಾರ, ಸರ್ಕಾರ ಕಂಟಿನ್ಯೂಯಿಂಗ್ ಇನ್ಸಿಟಿಟ್ಯೂಷನ್. ಬಂದ ಬಂದ ಸರ್ಕಾರಗಳು, ಹಿಂದಿನ ಸರ್ಕಾರಗಳು ಏನು ಮಾತುಗಳನ್ನು ಕೊಟ್ಟಿದ್ದವು ಅವುಗಳಿಗೆ ಮುಂದೆ ಬರತಕ್ಕಂಥ ಸರ್ಕಾರಗಳು ಬದ್ಧರಾಗಿದ್ದಾರೆ. ಆದುದರಿಂದ ಇಂಡಸ್ಟ್ರೀಯಲ್ ಪಾಲಿಸಿ ಚೌಕಟ್ಟು ಏನಿದೆ ಆ ಚೌಕಟ್ಟಿನ ಇತಿಮಿತಿಯೊಳಗೆ ನಾವು ಕಾರ್ಯಪ್ರವೃತ್ತರಾಗಿದ್ದೇವೆಯೇ ವಿನಃ ಆ ಇತಿಮಿತಿಗಳನ್ನು ಬಿಟ್ಟು ಹೋಗಿಲ್ಲ ಎನ್ನುವುದನ್ನು ಈ ಸದನದಲ್ಲಿ ಸ್ಪಷ್ಟಪಡಿಸುವುದಕ್ಕೆ ಈ ಸಮಯವನ್ನು ಉಪಯೋಗಿಸಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದವರೂ ಅಷ್ಟೆ, ಏನು ಫಾರಿನ್ ಮಲ್ಟಿ ನ್ಯಾಷನಲ್ಸ್ ಇದ್ದಾರೆ ಅವರು ನಮ್ಮ ದೇಶಕ್ಕೆ ಬರತಕ್ಕಂಥ ಕಾಲದಲ್ಲಿ ಘೋಷಿತವಾದಂತಹ ಇಂಡಸ್ಟ್ರೀಯಲ್ ಪಾಲಿಸಿ ಏನಿದೆ ಆ ಪಾಲಿಸಿಯೊಳಗೆ ಎಲ್ಲಾ ವ್ಯವಹಾರಗಳು ನಡೆಯಬೇಕಾಗುತ್ತದೆ. ಆದುದರಿಂದ ಅದರ ಬಗ್ಗೆ ಅನಾವಶ್ಯಕವಾದ ಗೊಂದಲವನ್ನು ನಿರ್ಮಾಣ ಮಾಡತಕ್ಕಂಥಾದ್ದು ಸಾಧುವಲ್ಲವೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇನ್ನು ರಿಕವರಿ

ಆಫ್ ಅರಿಯರ್ಸ್ ಬಗ್ಗೆ ಹೇಳುವುದಾದರೆ ಕಳೆದ ಬಜೆಟ್‌ನಲ್ಲಿ ನಾನು 1946 ರಿಂದ ಇದ್ದಂತಹ ಅರಿಯರ್ಸ್ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೆ. ಮತ್ತು ಅದಕ್ಕೆ ಒಂದು ಕರೆ ಸಮಾಧಾನ ಘೋಷಣೆಯನ್ನು ಮಾಡಿದ್ದೆ. ಆದರೆ ಅದನ್ನು ನಾವು ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಆ ಅನುಷ್ಠಾನ ಏನಾಯಿತು ಎಂದರೆ ನೀವು ಗುಲ್ಲೆಬ್ಬಿಸಿದಿರಿ ಅಷ್ಟೆ. 250 ಕೋಟಿ ರೂಪಾಯಿ ಅಬಕಾರಿ ದೊರೆಗಳಿಗೆ ಕೊಟ್ಟು ಬಿಟ್ಟರು ಎಂದು. ಆದರೆ ಒಂದು ಕಾಸನ್ನು ಕೂಡ ಯಾರಿಗೂ ಕೊಟ್ಟಿಲ್ಲ. ಏಕೆಂದರೆ ಅದರಲ್ಲಿ ಲೀಗಲ್ ಕಾಂಪ್ಲಿಕೇಷನ್ ಇದ್ದದ್ದರಿಂದ ಆ ಕರೆ ಸಮಾಧಾನ ಸ್ಕೀಮ್ ಅನ್ನು ನಾವು ಜಾರಿಗೆ ಕೊಡುವುದಕ್ಕಾಗಲಿಲ್ಲ. ಅದರ ಬಗ್ಗೆ ಲೀಗಲ್ ಡಿಪಾರ್ಟ್‌ಮೆಂಟ್ ಮತ್ತೆ ಎಕ್ಸಾಮಿನ್ ಮಾಡುತ್ತಿದೆ. ಲೀಗಲ್ ಕಾಂಪ್ಲಿಕೇಷನ್ಸ್ ಇಲ್ಲದೆ ಹೋದರೆ ಇವತ್ತು ಮತ್ತೆ ಸ್ಪಷ್ಟೀಕರಿಸುತ್ತೇನೆ 60 ವರ್ಷದ ಕೆಳಗೆ ಇರತಕ್ಕಂಥ ಈ ಲೋನುಗಳ ವಿಚಾರದಲ್ಲಿ ನಾವು ಬಿಟ್ಟುಕೊಡಬೇಕಾಗುತ್ತದೆ. ಏಕೆಂದರೆ ವಸೂಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಡ್ರೈವರ್ಸ್ ಹೆಸರಿನಲ್ಲಿ ಹರಾಜು ನಿಂತಿತ್ತು, ಅಡಿಗೆ ಮಾಡುವವರ ಹೆಸರಿನಲ್ಲಿ ಬೇನಾಮಿ ಹೆಸರುಗಳಲ್ಲಿ ಹರಾಜುಗಳೆಲ್ಲಾ 1940-50ರ ದಶಕಗಳಲ್ಲಿ ಆದುದ್ದರಿಂದ, ಅದು ಹಾಗೆ ಮುಂದೆ ಬಂದು ಬಂದು ನಾವು ಅದನ್ನು ಧೈರ್ಯವಾಗಿ ಮಾಡಿ ಈ ಒಂದು ಅಕೌಂಟ್ ಅನ್ನು ಹೇಗಾದರೂ ಮಾಡಿ ತೆಗೆದು ಹಾಕಬೇಕು ಎನ್ನುವ ದೃಷ್ಟಿಯಿಂದ ಆ ಘೋಷಣೆಯನ್ನು ಮಾಡಿದ್ದೆವು. ಆದರೆ ಅದನ್ನು ನಾವು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಇನ್ನು ರೈತರ ಆತ್ಮಹತ್ಯೆ ಬಗ್ಗೆ ವೈಜ್ಞಾನಿಕವಾಗಿ ಶೋಧನೆಯಾಗಬೇಕೆಂದು ಹೇಳಿದರು. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ, ಕಾರಣ ಏನೆಂದರೆ ನನಗೆ ಬಂದಿರತಕ್ಕಂಥ ಮಾಹಿತಿ ಅವರು ಸಾಲದ ಹೊರೆಯಿಂದ, ಹಾಗೂ ತಾನು ಬೆಳೆದ ಬೆಳೆಗಳಿಗೆ ಸರಿಯಾದಂತಹ ಬೆಲೆ ಸಿಗಲಿಲ್ಲವೆನ್ನುವ ಈ ಎರಡು ಕಾರಣಗಳು ಬಿಟ್ಟರೆ ಬೇರೆ ಕಾರಣ ಇಲ್ಲ. ಮಾನ್ಯ ಪಾಟೀಲರೇ, ಇನ್ನೇನಾದರೂ ಕಾರಣ ಇದೆಯಾ? ಬೆಲೆ ಸರಿಯಾಗಿ ಸಿಗಲಿಲ್ಲ. ಸಾಲ ತೀರಿಸುವುದಕ್ಕೆ ಸಾಧ್ಯವಾಗಲಿಲ್ಲ, ಇದಕ್ಕೆ ವೈಜ್ಞಾನಿಕವಾದ ಸ್ಟಡಿ ಏಕೆ ಬೇಕು ನನಗೆ ಗೊತ್ತಾಗಲಿಲ್ಲ. ಪಂಜಾಬ್‌ನಲ್ಲಿ ಕೂಡ ಇದರ ಬಗ್ಗೆ ಅವರು ಪ್ರಯತ್ನ ಮಾಡಿ ತಮ್ಮದೇ ಆದಂತಹ ವೈಜ್ಞಾನಿಕತೆಯನ್ನು ತೋರಿಸಿಕೊಟ್ಟಿದ್ದಾರೆ. ಅವರು ಏನು ಹೇಳುತ್ತಾರೆ ಎಂದರೆ "we are not going to provide incentives for Athmahathye." ನನ್ನನ್ನು ಅಲ್ಲಿಗೆ ಹೋಗಿ ನೋಡಲಿಲ್ಲ ಎಂದು ಹೇಳಿದಿರಿ. ಇದು ಒಂದು ದೂರು. ಈ ಬೆಳವಣಿಗೆ ಬಗ್ಗೆ ನನಗೆ ಬಹಳ ಚಿಂತೆ ಉಂಟಾಗಿದೆ. ಈ ಬೆಳವಣಿಗೆ ಬಗ್ಗೆ ನಮಗೆ ಸಾಕಾದಷ್ಟು ನೋವು ಉಂಟಾಗಿದೆ. ಆದುದರಿಂದ ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿಯೇ ನಾವು ರೈತರ ನಿಧಿಯನ್ನು ಮಾಡಿರತಕ್ಕಂಥಾದ್ದು. ಈ ರೈತರ ನಿಧಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಯಬೇಕಾದರೆ ಕಾರಣವೇನೆಂದರೆ ನಮ್ಮ ರಾಜ್ಯದಲ್ಲಿ ಆಗಿದ್ದಂತಹ ರೈತರ ಆತ್ಮಹತ್ಯೆ ಕಾರಣ. ಆ ದೃಷ್ಟಿಯಿಂದ ಹೊಸದಾಗಿ ನಾವು ಇದರ ಬಗ್ಗೆ ವೈಜ್ಞಾನಿಕ ಸಂಶೋಧನೆ ಮಾಡತಕ್ಕಂಥ ಅಗತ್ಯವಿಲ್ಲವೆಂದು ಈ ಸಮಯದಲ್ಲಿ ಹೇಳಿ ನಾನು ಈಗ ನಾಲ್ಕು ತಿಂಗಳಿಗೆ ಲೇಖಾನುದಾನವನ್ನು ಕೇಳುತ್ತಿದ್ದೇನೆ. ಮುಂದೆ ಈ ಸಭೆ ತಮ್ಮ ನಾಯಕತ್ವದಲ್ಲಿ, ತಮ್ಮ ನಿರ್ದೇಶನದ ಮೇಲೆ ಏನು ಸಬ್ಜೆಕ್ಟ್ ಕಮಿಟಿ ಆಗಿದೆ ಅದು, 45 ದಿವಸಗಳಲ್ಲಿ ಈ ಬಜೆಟ್‌ನ ಹತ್ತು ಹಲವಾರು ಅಂಶಗಳನ್ನು ತಮ್ಮ ತೀವ್ರ ಶೋಧನೆಗೆ ತನಿಖೆಗೆ ನಾವು ಇದನ್ನು ಅರ್ಪಿಸುತ್ತಿದ್ದೇವೆ. ಅನಂತರ ವರದಿಗಳು ಬಂದಮೇಲೆ ಮತ್ತೆ ಇದರ ಬಗ್ಗೆ ನಮ್ಮ ಅನಿಸಿಕೆಗಳು ಇದ್ದರೆ ಆ ಸಮಯದಲ್ಲಿ ಆ ಅನಿಸಿಕೆಗಳನ್ನು

ಹಂಚಿಕೊಳ್ಳುತ್ತೇವೆ. ಇಷ್ಟು ಸಮಾಧಾನದಿಂದ ನಮ್ಮ ಮಾತುಗಳನ್ನು ಕೇಳಿದ್ದಕ್ಕೋಸ್ಕರ ತಮಗೆ ಮತ್ತು ಸಭೆಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ಎರಡು ಮೂರು ವಿಚಾರಗಳಿಗೆ ಕ್ಲಾರಿಫೈ ಕೇಳಬೇಕು. ಅವರು ಹೇಳದೆ ಇರುವ ವಿಚಾರಗಳಿಗೆ ಅವರು ನಮಗೆ ಕ್ಲಾರಿಫೈ ಮಾಡಬೇಕಾಗುತ್ತದೆ. ಹಲವಾರು ವಿಚಾರಗಳಿಗೆ ನಾವು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ ಪುಸ್ತಕದ ಹಾಗೂ ಅಲ್ಯುಮಿನಿಯಂ ಬೆಲೆ ಇವರ ಮೇಲಿನದು ತೆರಿಗೆ ದೊಡ್ಡ ಮನಸ್ಸು ಮಾಡಿ ಹಿಂದೆ ತೆಗೆದುಕೊಂಡಿದ್ದಾರೆ, ಅದಕ್ಕೆ ನಾವು ಅಭಾರಿಯಾಗಿದ್ದೇವೆ. ಆದರೆ ಒಂದು ದೊಡ್ಡ ವಿಚಾರದ ಬಗ್ಗೆ ತಾವು ಕ್ಲಾರಿಫೈ ಮಾಡಬೇಕು. ಏಕೆಂದರೆ ತಾವು ಹೇಳಿದಿರಿ, In what machanism they have come to that conclusion ಎಂದು ಹೇಳುವುದನ್ನು ನಮ್ಮ ಇಲಾಖಾ ಅಧಿಕಾರಿಗಳಿಂದ ಕೇಳಿ ಕ್ಲಾರಿಫೈ ಮಾಡುತ್ತೇನೆಂದು ಹೇಳಿದಿರಿ. ನನಗೆ ಅನ್ನಿಸುತ್ತದೆ, ಅದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಪ್ರಾರಂಭದಲ್ಲಿ ಸನ್ಮಾನ್ಯ ಮೊಯಿಲಿಯವರು ಬಾರಿ ಸಮಯದಿಂದ ಇದನ್ನು ಮಾಡುವಂತಹ ಸಂದರ್ಭದಲ್ಲಿ ಬಜೆಟ್‌ಗೆ ಪೂರ್ವಭಾವಿಯಾಗಿ ಇದರ ಬಗ್ಗೆ ತಾವು ಅವರು ಸಮಾಲೋಚನೆ ಮಾಡಿಕೊಂಡಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಮತ್ತೆ ಅವರನ್ನು ಕರೆಸಿ ಕೇಳಬೇಕಾದಂತಹ ಅವಶ್ಯಕತೆ ಇಲ್ಲ. ಪುಟ 129 ರಲ್ಲಿ ಇದನ್ನು ಬಾರಿ ಕ್ಲಾರಿಫೈ ಮಾಡಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಡಾಟಾವನ್ನು ಅದರಲ್ಲಿ ಸಪ್ಲೈ ಮಾಡಿದ್ದಾರೆ. In Annexure-10, an estimation of evasion of the excise duty on arrack, ಪೂರ್ತಿ ಮಾಹಿತಿಯನ್ನು ಕೊಟ್ಟಿದ್ದಾರೆ. ಅದೇರೀತಿ 116 ಮತ್ತು 117 ಪುಟಗಳಲ್ಲಿ ನಾನು ಒಂದೆರಡು ಸೆಂಟೆನ್ಸ್ ಅನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

> "It appears likely that duty evasion in arrack is of the order of around Rs.61 crores in 1998-99 and Rs.106 crores in 1999-2000 which amounts to 51% and 74% of the excise duties from arrack for these years."

ಅಧ್ಯಕ್ಷರು : ಉತ್ತರ ಆಗಿದೆ. ಇನ್ನು 2-3 ಕ್ಲಾರಿಫಿಕೇಷನ್ ಇದೆ. ಐದು ನಿಮಿಷದಲ್ಲಿ ಮುಗಿಸುತ್ತಾರೆ. ಸದಸ್ಯರೆಲ್ಲರೂ ಅವರವರ ಜಾಗಕ್ಕೆ ಹೋಗಬೇಕು. ಅಥವಾ ಲಾಬಿಯಲ್ಲಿ ಹೋಗಿ ಮಾತನಾಡಿ. ಅಷ್ಟರಲ್ಲಿ ಏನು ಅವಸರ? ಇನ್ನು ಹತ್ತು ನಿಮಿಷದಲ್ಲಿ ಮುಗಿಯುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ : ಮುಂದುವರೆದು ಅದೇ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಪ್ಯಾರಾ 5.53 ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

> "Proliberation of Non-duty paid IML in the form of seconds is the most widely used mechanism for evasion. Physical checking by staff at distilleries, is neutralised by usual methods, export permits misused and re-used and sales under-reported........"

Further it says:

> " The Commission's estimate of IML evasion at Annexure-11 has produced startling results. For excise duty, the average of estimates of or evasion for 1998-99 and 1999-2000 comes to Rs.390 crores, which is thrice the average excise duty from IML for these years. In addition, sales tax evasion a mounts to Rs.638 crores the total coming to Rs.1,028 crores."

ಇನ್ ಡಿಟೇಲ್ ಆಗಿ ಆ ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. ಅನೆಕ್ಸರ್‌ನಲ್ಲಿ ಯಾವ್ಯಾವ ಸೋರ್ಸ್ ಏನೇನು ಆಗುತ್ತದೆ ಎಂದೂ ಕೂಡ ಕೊಟ್ಟಿದ್ದಾರೆ. ಅದನ್ನು ಆರ್ಥಿಕ ಇಲಾಖೆ ಅವರ ಲೆಟರ್ ಕಳುಹಿಸಿ ತೆಗೆದುಕೊಳ್ಳಬೇಕೆಂದು ಇಲ್ಲ.

> "5.55: Despite the guidance basic price indicated by the Excise Commissioner of Rs.250 per case, it is widely believed that IML is sold at lower prices in the market. It this is taken into consideration, the evasion would be even higher."

1.10 ಪಿ.ಎಂ.

ಇದು ಅಬಕಾರಿ ಇಲಾಖೆಯವರು ಕೊಟ್ಟಂಥ ಅಂಕಿಅಂಶಗಳು, ಇದರ ಪ್ರಕಾರ ಹಿಂದೆಯೇ ತಾವು ಅನುಸರಿಸುತ್ತಿದ್ದರೆ ಹೆಚ್ಚಿಗೆ ರಿಕವರಿ ಮಾಡುವುದಕ್ಕೆ ಸಾಧ್ಯಯತೆ ಇತ್ತು. ಅವರು ತಮಗೆ ತಿಳಿಸಲೇ ಇಲ್ಲ, ಬಹುಶಃ ಅಬಕಾರಿ ಇಲಾಖೆಯವರೂ ಕೂಡ ಅಬಕಾರಿ ಲಾಭಿಯವರೊಡನೆ ಶಾಮೀಲಾಗಿದ್ದಾರೆಂದು ಅನಿಸುತ್ತದೆ, ಇನ್ನಾದರೂ ತಾವು ಇದನ್ನು ಪರಿಶೀಲನೆ ಮಾಡಬೇಕು. ಏಕೆಂದರೆ ಅಷ್ಟು ಸ್ಪಷ್ಟವಾಗಿ ಕೊಟ್ಟಾಗಲೂ ಕೂಡ ತಮಗೆ ಅದನ್ನು ತಿಳಿಸದಿರುವುದರಿಂದ ಪರೋಕ್ಷವಾಗಿ ಅವರೊಡನೆ ತಮ್ಮ ಹೊಂದಾಣಿಕೆ ಇದೆ ಎಂದು ಹೇಳಲೇ ಬೇಕಾಗುತ್ತದೆ, ನಾನು ಆನ್ ರೆಕಾರ್ಡ್ ನಾನು ಹೇಳುತ್ತಿದ್ದೇನೆ, ಔಟ್ ಆಫ್ ರೆಕಾರ್ಡ್ ಹೇಳುತ್ತಿಲ್ಲ; ಆದುದರಿಂದ ಇದನ್ನು ವೆರಿಫೈ ಮಾಡಬೇಕು. ಇನ್ನು ರೈತರ ಬಗ್ಗೆ ತತ್ಕಾಲ್ ಯೋಜನೆ ಬಗ್ಗೆ ಹೇಳುವುದಾದರೆ ಈಗಾಗಲೇ ಬಡ್ಡಿಯ ಬಗ್ಗೆ ಸಾಕಷ್ಟು ಹೇಳಲಾಗಿದೆ ಚರ್ಚೆ ಅವಶ್ಯಕತೆ ಇಲ್ಲ. ಆದರೆ ತಾವು ಮಧ್ಯ ಹಾಗೂ ದೀರ್ಘಾವದಿ ಸಾಲದ ಬಗ್ಗೆ ತಾವೇನೂ ಹೇಳಲಿಲ್ಲ, ಬಹುಶಃ ಇದರ ಬಗ್ಗೆ ಹೆಚ್ಚಿನ ಒತ್ತನ್ನು ಕೊಡುವ ಅವಶ್ಯಕತೆ ಇದೆ, ಮಧ್ಯಾವಧಿ ಸಾಲವನ್ನು ದೀರ್ಘಾವಧಿ ಸಾಲಗಳನ್ನಾಗಿ ಪರಿವರ್ತನೆ ಮಾಡಬೇಕೆಂಬ ಬೇಡಿಕೆಯೂ ಇದೆ. ಅದರ ಬಗ್ಗೆಯೂ ಕೂಡ ತಾವು ಗಮನವನ್ನು ಹರಿಸಬೇಕು. ತತ್ಕಾಲ್ ಯೋಜನೆಯ ಬಗ್ಗೆ ಮೊನ್ನೆ ನಾನು ಪ್ರಸ್ತಾಪ ಮಾಡಿದೆ, 25,000 ರೂ. ಅಥವಾ ಖರ್ಚು ಇದರಲ್ಲಿ ಯಾವುದು ಕನಿಷ್ಟವಾಗುತ್ತದೆಯೋ ಅದನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಐದು ಸಾವಿರ ರೂಪಾಯಿಯಲ್ಲಿ ಒಂದು ಕಂಬ ಹಾಕಿ ಸಂಪರ್ಕ ಕೊಡಬಹುದು, ಅದಕ್ಕೆ ಅಲ್ಲಿ 25000 ರೂಪಾಯಿಗಳನ್ನು ಅಲ್ಲಿ ಕಟ್ಟಬೇಕಾ? ಇದು ಅವಶ್ಯಕತೆ ಇದೆಯೇ? ಈ ಬಗ್ಗೆ ನನ್ನದೊಂದು ವಿನಂತಿ ಏನೆಂದರೆ, ವಾಸ್ತವ ವೆಚ್ಚ ಅಥವಾ 10000 ರೂ. ಇದರಲ್ಲಿ ಯಾವುದು ಕಡಿಮೆಯಿದೆಯೋ ಅದನ್ನು ಗಣನೆಗೆ ತೆಗೆದುಕೊಳ್ಳಬೇಕು, ಯಾರಿಗೆ ತುರ್ತು

ಇದೆಯೋ ಅವರು ತೆಗೆದುಕೊಳ್ಳುವುದಕ್ಕೆ ಇದು ಬಹಳ ಒಳ್ಳೆಯದು. ಆದರೆ ತಾವು ನಿಗದಿ ಮಾಡಿದ ಮೊತ್ತ ತುಂಬಾ ಜಾಸ್ತಿಯಾಯಿತು, ಆದಕಾರಣ ನಾನು ಈಗಾಗಲೇ ತಿಳಿಸಿದಂತೆ ಮಾಡಿದರೆ ಒಳ್ಳೆಯದು. ಇನ್ನು ಬಿಪಿಎಲ್ ಹಳದಿ ಕಾರ್ಡ್ ಬಗ್ಗೆ ಪ್ರಸ್ತಾಪ ಮಾಡಲು ಇಚ್ಛಿಪಡುತ್ತೇನೆ, ಫಲಾನುಭವಿಗಳ ಪಟ್ಟಿ ಸರಿಯಾಗಿ ಆಗಿಲ್ಲವೆಂದು ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆದುದರಿಂದ ರಿಸರ್ವೆಯನ್ನು ಗ್ರಾಮ ಲೆಕ್ಕಾಧಿಕಾರಿಗಳಿಂದಲೇ ಮಾಡಿಸಬೇಕು, ಯಾರು ಬಡ ಜನರಿದ್ದಾರೆ ಅವರ ಬಗ್ಗೆ ಹೆಚ್ಚಿನ ಒತ್ತನ್ನು ಕೊಡಬೇಕು, ಈ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟೀಕರಿಸಬೇಕು. ಹಿಂದಿನ ಆಯವ್ಯಯದ ಅನುಬಂಧ 2 ಅನ್ನು ನೋಡಿದಾಗ, ತೆರಿಗೆ ದರಗಳನ್ನು ಸುಮಾರು 25 ಐಟಂಗಳಿಗೆ ಇಳಿಸಿದ್ದಿರಿ. ಅನುಬಂಧ 3 ರಲ್ಲಿ ಸುಮಾರು 23 ಐಟಂಗಳಿಗೆ ಪುನರ್ವಿಮರ್ಶೆ ಮಾಡಿದ್ದೀರಿ, ಅನುಬಂಧ 4 ರಲ್ಲಿ 10 ಐಟಂಗಳಿಗೆ ತೆರಿಗೆಯನ್ನು ಮತ್ತಷ್ಟು ಕಡಿಮೆ ಮಾಡಲಾಗಿತ್ತು. 5 ಐಟಂಗಳಿಗೆ ತೆರಿಗೆಗಳನ್ನು ಗುಂಪುಗೊಳಿಸಲಾಗಿತ್ತು, ಹೀಗೆ ಒಂದು ರೀತಿಯ ವ್ಯವಸ್ಥಿತವಾದ ಕೆಲಸಗಳು ಆಗಿತ್ತು. ಆದರೆ ಈ ಸಾಲಿನ ಆಯವ್ಯಯದಲ್ಲಿ ದರಗಳ ಇಳಿಕೆಯ ಪಟ್ಟಿಯೇ ಇಲ್ಲ, ಏರಿಕೆ ಮಾತ್ರ ಇದೆ. ನಮ್ಮ ಬಿದರಿನಿಂದ ಮಾಡಿದ ವಸ್ತುಗಳಿರಬಹುದು, ಇಂತಹವುಗಳನ್ನು ಯಾರು ಉಪಯೋಗ ಮಾಡುತ್ತಾರೆಂಬುದು ಬಹುಶಃ ತಮಗೆ ಗೊತ್ತಿದೆ, ಇಂತಹವುಗಳ ಮೇಲೆ ದರಗಳನ್ನು ಇಳಿಸಬೇಕೆನ್ನುವ ಬೇಡಿಕೆ ಇದೆ. ದಯವಿಟ್ಟು ಅದನ್ನು ಪರಿಶೀಲಿಸಬೇಕು. ಬಿಯರ್‌ಗಳ ಮಾರಾಟವನ್ನು ಎಲ್ಲಾ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ಗಳಲ್ಲಿ ಮಾರಾಟ ಮಾಡಲು ಅವಕಾಶ ಮಾಡಿಕೊಡುವುದೆಂಬುದು ತಮ್ಮ ಉದ್ದೇಶವಾಗಿದೆ. ಈಗ 2300 ರಿಂದ 100 ಕ್ಕೆ ಇಳಿಸಿದ್ದಿರಿ, ತಾತ್ಕಾಲಿಕವಾಗಿ ಅದನ್ನು ತಾವು ಕೈಬಿಡಬೇಕು. ಪರೋಕ್ಷವಾಗಿ ನಮಗೆ ಏನು ಕಾಣುತ್ತಿದೆ ಎಂದರೆ ತಾವು ಯಾರಿಗೋ ಭರವಸೆಯನ್ನು ಕೊಟ್ಟಿದ್ದಿರಿ, ಎಲ್ಲವನ್ನು ಕೈಬಿಟ್ಟರೆ ತಮ್ಮ ಪ್ರತಿಷ್ಠೆಗೆ ಕುಂದುಂಟಾಗುತ್ತದೆಂಬ ಭಾವನೆ ಇದ್ದರೆ ದಯವಿಟ್ಟು ಬಿಟ್ಟು ಆ 100 ಅನ್ನು ಕೈಬಿಡಬೇಕು, ಇದನ್ನು ಇಡೀ ಸದನದ ಪರವಾಗಿ ತಮ್ಮಲ್ಲಿ ಮಾಡಿಕೊಳ್ಳುವ ವಿನಂತಿಯಾಗಿದೆ. ಮುಂದಿನ ಸಂದರ್ಭದಲ್ಲಿ ಆ ಬಗ್ಗೆ ಚರ್ಚೆ ಮಾಡಿ ಮಾಡುವುದಕ್ಕೆ ತೊಂದರೆ ಇರುವುದಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಸನ್ಮಾನ್ಯ ಮುಖ್ಯಮಂತ್ರಿಗಳು) : ಸ್ವಾಮಿ, ಉತ್ತರ ಪ್ರದೇಶದಲ್ಲಿ ರಾಮ ರಾಜ್ಯವಿದೆ, ಅಲ್ಲಿ ಮಧ್ಯಪಾನದ ವ್ಯವಹಾರ ಹೇಗೆ ನಡೆಸುತ್ತಿದ್ದಾರೆಂದು ನೋಡಿಕೊಂಡು ಬರಲಿ ಎಂದು ನಮ್ಮ ಅಧಿಕಾರಿಗಳನ್ನು ಉತ್ತರಪ್ರದೇಶಕ್ಕೆ ಕಳುಹಿಸಿದ್ದೆ. ಇವತ್ತು ನನ್ನ ಭಾಷಣದಲ್ಲಿ ಏನು ಘೋಷಣೆಯನ್ನು ಮಾಡಿದೆ, ಅದು ಆ ಉತ್ತರ ಪ್ರದೇಶದ ರಾಮರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಏನು ನಡೆಸುತ್ತಿದ್ದಾರೆ ಅದನ್ನೇ ಬೆಂಗಳೂರಿನಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಯಾರಿಗೋ ಮಾತನ್ನು ಕೊಟ್ಟಿದ್ದೇನೆಂದು ಮಾತಿಗೆ ಸಿಕ್ಕಿ ನಾನೇನು ಅವರನ್ನು ಚುನಾವಣೆಗೆ ನಿಲ್ಲಿಸಿದ್ದೇನೆಯೇ? ಏನೂ ಇಲ್ಲ, ಆದುದರಿಂದ ಯಾರಿಗೋ ಮಾತನ್ನು ಕೊಟ್ಟ ಪ್ರಶ್ನೆ ಉದ್ಭವಿಸುವುದಿಲ್ಲ. ನಾನು ಅಂಕಿಅಂಶಗಳನ್ನು ಓದಿದ್ದೇನೆ, ರಾತ್ರಿಯೆಲ್ಲಾ ರಾಮಾಯಣ ನೋಡಿ ಬೆಳಗಾದ ಮೇಲೆ ರಾಮನಿಗೂ ಸೀತೆಗೂ ಏನಾಗಬೇಕೆಂದು ಕೇಳಿದಂತಾಯಿತು. ಕಳೆದ ವರ್ಷ, ಈಗಿನ ವರ್ಷದ ಹಾಗೂ ಮುಂದಿನ ವರ್ಷ ಹೇಗೆಂದು ರೆವಿನ್ಯೂವಿನ ಪರ್ಸೆಂಟ್ ಆಫ್ ಗ್ರೋತ್ ಅನ್ನು ಹೇಳಿದ್ದೇನೆ, ಇಷ್ಟಾದರು ಅಬಕಾರಿ ವಿಚಾರವನ್ನು ಪ್ರಸ್ತಾಪ ಮಾಡುವುದರಲ್ಲಿ

ನನಗೇನೂ ಅರ್ಥ ಕಾಣುತ್ತಿಲ್ಲ. We are getting in touch with them. We will find out what is the mechanism that they have employed in arriving at these figures. After all, figures are figures. How they have come to this conclusion? We will get in touch with them and whatever recommendations that they have made, will be scrutinised by the government and whatever is good for the state, we will adopt it.

ಶ್ರೀ ಡಿ.ವಿ. ಸದಾನಂದಗೌಡ : ಮಧ್ಯಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾಡುವ, ಮೀನುಗಾರಿಕೆ ಬೋಟ್‌ಗಳ ಡಿಸೆಲ್ ಸಬ್ಸಿಡಿ, ಹಾಗೂ ಐಸ್ ಪ್ಲಾಂಟ್‌ರವರು ತಮ್ಮ ಹತ್ತಿರ ಮೊನ್ನೆ ಬಂದಿದ್ದರು, ಅದರ ಬಗ್ಗೆಯೂ ತಾವು ಗಮನಹರಿಸಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಸ್ವಾತಂತ್ರ್ಯ ಬಂದ 10-12 ವರ್ಷದವರೆವಿಗೂ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಎಂದಿತ್ತು, ನನ್ನ ತಾಲ್ಲೂಕಿನಲ್ಲಿ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಇದ್ದ. ಆಗ ಯಾವ ಕೆರೆಗಳ ಬಂಡ್ ವೀಕ್ ಆಗಿದೆಯೋ, ಕೊಡಿ ಇಲ್ಲವೊ, ತೂಬ್ ಇಲ್ಲವೊ ಅದನ್ನು ಸರ್ವೆ ಮಾಡಿ, ಬಂಡ್ ಅನ್ನು ಸ್ಟ್ರೇಂತನ್ ಮಾಡಿ ಟರ್ಫಿಂಗ್ ಮಾಡಿ ಕೊಡಿ ತೂಬ್ ಅನ್ನು ರಿಪೇರಿ ಮಾಡಿ, ಹೆಚ್ಚು ಕಡಿಮೆ ಟರ್ಮ್ ಕಿ ಪ್ರಾಜೆಕ್ಟ್ ತರಹ ಮಾಡಿ ಬೇರೆ ಕೆರೆಗೆ ಹೋಗುತ್ತಿದ್ದರು. 30 ವರ್ಷದಲ್ಲಿ ರೆಸ್ಟೋರೇಷನ್ ಆಫ್ ಟ್ಯಾಂಕ್ಸ್ ಆನ್ ಎಕಾನಾಮಿಕಲ್ ಯಾರೋ ಹೇಳಿದ್ದಾರೆಂದು ಅದನ್ನೇ ಪಾಲಿಸಿಕೊಂಡು ಬಂದರು. ಒಂದು ಕೆರೆಯೂ ರೆಸ್ಟೋರ್ ಆಗಲಿಲ್ಲ. ಪರಿಣಾಮವಾಗಿ, ಕೆರೆಗಳಿಗೆಲ್ಲಾ ಹೂಳುಬಿತ್ತು, ವಾಟರ್ ಟೇಬಲ್ ಕೆಳಗೆ ಹೋಯಿತು, ಕುಡಿಯುವ ನೀರಿಗೂ ಕೂಡ ತೊಂದರೆಯುಂಟಾಯಿತು. ಆ ಸಮಯದಲ್ಲಿ 15-20 ಅಡಿ ಬಾವಿಯನ್ನು ತೆಗೆದರೆ ಸೊಗಸಾಗಿ ನೀರು ಸಿಗುತ್ತಿತ್ತು. ಈಗ 500 ಅಡಿಯುವರೆವಿಗೂ ಹೋದರೂ ನೀರು ಸಿಗುತ್ತಿಲ್ಲ. ಈಗ ಜಿಲ್ಲಾ ಪರಿಷತ್‌ಗೆ ಸಣ್ಣ ಕೆರೆಗಳ ರಿಪೇರಿ ಕೆಲಸವನ್ನು ಕೊಟ್ಟಿದ್ದೀರಿ, ಅವರು ಮಾಡಿದ ಕೆರೆಗಳನ್ನೇ ಮಾಡುತ್ತಿರುತ್ತಾರೆ. ಪರಿಣಾಮವಾಗಿ ಯಾವ ಕೆರೆಗಳ ರಿಪೇರಿಯೂ ಕೂಡ ವ್ಯವಸ್ಥಿತವಾದ ರೀತಿಯಲ್ಲಿ ಆಗುತ್ತಿಲ್ಲ. ಆದುದರಿಂದ ಈ ಕೆರೆಗಳನ್ನು ಮೊದಲು ಇದ್ದಂಥ ಟರ್ನ್‌ಕೀ ಪ್ರಾಜೆಕ್ಟ್ ತರಹ ಮೊದಲಿದ್ದ ಹಾಗೆ ರೆಸ್ಟೋರೇಷನ್ ಆಫ್ ಟ್ಯಾಂಕ್ಸ್ ಮಾಡುವ ಹಾಗೆ ಆದೇಶ ಕೊಡಬೇಕು. ಒಂದು ಕೆರೆಯನ್ನು ಈ ರೀತಿಯಾಗಿ ಒಂದು ಸಾರಿ ಕೈಗೆತ್ತಿಕೊಂಡರೆ ಇನ್ನು 20-30 ವರ್ಷಗಳವರೆಗೆ ರಿಪೇರಿ ಮಾಡುವಂತಿಲ್ಲ. ಆದರೆ ಈಗಿರುವ ವ್ಯವಸ್ಥೆ ಪ್ರಕಾರ ಕಂಟ್ರಾಕ್ಟ್ ದಾರನಿಗೆ ಅವಶ್ಯಕತೆ ಬಂದಂತೆ, ಇಂಜಿನಿಯರ್ ಅವಶ್ಯಕತೆ ಬಿದ್ದಂತೆ ಕೆರೆಗಳ ರಿಪೇರಿಯಾಗುತ್ತಿವೆ. ಯಾವ ಕೆರೆಗೆ ರಿಪೇರಿಗೋಸ್ಕರ ಎಷ್ಟು ಹಣ ಖರ್ಚಾಯಿತೆಂಬುದು ಗೊತ್ತಾಗುತ್ತಿಲ್ಲ, ನಿಮ್ಮ ಕಾಲದಲ್ಲಿ ಕೆರೆಗಳ ರೆಸ್ಟೋರೇಷನ್ ಕೆಲಸವನ್ನು ಪುನಃ ಪ್ರಾರಂಭ ಮಾಡಬೇಕು. ಎರಡನೆಯದಾಗಿ, ಕೊಳಚೆ ಪ್ರದೇಶದಲ್ಲಿರುವ ಜನರ ಬಗ್ಗೆ ಹೆಚ್ಚು ಗಮನವನ್ನು ಕೊಟ್ಟು ಅವರೂ ಕೂಡ ಮಾನವೀಯ ದೃಷ್ಟಿಯಿಂದ ಬಾಳಿ ಬದುಕಬೇಕೆಂಬುದರ ಬಗ್ಗೆ ಒತ್ತು ಕೊಟ್ಟು ತಾವು ಮಾತನಾಡಿದ್ದಿರಿ, ಬಹಳ ಸಂತೋಷ, ಅದಕ್ಕೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಆದರೆ ನನ್ನ ಸಣ್ಣ ಕೋರಿಕೆ ಏನೆಂದರೆ, ಆ ಅಸಹಾಯಕ, ಬಡವರ ಮುಗ್ಧಮಕ್ಕಳು ಪೋಷಕರು ಕೂಲಿಗೆ ಹೋಗುವುದರಿಂದ ಅವರಿಗೆ ಸರಿಯಾದ ವಿದ್ಯಾಭ್ಯಾಸವಿಲ್ಲ, ಸ್ನಾನವಿಲ್ಲ, ಊಟವಿಲ್ಲ, ತಿಂಡಿಯಿಲ್ಲ, ಚಿಕ್ಕಚಿಕ್ಕ ಮನೆಯೊಳಗೆ ಸಂಸಾರ

ಮಾಡಿಕೊಂಡು ಬಹಳ ತೊಂದರೆಯಲ್ಲಿದ್ದಾರೆ. ಕೊನೆಯಪಕ್ಷ ಅವರ ಮುಂದಿನ ಪೀಳಿಗೆಯಾದರೂ ಸುಸಂಸ್ಕೃತರಾಗಿ ಬಾಳುವಂತಾಗಬೇಕಾದರೆ, ಕೊನೆಯಪಕ್ಷ ಎಸ್.ಎಸ್.ಎಲ್.ಸಿ.ಯವರೆಗೆ ಅವರ ಮಕ್ಕಳಿಗೆ ಸರ್ಕಾರವತಿಯಿಂದ ವಸತಿ ಶಾಲೆಗಳನ್ನು ತೆರೆದು ಅವರು ವಿದ್ಯಾವಂತರಾಗುವಂತೆ ತಮ್ಮ ಕಾಲದಲ್ಲಿ ವ್ಯವಸ್ಥೆ ಮಾಡಬೇಕು, ಆ ನಿರ್ಭಾಗ್ಯ ಮಕ್ಕಳಿಗೆ ದಾರಿದೀಪವಾಗುತ್ತದೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ವಿಷಯವನ್ನು ಮರೆತಿದ್ದರು, ವೆಟರ್ನರಿ ಯುನಿವರ್ಸಿಟಿ ಬಗ್ಗೆ ಹೇಳುವುದಾದರೆ ತುಂಬಾ ತುರ್ತಾಗಿ ಆಗಬೇಕಾಗಿರುವ ಕೆಲಸ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶ ಹಾಗೂ ಪಶ್ಚಿಮ ಬಂಗಾಳ ಈ ಎರಡು ಕಡೆ ಮಾತ್ರ ನಮ್ಮ ದೇಶದಲ್ಲಿ ಅಂತಹ ಯುನಿವರ್ಸಿಟಿಗಳು ಇದ್ದಾವೆ. ಕೃಷಿ ವಿಶ್ವವಿದ್ಯಾಲಯದಿಂದ ವೆಟರ್ನರಿ ಹಾಗೂ ಮೀನುಗಾರಿಕೆ ಈ ಎರಡು ಬಿಡುಗಡೆಯಾಗಿ ವೆಟರ್ನರಿ ಯುನಿವರ್ಸಿಟಿಯಾಗಬೇಕಾಗಿರುವುದು ತುಂಬಾ ಅವಶ್ಯಕತೆ ಇದೆ. ಈ ರಾಷ್ಟ್ರದಲ್ಲಿ ಪಶು ಸಂಪತ್ತು ಜಾಸ್ತಿ ಇದೆ. ತಮ್ಮ ಕಾಲದಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು. ನಾನೂ ಸಹ ಮಂತ್ರಿಯಾಗಿದ್ದಾಗ ಬಹಳ ಪ್ರಯತ್ನ ಪಟ್ಟೆ. ಮಾನ್ಯ ಬೈರೇಗೌಡರು ಕೃಷಿ ಸಚಿವರಾಗಿದ್ದರು. ಅವರು ಬಿಡುಗಡೆ ಮಾಡಲು ಅಷ್ಟು ಮನಸ್ಸು ಮಾಡಲಿಲ್ಲ. ನೀವು ಮಂತ್ರಿಯಾಗಿದ್ದಿರಿ, ಆಗ ಏಕೆ ಮಾಡಲಿಲ್ಲ ಎಂದು ನಿನ್ನೆ ನನ್ನನ್ನು ಆ ಕಡೆಯಿಂದ ಕೇಳಿದರು. ತಮ್ಮ ಕಾಲದಲ್ಲಿ ಇದಕ್ಕೆ ಒಪ್ಪಿಗೆ ಕೊಡಬೇಕು, ಇದು ಆಗಬೇಕು. ಇದಕ್ಕೆ ಬಹಳಷ್ಟು ಹಣ ಬೇಕಾಗಿಲ್ಲ, ಕಡಿಮೆ ಹಣವಾದರೆ ಸಾಕು. ಅದರ ಜೊತೆಗೆ, ರಾಯಚೂರಿನ ಒಪೇಕ್ ಆಸ್ಪತ್ರೆಯನ್ನು ನಡೆಸಲು ಖಾಸಗಿಯವರಿಗೆ ವಹಿಸಿದ್ದೀರಿ. ಅದೇ ರೀತಿಯ 200 ಆಸ್ಪತ್ರೆಗಳಿವೆ. ಆ 200 ಆಸ್ಪತ್ರೆಗಳಲ್ಲಿ ನಿರ್ವಹಣಾ ಕಾರ್ಯ ಸರಿಯಾಗಿ ಆಗುತ್ತಿಲ್ಲ. ತಮ್ಮನ್ನು ಮುಂದಿನ ತಿಂಗಳು ಉದ್ಘಾಟನೆಗಾಗಿ ಕೃಷ್ಣರಾಜಪುರ, ಹೊಸಕೋಟೆ ಮತ್ತು ಕೋಲಾರಕ್ಕೆ ಕರೆದುಕೊಂಡು ಹೋಗಬೇಕೆಂದಿದ್ದೇವೆ. ಸುಮಾರು ಎರಡೂವರೆ ಕೋಟಿ ರೂಪಾಯಿಗಳ ದೊಡ್ಡ ಆಸ್ಪತ್ರೆ ಬಂದಿದೆ. ಅವುಗಳನ್ನೂ ಖಾಸಗಿಯವರಿಗೆ ವಹಿಸಿಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಪಶುಸಂಗೋಪನೆಗೆ ಬಹಳ ಶ್ರೇಷ್ಠವಾದಂಥ ರಾಜ್ಯ. ಇಲ್ಲಿ ವಿಶ್ವವಿದ್ಯಾನಿಲಯದ ಅವಶ್ಯಕತೆ ಇದೆ. ತಾವು ಪಶುಸಂಗೋಪನೆಯ ಬಗ್ಗೆ ಹೆಚ್ಚಿನ ಗಮನ ಕೊಡಬೇಕು, ಪಶು ವಿಶ್ವವಿದ್ಯಾಲಯ ಆಗಬೇಕು, ಕಾಲೇಜುಗಳು ಆಗಬೇಕು. ನಮ್ಮ ರಾಜ್ಯವನ್ನು ಉಳಿದ ಎಲ್ಲಾ ರಾಜ್ಯಗಳಿಗೆ ಪಶುಸಂಗೋಪನೆ ವಿಚಾರದಲ್ಲಿ ಮಾದರಿಯನ್ನಾಗಿ ಮಾಡಲು ಇಲ್ಲಿ ಪರಿಸರ, ಹವಾಮಾನ ಎಲ್ಲವೂ ಅನುಕೂಲವಾಗಿವೆ. ಆದ್ದರಿಂದ, ಅದು ಆಗಬೇಕು ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಹನುಮೇಗೌಡರು ಸಣ್ಣ ನೀರಾವರಿ ಸಚಿವ ಖಾತೆಗೆ ಸಂಬಂಧಪಟ್ಟಂತೆ, ಕೆರೆಗಳ ದುರಸ್ತಿಗೆ ಟರ್ನ್-ಕೀ ಅಪ್ರೋಚ್ ಇರಬೇಕು ಎಂದು ಹೇಳಿದ್ದಾರೆ. ಅದರ ಸ್ಪಿರಿಟ್‌ಅನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಅದು ಆ ರೀತಿಯಲ್ಲೇ ನಡೆಯಬೇಕಾಗುತ್ತದೆ. ಸಣ್ಣ ನೀರಾವರಿ ಇಲಾಖೆಯೇ ಈ ಕಾರ್ಯವನ್ನು ನಿರ್ವಹಣೆ ಮಾಡಬೇಕಾಗುತ್ತದೆ. ಎರಡನೆಯದಾಗಿ, ಸ್ಲಂ ಡೆವಲಪ್‌ಮೆಂಟ್ ವಿಚಾರದಲ್ಲಿ ತಾವು ನನ್ನ ಗಮನವನ್ನು ಸೆಳೆದಿದ್ದೀರಿ.

ಅರ್ಬನ್ ಆಶ್ರಯ ಯೋಜನೆಯನ್ನೂ ನಾವು ಪ್ರಾರಂಭ ಮಾಡಿದ್ದೇವೆ. ಸ್ಲಂ ಡೆವಲಪ್‌ಮೆಂಟ್ ಗೋಸ್ಕರವಾಗಿ ವಿಶೇಷವಾದಂಥ ಯೋಜನೆಯೊಂದನ್ನು ತಯಾರು ಮಾಡಿದ್ದೇವೆ. ಆದರೆ ಎಲ್ಲಾ ಯೋಜನೆಗಳನ್ನು ಒಂದೇ ವರ್ಷದಲ್ಲಿ ನಿರ್ವಹಿಸಲು ಸಾಧ್ಯವಿಲ್ಲದ ಕಾರಣ ಕೆಲವು ಆಯ್ದ ಸ್ಲಂಗಳನ್ನು ಡೆವೆಲಪ್‌ಮೆಂಟ್‌ಗೋಸ್ಕರ ತೆಗೆದುಕೊಂಡಂಥ ಕಾಲದಲ್ಲಿ, ತಾವು ಹೇಳಿದಂತೆ ಅಲ್ಲಿಯ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವ ಬಗ್ಗೆಯೂ ಕೂಡ ನಮ್ಮ ಗಮನವನ್ನು ಹರಿಸುತ್ತೇವೆ ಎಂದು ಹೇಳುತ್ತೇನೆ.

ಮಾನ್ಯ ಬಚ್ಚೇಗೌಡರು ಮತ್ತು ಬೆಲ್ಲದ್‌ರವರು ಪಶುಸಂಗೋಪನೆಯ ವಿಚಾರದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಬೇಕು ಎಂದು ಹೇಳಿದರು. ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಉಳಿದ ರಾಜ್ಯಗಳಲ್ಲಿ ಇದರ ಬಗ್ಗೆ ಏನು ನಡವಳಿಕೆಗಳು ನಡೆದಿವೆ ಎನ್ನತಕ್ಕ ಮಾಹಿತಿಯನ್ನು ನಾವು ಸಂಗ್ರಹ ಮಾಡಿದ್ದೇವೆ. ಆ ಮಾಹಿತಿಯ ಆಧಾರದ ಮೇಲೆ ಮುಂದಿನ ದಿನಗಳಲ್ಲಿ ಇದರ ಬಗ್ಗೆ ನಾವು ಯೋಗ್ಯವಾದಂಥ ಒಂದು ನಿರ್ಣಯವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳಲ್ಲಿ ರಾಜ್ಯದಲ್ಲಿ ಅತ್ಯಂತ ತ್ವರಿತಗತಿಯಲ್ಲಿ ಕಾರ್ಯನಿರ್ವಹಣೆಯಾಗಿದೆ. ಆದರೆ ಈ ಯೋಜನೆಗಳಲ್ಲಿ ಮನೆಗಳನ್ನು ತಾಲ್ಲೂಕುವಾರು ಕೊಡುವುದರಿಂದ ತೊಂದರೆಯಾಗಿದೆ. ಒಂದು ಉದಾಹರಣೆ ಹೇಳುವುದಾದರೆ, ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳು, ಆರು ಕಾನ್‌ಸ್ಟಿಟ್ಯೂಯೆನ್ಸಿಗಳಿವೆ. ಮನೆಗಳನ್ನು ಕ್ಷೇತ್ರವಾರು ಅಥವಾ ಪ್ರಜಾಸಂಖ್ಯಾವಾರು ಕೊಡಬೇಕು. ಒಬ್ಬ ಎಂ.ಎಲ್.ಎ. ಕ್ಷೇತ್ರದಲ್ಲಿ ಒಂದೂವರೆ ಸಾವಿರ ಮನೆಗಳು ಸಿಕ್ಕರೆ, ನಮ್ಮ ಕ್ಷೇತ್ರಗಳಲ್ಲಿ 300 ಮನೆಗಳು ಸಿಗುತ್ತಿವೆ. ಆದ್ದರಿಂದ ಕ್ಷೇತ್ರವಾರು ಕೊಟ್ಟರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಒಬ್ಬರಿಗೆ ಒಂದೂವರೆ ಸಾವಿರ ಸಿಗುತ್ತವೆ, ಇನ್ನೊಬ್ಬರಿಗೆ 500 ಮತ್ತೊಬ್ಬರಿಗೆ 300 ಸಿಗುತ್ತದೆ. ಆದ್ದರಿಂದ ಕ್ಷೇತ್ರವಾರು ಕೊಡುವಂಥ ನಿರ್ಣಯವನ್ನು ಮಾಡಬೇಕಾಗುತ್ತದೆ.

ಅಧ್ಯಕ್ಷರು : ಆಯಿತು, ತಮ್ಮ ಅಭಿಪ್ರಾಯದಂತೆ ಆಶ್ರಯ ಮನೆಗಳನ್ನು ಕ್ಷೇತ್ರವಾರು ಕೊಡಬೇಕು. ಹಾಗೇ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ ನೋಡಿ.

ಶ್ರೀ ಬಿ.ಆರ್. ನೀಲಕಂಠಪ್ಪ : ಹಾಗೆ ಕೊಟ್ಟಿಲ್ಲ.

ಅಧ್ಯಕ್ಷರು : ಚಿಕ್ಕಮಗಳೂರಿನಲ್ಲಿ ಹಾಗೆ ಇಲ್ಲ, ಅದನ್ನು ಸ್ವಲ್ಪ ನೋಡಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈ ಸದನದ ಎಲ್ಲಾ ಸದಸ್ಯರು ಮತ್ತು ಸರ್ಕಾರದ ಗಮನಕ್ಕೆ ಬಂದಿರತಕ್ಕ ವಿಚಾರವೆಂದರೆ ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಪರಿಹಾರಾರ್ಥವಾಗಿ 200 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳಿದರು. ತಾವು ಮೀಸಲಿಟ್ಟಿರುವ ಹಣ ಮುಂದೆ ಬರತಕ್ಕಂಥ ಬೆಳೆಗಳಿಗೆ ಸಂಬಂಧಪಟ್ಟಿದೆ. ಆದರೆ ಈಗಾಗಲೇ ರೈತ ನಷ್ಟವನ್ನು ಹೊಂದಿದ್ದು, ಸಾಲದ ಭಾರವನ್ನು ಹೊತ್ತುಕೊಂಡು ಬಿಟ್ಟಿದ್ದಾನೆ. ಈ ಸಾಲದ ಭಾರವನ್ನು ಹೊತ್ತಿರುವುದರಿಂದಲೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದಲೇ,

ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿ ಎಂದು ನಾವೆಲ್ಲರೂ ಒತ್ತಾಯ ಮಾಡುತ್ತಿದ್ದೇವೆ. ನಾವು ಸರ್ಕಾರದಲ್ಲಿದ್ದಾಗ ಮಾಡದೇ ಇದ್ದಂಥ ಕೆಲಸವನ್ನು ನೀವು ಮಾಡಿ ಎಂದು ನಾನು ಹೇಳುತ್ತಿಲ್ಲ. ನಾವು ಎರಡು ಸಾರಿ ಮಾಡಿದ್ದೇವೆ. ಹೀಗೆ ಮಾಡುವುದರಿಂದ ರೈತನ ಮನಸ್ಸಿಗೆ ನೆಮ್ಮದಿ ಬರುತ್ತದೆ. ಮುಂದೆ ನಾನು ಬದುಕಬಹುದು, ನನ್ನ ಸಾಲದ ಭಾರವನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಕಿಂಚಿತ್ತಾದರೂ ನೆರವಾಗುತ್ತಿದೆ ಎಂದು ಅವನ ಮೇಲೆ ಸೈಕಲಾಜಿಕಲ್‌ಆಗಿ ಪರಿಣಾಮ ಬೀರುತ್ತದೆ. ಆ ಕಾರಣದಿಂದ, ರೈತರ ಸಾಲದ ಮೇಲಿರತಕ್ಕಂಥ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಬೇಕು ಎಂದು ನಾನು ತಮ್ಮಲ್ಲಿ ಆಗ್ರಹಪೂರ್ವಕವಾಗಿ ವಿನಂತಿಸುತ್ತಿದ್ದೇನೆ. ಇದು ಬಹಳ ಮುಖ್ಯವಾದ ವಿಚಾರ. ಇದಕ್ಕೆ ಉತ್ತರ ಕೊಡಬೇಕೆಂದು ಕೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ನಾಲ್ಕು ಜನ ವಿಷ ಕುಡಿದಿದ್ದು, ಮೂವರು ಸತ್ತಿದ್ದಾರೆ. ಆದ್ದರಿಂದ ಇದನ್ನು ನಾವು ಹೇಳಲೇಬೇಕಾಗುತ್ತದೆ. ಮತ್ತು ರಾಯಚೂರು ಜಿಲ್ಲೆಯ ಕೆಲವು ಕಡೆಗಳಲ್ಲಿ ರೈತರ ಮೇಲೆ ಹಾಕಿರುವ ಕೇಸ್‌ಗಳನ್ನು ಪರಿಶೀಲನೆ ಮಾಡುತ್ತೇವೆ ಎಂದು ಗೃಹಮಂತ್ರಿಗಳು ಹೇಳಿದ್ದಾರೆ. ಆ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಿ ಎಂದೂ ಸಹ ಮೊದಲೇ ಹೇಳಿದ್ದೇವೆ. ಇದ್ಯಾವುದಕ್ಕೂ ಉತ್ತರವಿಲ್ಲ. ಇದಕ್ಕೆ ನಾವು ಏನು ಹೇಳಬೇಕಾಗುತ್ತದೆ. ಇದನ್ನು ನಾವು ಪ್ರತಿಭಟಿಸಿ ಹೊರಗೆ ಹೋಗಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಅವಕಾಶ ಕೊಡದಂತೆ, ದಯವಿಟ್ಟು ಅದಕ್ಕೆ ಉತ್ತರ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಇದು ಮೇಲ್ಮನೆಗೆ ಹೋಗಿ ಅಲ್ಲಿ ಪಾಸ್ ಆಗಿ ಬರಬೇಕು. ಇನ್ನೆರಡು ತಿಂಗಳು ಬಿಟ್ಟು ಮತ್ತೆ ಬರುತ್ತದಲ್ಲಾ, ಆಗ ಕೇಳಿ, ಈಗ ಇಷ್ಟು ಸಾಕು.

ಶ್ರೀ ಸಿ. ಬೈರೇಗೌಡ : ಒಂದು ಸಾರಿಯಲ್ಲ, ಅನೇಕ ಸಾರಿ ನಾವು ಸರ್ಕಾರವನ್ನು ಒಲಿಸತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಈಗಲೂ ಹೇಳುತ್ತಿದ್ದೇವೆ. ಮಾನಸಿಕವಾದಂಥ ನೆಮ್ಮದಿಯಾದರೂ ರೈತರಿಗೆ ಸಿಗಲಿ ಎಂದು ಹೇಳುತ್ತಿದ್ದೇವೆ.

ಅಧ್ಯಕ್ಷರು : ಅದನ್ನು ಅವರೊಬ್ಬರೇ ಮಾಡುವುದಕ್ಕಾಗುವುದಿಲ್ಲ. ನೀವೆಲ್ಲರೂ ಸೇರಿ ಮಾಡಬೇಕಾಗುತ್ತದೆ. ಸರ್ಕಾರ, ವಿರೋಧ ಪಕ್ಷದವರು ಎಲ್ಲರೂ ಸೇರಿ ಅವರನ್ನು ಮಾನಸಿಕವಾಗಿ ತಯಾರು ಮಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಇದನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಸಂಯುಕ್ತ ಜನತಾ ದಳದ ಸದಸ್ಯರು ಬೈರೇಗೌಡರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ರೈತರ ಪರವಾದ ಸರ್ಕಾರ ಎಂದು ಹೇಳುತ್ತಾರೆ. ಇವರಿಗೆ ನಿಜವಾಗಿ ರೈತರ ಪರವಾಗಿ ಕಾಳಜಿ ಇದ್ದಿದ್ದರೆ ಬಡ್ಡಿ ಮನ್ನಾವನ್ನು ಘೋಷಣೆ ಮಾಡಬೇಕಾಗಿತ್ತು. ಉತ್ತರ ಕೊಡುವಾಗ ಅದನ್ನು ಹೇಳಬೇಕಾಗಿತ್ತು. ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ, ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಬೇಕು.

(ಗೊಂದಲ)

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಹತ್ತು ಲಕ್ಷ ಜನ ಬಡವರಿಗೆ ನೀಡಿರುವ ಹಸಿರು ಕಾರ್ಡ್‌ನ್ನು ರದ್ದು ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಬಡವರ ಪರ ಇರುವ ಸರ್ಕಾರವೇ? ಇವುಗಳಿಗೆಲ್ಲಾ ಈ ಸರ್ಕಾರದಲ್ಲಿ ಉತ್ತರವಿಲ್ಲ. ಇದಕ್ಕೆ ಉತ್ತರ ಹೇಳಬೇಕು. ಸಾರಾಯಿ ದೊರೆಗಳಿಂದ ಬರಬೇಕಾದ ಬಾಕಿಯನ್ನು ವಸೂಲು ಮಾಡುವ ದೃಢ ಸಂಕಲ್ಪವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಶೇ.21 ರಷ್ಟು ಹೆಚ್ಚಿಗೆ ಆಗಿದೆ ಎಂದು ಹೇಳಿದರು, ಕರಸಮಾಧಾನ ಯೋಜನೆ ಇನ್ನೂ ಲೀಗಲ್ ಆಗಿ ಫೈನಲೈಸ್ ಆಗಿಲ್ಲ ಎಂದು ಹೇಳಿದರು. ಆದರೂ ಪದೇಪದೇ ಅದನ್ನೇ ಹೇಳುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ವಸತಿ ಯೋಜನೆಯಲ್ಲಿ ಬಾಕಿ ಇರತಕ್ಕಂಥ ಹಣವನ್ನು ಇನ್ನೂ ಕೊಟ್ಟಿಲ್ಲ. ನನ್ನ ಕ್ಷೇತ್ರದಲ್ಲಿ ತಾಲ್ಲೂಕು ಪಂಚಾಯಿತಿ ಕಛೇರಿಯನ್ನು ಮುತ್ತಿಗೆ ಹಾಕಿದ್ದಾರೆ. ಬಡವರ ಪರವಾಗಿರತಕ್ಕಂಥ ಈ ನಿಲುವನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಕಟಣೆ ಮಾಡುತ್ತಾರೆಂದು ನಾವು ತಿಳಿದಿದ್ದೆವು. ಇದ್ಯಾವುದರ ಬಗ್ಗೆ ಸುಳಿವೂ ಕೂಡ ಇಲ್ಲ. ರೈತರ ವಿರೋಧಿಯಾಗಿರತಕ್ಕಂಥ ಬಜೆಟ್ ಇದು. ಅದರ ಬಗ್ಗೆ ಸರಿಯಾದಂಥ ಕ್ಲಾರಿಫಿಕೇಷನ್ ಅನ್ನು ಅವರು ಹೇಳಲಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವುಗಳಿಗೆ ಉತ್ತರವನ್ನು ಕೊಡುವ ಪ್ರಯತ್ನವನ್ನು ಮಾಡುತ್ತಿಲ್ಲ. ಸಮಗ್ರವಾಗಿ ಉತ್ತರ ಕೊಡಲು ಸರ್ಕಾರಕ್ಕೆ ಮನಸ್ಸಿಲ್ಲ. ಬಡವರ ವಿರೋಧಿಯಾಗಿದ್ದುಕೊಂಡು, ಸದಸ್ಯರುಗಳಿಗೆ ಉತ್ತರ ಕೊಡುವ ಪ್ರಯತ್ನವನ್ನು ಮಾಡುತ್ತಿಲ್ಲ. ಉತ್ತರ ಕೊಡುವಂಥ ಸೌಜನ್ಯ ಕೂಡ ಈ ಸರ್ಕಾರಕ್ಕೆ ಇಲ್ಲ. ನಿಮ್ಮ ಈ ನೀತಿ, ರೈತ ವಿರೋಧಿ ನೀತಿ, ಸರ್ಕಾರಕ್ಕೆ ಲಿಕ್ಕರ್ ಲಾಬಿಗೆ ಮಣಿದಿದೆ, ಅವರಿಂದ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುವ ವ್ಯವಸ್ಥೆ ನಡೆದಿಲ್ಲ, ನಿಮ್ಮ ಬಜೆಟ್ ರೈತ ವಿರೋಧಿ ಬಜೆಟ್, ಬಿಯರ್‌ಗಳನ್ನು ಅಂಗಡಿಗಳಲ್ಲಿ ಮಾತ್ರವಲ್ಲ, ವಿಧಾನಸೌಧದ ಲಾಂಜ್‌ನಲ್ಲಿ ಮಾರಾಟ ಮಾಡಿ. ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಡಿ.ವಿ. ಸದಾನಂದಗೌಡರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ಚೆನ್ನಿಗಪ್ಪನವರೇ, ಕ್ಲಾರಿಫಿಕೇಷನ್ ಕೇಳಿ. ತಮ್ಮದೇ ಕೊನೆಯದು.

ಶ್ರೀ ಸಿ. ಚೆನ್ನಿಗಪ್ಪ : ಇವತ್ತು ಮಾನ್ಯ ಮುಖ್ಯಮಂತ್ರಿಗಳು ರೈತರ ಪರವಾಗಿ ಅನೇಕ ವಿಚಾರಗಳಲ್ಲಿ ಉತ್ತಮವಾದ ಸಲಹೆಗಳನ್ನು ಕೊಟ್ಟು ರೈತರಿಗೆ ಅನುಕೂಲವಾಗುವ ಹಾಗೆ ಮಾಡಿದ್ದಾರೆ. ನಾನು ಒಂದು ವಿಚಾರವನ್ನು ಹೇಳುವುದು ಏನೆಂದರೆ, ರೈತರ ಹೊಲ ಮತ್ತು ರೈತರ ರಸ್ತೆಗಳ ವಿಚಾರದಲ್ಲಿ ಶೇ.60-40 ಎಂದು ಮಾಡಿದ್ದಾರೆ. ಅದನ್ನು ಶೇ.90 ರಷ್ಟು ಮಾಡಿದರೆ

ರೈತರು ಶೇ.10 ರಷ್ಟನ್ನು ಕಟ್ಟುತ್ತಾರೆ. ಈಗ ನಾನು ಈ ವಿಚಾರದಲ್ಲಿ ಸರ್ಕಾರ ಮಾಡಿರುವುದನ್ನು ಶ್ಲಾಘಿಸುತ್ತೇನೆ. ದಯವಿಟ್ಟು ಇದನ್ನು ಮಾಡಿಕೊಡಬೇಕು ಎಂದು ರೈತರ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಕೇಂದ್ರದಲ್ಲಿರುವ ಬಿ.ಜೆ.ಪಿ. ಸರ್ಕಾರ ರಕ್ಷಣಾ ವ್ಯವಹಾರದಲ್ಲಿ ಅಷ್ಟೊಂದು ಹಗರಣವನ್ನು ಮಾಡಿರುವಾಗ, ಅದರ ಸದಸ್ಯರು ಯಾವುದೇ ಮಾತನ್ನು ಈ ರಾಜ್ಯಕ್ಕೆ ಅಥವಾ ರಾಷ್ಟ್ರಕ್ಕೆ ಹೇಳುವಂಥ ಯಾವುದೇ ವಿಧವಾದಂಥ ನೈತಿಕ ಹೊಣೆಯಿಲ್ಲ. ದಯಮಾಡಿ, ಕೇಂದ್ರ ಸರ್ಕಾರವನ್ನು ಕೂಡಲೇ ವಜಾ ಮಾಡಬೇಕು ಎಂದು ನಾನು ಜಾತ್ಯಾತೀತ ಜನತಾದಳವಾದ ನಮ್ಮ ಪಕ್ಷದ ವತಿಯಿಂದ ರಾಜ್ಯದ ಪರವಾಗಿ ಮತ್ತು ರಾಷ್ಟ್ರದ ಪರವಾಗಿ ರಾಷ್ಟ್ರಪತಿಗಳಲ್ಲಿ ವಿನಂತಿಯನ್ನು ಮಾಡುತ್ತೇನೆ.

ಆಯವ್ಯಯ ಅಂದಾಜುಗಳು 2001-2002

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

> "ದಿನಾಂಕ: 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 53 ರವರೆಗೆ ಮತ್ತು 56 ರಿಂದ 60 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಆಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ನಾನು ಈಗ 2001-2002ನೇ ಸಾಲಿನ ವೆಚ್ಚಕ್ಕಾಗಿ ಅನುದಾನ ಬೇಡಿಕೆಗಳ ಲೇಖಾನುದಾನ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ;

> "ದಿನಾಂಕ: 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 53 ಮತ್ತು 56 ರಿಂದ 60 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಈ ಸಭೆಯು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಲೇಖಾನುದಾನವನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳ
ಪಟ್ಟಿಯನ್ನು ಲಗತ್ತಿಸಲಾಗಿದೆ)